ಶಾಂತಿ

(ಸಾಮಾಜಿಕ ನಾಟಕ)

ಕರ್ತೃ: ಟಿ. ಸದಾಶಿವಯ್ಯ

ಪ್ರಕಾಶಕರು:

ಆನಂದ್ ಬ್ರದರ್ಸ್—ಬೆಂಗಳೂರು

ಆಗಸ್ಟ್ ೧೯೫೦]   [ಬೆಲೆ 1-4-0

ಪ್ರಥಮ ಮುದ್ರಣ ಜೂನ್ ೧೯೪೩
ದ್ವಿತೀಯ ಮುದ್ರಣ ಆಗಸ್ಟ್ ೧೯೫೦

|| ಓಂ ||

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಪರಮಗುರು ಸಾರ್ವಭೌಮ
ಶ್ರೀ ದತ್ತಾತ್ರೇಯ ಶಿಷ್ಯ ಪರಂಪರಾ ಶ್ರೀ ಶಂಕರಾನಂದ ಯೋಗೀಶ್ವರ
ಕರಕಮಲ ಸಂಜಾತ ಶ್ರೀ ಪೂಜ್ಯಗುರುವರ್ಯ ಸಂಕಣ್ಣಾರ್ಯ
ಚಿದಾನಂದರವರ ಪಾದಕಮಲಗಳಲ್ಲಿ
ಅವರ ಪರಮಸನ್ನಿಧಿಯಲ್ಲಿದ್ದ ಪುಣ್ಯದಿನಗಳ ನೆನಪಾಗಿ
ಈ ಕೃತಿಯನ್ನು ಸಮರ್ಪಿಸಿದ್ದೇನೆ.

—**ಸದಾಶಿವ.**

ಪಾತ್ರಗಳು

೧. ಲಿಂಗಪ್ಪಯ್ಯ	— ರಿಟೈರ್ಡ್ ಶಿರಸ್ತೇದಾರ್	೬೨	ವರ್ಷ
೨. ನಂಜುಂಡಯ್ಯ	— ಲಿಂಗಪ್ಪಯ್ಯನವರ ಮಗ ಸೆಕ್ರೆಟೇರಿಯಟ್ ಕ್ಲರ್ಕ್	೩೯	,,
೩. ಸಾವಿತ್ರಮ್ಮ	— ನಂಜುಂಡಯ್ಯನ ಪತ್ನಿ	೩೨	,,
೪. ಸುಂದರ	— ನಂಜುಂಡಯ್ಯ-ಸಾವಿತ್ರಮ್ಮ ಇವರ ಏಕಮಾತ್ರಪುತ್ರ	೧೪	,,
೫. ಸಿಂಗ್ರಿ	— ನಂಜುಂಡಯ್ಯನ ಮನೆ ಆಳು	೧೬	,,
೬. ಸೂರಪ್ಪ	— ರಿಟೈರ್ಡ್ ಪೋಲೀಸ್ ದಫೇದಾರ್ ಲಿಂಗಪ್ಪಯ್ಯನ ಬಾಲ್ಯ ಸ್ನೇಹಿತ	೫೨	,,

---

ಈ ನಾಟಕವನ್ನು ದೇಶೀಯ ವಿದ್ಯಾಶಾಲೆಯಲ್ಲಿ
ಮೊಟ್ಟಮೊದಲು ಶಂಕರಪುರದ ಸಾಹಿತ್ಯ ಸಂಘದ ಸಹಾಯಾರ್ಥವಾಗಿ
"ರಂಗಮಂದಿರ"ದವರು ೧೯೪೫ರಲ್ಲಿ ಅಭಿನಯಿಸಿದಂದು
ಪಾತ್ರವಹಿಸಿದ್ದವರು :

೧. ಲಿಂಗಪ್ಪಯ್ಯ . . .	ಶ್ರೀ. ಸದಾಶಿವಯ್ಯ
೨. ನಂಜುಂಡಯ್ಯ . . .	ಶ್ರೀ. ಪಿ. ಆರ್. ಶ್ರೀಕಂಠಯ್ಯ
೩. ಸಾವಿತ್ರಮ್ಮ . . .	ಶ್ರೀ. ವಿ. ನಾಗಭೂಷಣ, ಬಿ.ಎಸ್‌ಸಿ.ಬಿ.ಇ.,
೪. ಸುಂದರ	ಶ್ರೀ. ಸಿ. ಎಲ್. ನಾರಾಯಣ್, ಬಿ.ಎಸ್.ಸಿ.
೫. ಸಿಂಗ್ರಿ	ಶ್ರೀ. ಎಂ. ಆರ್. ಆರ್. ಪ್ರಸಾದ್
೬. ಸೂರಪ್ಪ	ಶ್ರೀ. ಬಿ ರಾಮಮೂರ್ತಿ

ಪ್ರವೇಶ ಒಂದು

[ನಂಜುಂಡಯ್ಯನ ಮನೆಯ ಹಜಾರ. ಎದುರುಗಡೆ ಸ್ಕ್ರೀನ್; ಅದರ ಬಲಗಡೆ ತುದಿಯಲ್ಲಿ ಕೀಲು ಬಾಗಿಲು. ಎಡಗಡೆ ಪಕ್ಕದಲ್ಲಿ ಒಂದು ಬಾಗಿಲು. ಸ್ಕ್ರೀನ್ ಮೇಲು ಭಾಗದಲ್ಲಿ ಎದುರುಗಡೆ ಕೋದಂಡರಾಮನ ಪಟ; ಅಕ್ಕಪಕ್ಕದಲ್ಲಿ ಲಕ್ಷ್ಮೀ-ಸರಸ್ವತಿಯರ ಪಟಗಳು. ಬಲಗಡೆ ಕೊನೆಯಲ್ಲಿ ದತ್ತಾತ್ರೇಯರ ಪಟ; ಎಡಗಡೆಯಲ್ಲಿ ಆದಿಶಂಕರಾಚಾರ್ಯರ ಪಟ. ಮಧ್ಯೆ ಒಂದು ಗುಂಡು ಮೇಜೂ, ಸುತ್ತಲೂ ನಾಲ್ಕು ಕುರ್ಚಿಗಳೂ ಇವೆ. ಮೇಜಿನ ಮೇಲೆ ಕೆಲವು ಪುಸ್ತಕಗಳೂ ಮಾಸಪತ್ರಿಕೆಗಳೂ ಇವೆ. ಆರಾಮದ ಕುರ್ಚಿಯ ಮೇಲೆ ವೃದ್ಧನಾದರೂ ತಾರುಣ್ಯದ ಉತ್ಸಾಹಾನಂದಗಳಿಂದ ತುಂಬಿದ ಲಿಂಗಪ್ಪಯ್ಯನು ಪಸನ್ನಮುಖಿಯಾಗಿ ಕುಳಿತಿದ್ದಾನೆ. ಕೈಯಲ್ಲಿ ಅನುಭವಾಮೃತ. ಪಕ್ಕದಲ್ಲಿ ಹಳೆಯ ಖಾಕಿ ಅಂಗಿಯನ್ನು ಧರಿಸಿದ ಹುರಿ ಮೀಸೆಯ ಸೂರಪ್ಪನು ಕಾಲುಮಣೆಯೊಂದರ ಮೇಲೆ ಕುಳಿತಿದ್ದಾನೆ. ಬೆಳಿಗ್ಗೆ ಒಂಬತ್ತು ಘಂಟೆಯ ಸಮಯ.]

ಲಿಂಗಪ್ಪಯ್ಯ :— ನೋಡಿದೆಯಾ ಸೂರಪ್ಪಾ!

ಬಂದು ಸುಖದುಃಖಗಳನನುಭ |
ಲ್ಲಿಂದು ಬಿಟ್ಟವನಲ್ಲ; ಮುಂದಿನ |
ದೊಂದನೂ ತಾ ಬಯಸ; ಹೋದುದನೆನೆಯದರಿಂದೆ ||
ಕಂದ ಬಾಲಕರೊಡನೆ ಬಾಲಕ |
ರಂವದಲಿ, ಹಿರಿಯರಲಿ ಹಿರಿಯರ |
ಚಂದದಲಿ, ತೋರುವನು ಸೋಪಾಧಿಕದ ಮಣಿಯಂತೆ ||

ಇದು ಸಾಧುವಿನ ಸ್ವಭಾವ. ಇಂಥ ಸ್ಥಿತಿಯಲ್ಲಿ ಸಂಪೂರ್ಣ ಶಾಂತಿ ಆವಾಸವಾಗಿರುತ್ತೆ. ಈ ಸ್ಥಿತಿ ಮೊದಲು ಮೊದಲು ಕ್ಷಣಿಕವಾಗಿದ್ದು, ಶ್ರದ್ಧಾ ಸಾಧನಗಳ ಬಲಿಯುದಿಂದ ದೀರ್ಘಕಾಲ ನಿಲ್ಲುತ್ತಾ, ಕಡೆಗೆ ಅದೇ ಸಹಜವಾಗಿ ಪರಿಣಮಿಸಿ, ನೆಲೆಯಾಗುತ್ತೆ.

ಸೂರಪ್ಪ :— ಕ್ಷಣಿಕವಾಗಿದದ್ದು ಶಾಶ್ವತ ಹೇಗಾಗುತ್ತೆ?

ಲಿಂಗ:—ನೋಡೂ! ಈಗ ನಶ್ಯದ ಅಭ್ಯಾಸವಿಲ್ಲದವನ ಮೂಗಿನ ಬಳಿ ಒಂದು ಚಿಟಿಕೆ ಪುಡಿ ಸೋಕಿದರೆ ಸಾಕು, ಅವನ ಮೂಗು ಬೆದರಿ, ರೇಗಿ, ಸೀತು ಆ ಚಿಟಿಕೇನ ತಳ್ಳಿಹಾಕುತ್ತೆ. ಹೌದೋ ಅಲ್ಲವೋ?

ಸೂರ:—ಅಕ್ಷರಶಃ ಹೌದು.

ಲಿಂಗ:—ಆದರೆ, ಸಹವಾಸ ಬಲಿಯುದಿಂದ, ಅವನ ಅನುಭವಿ ಸ್ನೇಹಿತನ ಒತ್ತಾಯ ಹೆಚ್ಚಿ, ಬರುಬರುತ್ತಾ ಪುಡಿಯು ಮೂಗನ್ನ ಸೋಕಿದಾಗ ನರಮಂಡಲದ ದಂಗೆಯ ಆರ್ಭಟ ಕಡಿಮೆಯಾಗುತ್ತಾ, ಒಂದೆರಡು ತಿಂಗಳಲ್ಲೇ ಕಾಡಾನೆ ಕೌಲೇಬಸವನಾದ ಹಾಗೆ ಸಾಧುವಾಗಿ, ಒಳಕ್ಕೆ ಪುಡಿಯನ್ನ ತುರುಕಿದರೂ ತೆಪ್ಪಗಿರುತ್ತೆ. ಇನ್ನ ಮುಂದೆ ಹೋಗುತಾ ಹೋಗುತಾ ಕಣ್ಣು ಮಂಕಾಗಿ, ಮೂಗು ಕಟ್ಟಿಹೋಗಿ, ತಿಂದೂ ಕುಡಿದೂ ಮಾಡೋ ಬಾಯೇ ಉಸಿರಾಡಿಸೋ ಕೆಲಸಾನೂ ಮಾಡಬೇಕಾಗಿ ಬಂದು, ಈ ಅನಿಷ್ಟ ಪುಡೀನ ಮೂಗಿನ ಹೊಳ್ಳೆಗಳಿಗೆ ತುಂಬುತ್ತಿರುವುದೇ ಸ್ವಭಾವವಾಗಿ ಹೋಗಿ, ಕಡೆಗೆ, ಒಂದು ಕ್ಷಣ ಆ ಪುಡಿ ಸಿಗದಿದ್ದರೆ ಬುದ್ಧಿಭ್ರಮಣೆಯಾಗಿ, ಕಟ್ಟಕಡೆಗೆ ಆ ಮನುಷ್ಯ ಒಂದು ಚಿಟಿಕೆ ಪುಡಿಗಾಗಿ ಆತ್ಮಹತ್ಯೆ ಮಾಡಿಕೊಳ್ಳೋದಕ್ಕೆ ಸಹಾ ಕಾರಣವಾಗಬಹುದು. ಹೌದೋ ಅಲ್ಲವೋ?

ಸೂರಪ್ಪ:—ನೀವು ಹೇಳಿದ್ದರಲ್ಲಿ ಮುಕ್ಕಾಲು ಮೂರುವೀಸೆಪಾಲು ನಿಜ.

ಲಿಂಗಪ್ಪಯ್ಯ:—ಅಷ್ಟೇಯೇ? ಇಲ್ಲಿ ನೋಡೂ. ಸಾವಿರದೊಂಬೈನೂರಲ್ಲಿ ನಾನೂ ನೀನೂ ಗುಬ್ಬಿಲಿದ್ದವಲ್ಲಾ?—ಆಗ ಆ ಚಿಕ್ಕಣ್ಣನ ಗರುಡಿಗೆ ಹೋಗುತ್ತಿರಲಿಲ್ಲವೇ?

ಸೂರಪ್ಪ:—ಆ ಕುಂಟ ಚಿಕ್ಕಣ್ಣನ ಗರಡೀಗೇ—ಕುಂಬಾರರ ಪೇಟೇಲೀ?

ಲಿಂಗಪ್ಪಯ್ಯ:—ಹೌದು ಹೌದು. ಆಗ ಮೊದಲನೇ ದಿನ ಸಾಮ್ ಷುರು ಮಾಡಿದಾಗ, ಇನ್ನೂರು ದಂಡೆ, ನಾನ್ನೂರು ಬೈಠಕ್ ಹೊಡೆದದ್ದಕ್ಕೇ, ನೀನು ಎಂಟು ದಿನ ಡ್ರೆಸ್ ಹಾಕಿಕೊಳ್ಳೋದಕ್ಕೆ ಆಗದೆ, ಮೈ ಕೈಕಾಲು ನೋವು, ಮಂಡಿ ಮಡಿಸೋಕ್ಕಾಗೋದಿಲ್ಲ, ನಡೆಯೋದಕ್ಕೆ ಆಗೋದಿಲ್ಲಾಂತ ಹೇಳಿ ರಜಾ ತಗೊಂಡದ್ದು ಜ್ಞಾಪಕವಿದೆಯೇ?

ಸೂರ:- ನೀವು ಹಾಸ್ಯಮಾಡುತ್ತೀರಷ್ಟೆ. ಎಂಟು ದಿನವೂ ರಜಾ ತಗೊಳ್ಳಲಿಲ್ಲ; ಆರು ದಿನವೂ ತಗೊಳ್ಳಲಿಲ್ಲ. ಮೊದಲೆರಡು ದಿನ ರಜಾ ತಗೊಂಡೆ. ಆ ಮೇಲೆ ಬರುಬರುತ್ತಾ ನೋವು ಬಿಟ್ಟುಹೋಯಿತು— ಅಲ್ಲಾ ಲಿಂಗಪ್ಪಯ್ಯನವರೇ! ನಾನು ಮೂರನೆಯ ವರುಷ ಆ ಚಿಕ್ಕಣ್ಣನ ಮಗ ಚಿಕ್ಕರಂಗನ ಸಂಗಡ ಹಟಕಟ್ಟಿ, ಸಾವಿರ ದಂಡೆ, ಎರಡು ಸಾವಿರ ಬೈಠಕ್ ಹೊಡೆದು ಆವನಿಂದ ಉಂಗುರ ಗೆದ್ದದ್ದು- ಜ್ಞಾಪಕವಿಲ್ಲವೇ?

ಲಿಂಗ:— ಜ್ಞಾಪಕವಿಲ್ಲದೆ ಏನಯ್ಯಾ! ಈವತ್ತು ಕಣ್ಣು ಮುಂದೆ ನಡೆದಷ್ಟು ಚೆನ್ನಾಗಿ ಜ್ಞಾಪಕವಿದೆ....ನೋಡಪ್ಪಾ! ಈಗ ನಿನಗೇ ನನ್ನ ಮಾತಿನ ಅನುಭವ ಇದ್ದಹಾಗಾಯಿತು. ನಾನು ಹೇಳಿದ ಉದಾಹರಣೆ ಮನೋದೇಹಗಳನ್ನ ಕೆಡಿಸೋ ವಿಚಾರಕ್ಕಾಯಿತು. ಅಂತೂ, ಸಾಧನೆ ಯಿಂದ, ಎಡಬಿಡದೆ ಮಾಡುವ ಶ್ರದ್ಧಾಪೂರ್ಣವಾದ ಅಭ್ಯಾಸದಿಂದ ಮನಸ್ಸು ಮೈಗಳನ್ನ ತಿದ್ದಬಹುದೂಂತ ಆಯಿತು ಹೌದೋ ಅಲ್ಲವೋ?

ಸೂರ: -ಹೌದು.

ಲಿಂಗ:—ಹಾಗೇ ನೋಡಪ್ಪ ಈ ಶಾಂತಿಯ ವಿಚಾರಾನೂವೇ. ಈಗ ದೊಂಬರವನು ಹಗ್ಗದಮೇಲೆ ನಡೆಯುವುದನ್ನ ಕಲಿಯುವಾಗ ಕೆಳಗಡೆ ಮರಳು ಹಾಸಿ, ಕೈಲಿ ದೊಡ್ಡ ಗಳು ಹಿಡಿದುಕೊಂಡು, ಮೆಲ್ಲಗೆ ನಡೀತಾ ನಡೀತಾ, ಕಡೇಗೆ ಕಣಿವೇ ಮೇಲೆ ಕಟ್ಟಿರೋ ಹಗ್ಗದ ಮೇಲಾದರೂ ಸಹ ಕೈಬೀಸಿಕೊಂಡು, ತಲೆಯ ಮೇಲೆ ಕರಗ ಹೊತ್ತುಕೊಂಡು, ಬೆನ್ನ ಮೇಲೆ ಮೂಟೆ ಕಟ್ಟಿಕೊಂಡು, ನಾನೂ ನೀನು ನಮ್ಮ ಮನೆ ಅಂಗಳದಲ್ಲಿ ತಿರುಗಾಡುವಷ್ಟು ಶಾಂತನಾಗಿ ನಿಸೂರಾಗಿ ನಡೀತಾ ಹೋಗುತ್ತಾನೆ.

ಸೂರ:—ಹೌದು ಹೌದು.

ಲಿಂಗ:— ಮನಸ್ಸೂ ಅಂಬೋ ದೊಂಬನಿಗೆ ಇದೇ ರೀತಿ ಸಾಧನೆ ಸಿಗುತ್ತಾ ಬಂದರೆ, ಕಡೆಗೆ ಈ ಜಗತ್ತಿನ ಎಂಥ ಝುಂಝೂವಾತಗಳು ಜಗ್ಗಿಸಿದರೂ, ಸ್ವಲ್ಪಾನೂ ಜರುಗದೇ, ಶಾಂತವಾಗಿರೋದೇ ತನ್ನ ಸ್ವಭಾವವಾಗಿ, ಲಕ್ಷಣವಾಗಿ ನಿಂತುಬಿಡುತ್ತೆ.

ಸೂರ :—ಹೌದೂ! ಈ ರೀತಿಯಾದ ಸಾಧನೆಗೆ ಉಪಾಯಗಳೇ ಇಲ್ಲವೆ?

ಲಿಂಗ :—ಉಪಾಯಗಳಿಗೇನು ಕಡಿಮೆ ಸೂರಪ್ಪ! ಬೇಕಾದಷ್ಟಿವೆ. ಇವುಗಳಲ್ಲಿ ಮುಖ್ಯವಾದದ್ದೂ ಅಂದರೆ– ನಮ್ಮ ಪ್ರತಿಯೊಂದು ಪೂಜೆ ಪುನಸ್ಕಾರಗಳ ಕಡೇಲು ಹೇಳುತೀವಲ್ಲ "ಓಂ ತತ್‌ಸತ್, ಸರ್ವಂ ಶ್ರೀ ಬ್ರಹ್ಮಾರ್ಪಣಮಸ್ತು, ಈಶ್ವರಾರ್ಪಣಮಸ್ತು"—ಅಂತ – ಅದೇ ಮೂಲ ಮಂತ್ರ.

ಸೂರ :—ಅದನ್ನ ನಮ್ಮ ತಾತನ ಕಾಲದಿಂದ ಅಂತಲೇ ಇದೀವಲ್ಲಾ! ಆದರೂ ಶಾಂತಿಮಟ್ಟಿಗೆ ಕಣ್ಮರೆಯಾಗಿಯೇ ಇದೆ?

ಲಿಂಗ :—ಸುಮ್ಮನೆ ಅಂದರೇನೇ ಬಂದುಬಿಡುತ್ತೆಯೇ ಸೂರಪ್ಪ! ಭಾವನೆ ಬೆಳೆಯಬೇಕು. ಈಗ ನೀನು ಕತ್ತಲೆಯ ಮನೇಲಿ ಕೂತುಕೊಂಡು, "ಬೆಳಕೂ, ಬೆಳಕೂ" ಅಂತ ಕಿರಿಚಿಕೊಂಡಾಕ್ಷಣಕ್ಕೇ ಅಲ್ಲಿಗೆ ಬೆಳಕಾಗಿ ಬಿಡುತ್ತೆಯೇ? ಹೋಗಿ ದೀವಟಿಗೆ ತಂದು ಹೊತ್ತಿಸಿಟ್ಟರೆ ಬೆಳಕಾಗುತ್ತೆ. ಈಗ ನೋಡು "ಓಂ ತತ್ಸರ್ವಂ ಬ್ರಹ್ಮಾರ್ಪಣಮಸ್ತು" ಅಂದರೆ ನಾನು ಮಾಡಿದ ಈ ಕರ್ಮ, ಈ ಪೂಜೆ, ಈ ಕಾರ್ಯ ಇದು ಬ್ರಹ್ಮನಿಗೆ ಅರ್ಪಣೆಯಾಗಲಿ–ಅಂದರೆ ಇದರ ಕರ್ತೃತ್ವ ನನ್ನದಲ್ಲ. ಅಂದರೆ ಕೇವಲ ಕಲ್ಯಾಣದೃಷ್ಟಿಯಿಂದ ಈ ಕರ್ಮವನ್ನ ಫಲಾಪೇಕ್ಷೆಯಿಲ್ಲದೆ ಮಾಡಿದ್ದೇನೆ ಅಂತ—ಹೀಗೆಂಬೊ ಭಾವನೆ ಬೆಳೀತಾ ಬರಬೇಕು.

ಸೂರ :—ನನ್ನ ದಪ್ಪತಲೇ ಚಿಪ್ಪಿನಲ್ಲಿ ಈ ಸೂಕ್ಷ್ಮವಾದ ವಿಚಾರ ಹೋಗೊಲ್ಲ ಲಿಂಗಪ್ಪಯ್ಯನವರೇ.

ಲಿಂಗ :—ಬಂದೇ ಇರು ಸೂರಪ್ಪ. (ಹಿಂದಕ್ಕೆ ತಿರುಗಿ) ಸಾವಿತ್ರಮ್ಮಾ! ಸಾವಿತ್ರೀ!

(ಬಲಗಡೆ ಬಾಗಿಲಿನಿಂದ ಮೂವತ್ತೆರಡು ವರುಷದ ಸೌಮ್ಯ ಮುಖಮುದ್ರೆಯಿಂದ ಕೂಡಿದ ಸಾವಿತ್ರಮ್ಮನು ಸೊಂಟಕ್ಕೆ ಸೆಕ್ಕಿಸಿದ್ದ ಸೆರಗನ್ನು ತೆಗೆದು ಮೂಗಿನ ಮೇಲಿನ ಬೆವರನ್ನು ಒರಿಸಿಕೊಳ್ಳುತ್ತಾ, ಕೆದರಿದ ಮುಂದಲೆಯ ಮುಂಗುರುಳನ್ನು ಬೆರಳುಗಳಿಂದ ನೇವರಿಸಿಕೊಳ್ಳುತ್ತಾ ಪ್ರವೇಶಿಸುವಳು.)

ಸಾವಿ:—ಕೂಗಿದಿರಾ ಮಾವಯ್ಯಾ!

ಲಿಂಗ:—ಹೌದಮ್ಮಾ! ನಿನಗೆ ಒಂದೆರಡು ನಿಮಿಷ ಬಿಡುವಿದೆಯೆ!

ಸಾವಿ:—ಇದೇ ಮಾವಯ್ಯಾ....ಏನು ಮಾಡಬೇಕಾಗಿತ್ತು?

ಲಿಂಗ:—ಹತ್ತುಘಂಟೆ ಅಡುಗೆ ಅವಸರವೇನೋ!

ಸಾವಿ:—ಅನ್ನ ಆಗಿದೆ. ಬೇಳೆ ಬೇಯುತ್ತಾ ಇದೆ. ಸಿಂಗ್ರಿ ತರಕಾರಿ ತರೋವರೆಗೂ ಬಿಡುವಾಗೇ ಇದೆ. ಏನು ಮಾಡಬೇಕಾಗಿತ್ತು. ಹೇಳಿ ಮಾವಯ್ಯಾ!

ಲಿಂಗ:—ಏನೂ ಇಲ್ಲ. ಸೂರಪ್ಪ ತುಂಬ ದಿವಸದ ಮೇಲೆ ನಮ್ಮ ಮನೆಗೆ ಬಂದಿದಾನೆ. ಒಂದೆರಡು ಲೋಟ ಪಾನಕ ಮಾಡೋದಕ್ಕಾಗುತ್ತೆಯೇ ಅಂತ....

ಸಾವಿ:—ಪಾನಕ ಯಾಕೆ, ಕಾಫಿನೇ ಮಾಡತೀನಿ; ಹಾಲು ಹೇಗೂ ಕಾಯುತಾ ಇದೆ.

ಲಿಂಗ:—ಏನು ಸೂರಪ್ಪ! ನಮ್ಮ ಸಾವಿತ್ರಮ್ಮ ಕಾಫಿ ಮಾಡೋದರಲ್ಲಿ ಎಕ್ಸ್‌ಪರ್ಟ್—ಅದ್ವಿತೀಯಳು. ನಿನಗೆ ಕಾಫಿ ಪಥ್ಯವೇನಿಲ್ಲವಲ್ಲ?

ಸೂರ:—ಕಾಫಿ ನಮ್ಮ ಮನೆ ದೇವರು—ಪಥ್ಯ ಹೇಗಾದೀತು.

ಸಾವಿ:—ಹಾಗಾದರೆ ಎರಡು ಲೋಟ ಕಾಫಿ ಮಾಡಿ ತರುತೇನೆ.

ಲಿಂಗ:—ಹಾಗೇ ಮಾಡಮ್ಮ.

ಸೂರ:—ಆದರೆ ಒಂದು ಮಾತಮ್ಮಾ! ನನಗೆ ತರೋ ಕಾಫೀಗೆ ಸಕ್ಕರೆ ಹಾಕದಿದ್ದರೂ ಸರಿಯೇ.

ಲಿಂಗ:—ಸೂರಪ್ಪನ ಭಾಗದ ಕಾಫೀಗೆ ಸ್ವಲ್ಪವೇ ಸ್ವಲ್ಪ ಸಕ್ಕರೆ ಹಾಕು.

ಸಾವಿ:—ಆಗಲಿ ಮಾವಯ್ಯಾ! (ಹಸನ್ಮುಖಿಯಾಗಿ ಸೆರಗನ್ನು ಸೊಂಟಕ್ಕೆ ಸಿಕ್ಕಿಸುತ್ತಾ ನಿಷ್ಕ್ರಮಣ)

ಲಿಂಗ:—ಸರೀ ಸೂರಪ್ಪ! ಕಾಫಿ ಬರೋ ವೇಳೆಗೆ ನಿನಗೆ ಇನ್ನೊಂದು ಗುಳಿಗೆ ತಲೆನೋವು ಕೊಟ್ಟು ನನ್ನ ಹರಿಕಥೆ ನಿಲ್ಲಿಸುತ್ತೇನೆ.

ಸೂರ:—ಹಾಗೆ ಯಾಕಂತೀರಿ ಲಿಂಗಪ್ಪಯ್ಯನವರೇ! ವಿಚಾರ ಗಹನವಾದದ್ದರಿಂದ ತಲೆನೋವು ಬರಬೇಕೇ ಹೊರತೂನೂವೆ....ನಿಜವಾಗಿ

ತಿಳಿಯಬೇಕಾದಂಥ ವಿಚಾರಗಳೇ --ಹಾಗಂದರೇನು! ಹೇಳಿ ಹೇಳಿ. ನನಗೆ ಮೊದಲು ಮೊದಲು ಸರ್ವೀಸ್‌ನಲ್ಲಿ ಇದ್ದಾಗ ಈ ವಿಚಾರ ಯಾರಾದರೂ ಆರಂಭಿಸಿದರೂ ಅಂದರೆ ಸಿಡಿದುಬೀಳುತ್ತಿದ್ದೆ--ಅವರ ಮೇಲೆ. ಅಂಥಾವರ ಗುಂಪಿಗೆ ಸೋಮಾರಿಗಳ ಸಂತೇಂತ ಬೈಯ್ಯುತಾ ಇದ್ದೆ. ಈಚೀಚೆಗೆ ನಿಮ್ಮ ಸಹವಾಸದಿಂದ ಸ್ವಲ್ಪ ಸ್ವಲ್ಪ ರುಚಿಸುತಾ ಇದೆ.

ಲಿಂಗ: ಹಾಗೆ ಸಾಧಾರಣವಾಗಿ ಪ್ರಪಂಚದಲ್ಲಿ ಯಾವ ಏಳು-ಬೀಳುಗಳಿಗೂ ಸಹವಾಸ ಅಂಬೋದು ಬಹು ಮುಖ್ಯವಾದದ್ದು. ಹೆಂಡ ಕುಡಿಯುವವರು ಮೊದಲು ಮೊದಲು ಜೊತೆ ಇಲ್ಲದಿದ್ದರೆ ಒದ್ದಾಡಿ ಹೋಗಿಬಿಡುತ್ತಾರೆ. ಕರೆದುಕೊಂಡು ಹೋಗಿ ಕೈಯಿಂದ ದುಡ್ಡು ತೆತ್ತು ಕುಡಿಸಿ ಕುಡೀತಾರೆ! ಹಾಂ! ನಾನು ಏನು ಹೇಳುತ್ತಿದ್ದೆ?....ಹಾಂ! ಹಾಂ! ಕರ್ತೃತ್ವದ ವಿಚಾರ.

ನಾಹಂ ಕರ್ತಾ ಸರ್ವಮೇತದ್ ಬ್ರಹ್ಮೈವ ಕುರುತೇ ಕಥಾ ।
ಏತದ್ ಬ್ರಹ್ಮಾರ್ಪಣಂ ಪ್ರೋಕ್ತಂ ಋಷಿಭಿಸ್ತತ್ವದರ್ಶಿಭಿಃ ॥

ಅಂತಂದರೇ, ಕೆಲಸಮಾಡುತ್ತಿರುವವನು ನಾನಲ್ಲ---ಅಂದರೆ ನಾನು ಕರ್ತೃವಲ್ಲ. ಎಲ್ಲವನ್ನೂ ಈಶ್ವರನೇ ನನ್ನ ಮೂಲಕ ಮಾಡಿಸುತಿದಾನೆ—ಅಂಬೋ ಭಾವನೆ ಇದೆಯಲ್ಲಾ ಇದನ್ನೇ ತತ್ವದರ್ಶಿಗಳಾದ ಋಷಿಗಳು "ಬ್ರಹ್ಮಾರ್ಪಣ, ಬ್ರಹ್ಮಾರ್ಪಣ" ಅಂತ ಕರೆದಿದಾರೆ. ಅಂದರೆ ಯಾವ ರೀತಿ ಗಳುವಿನ ತುಂಡಿನಲ್ಲಿರೊ ಗೆಣ್ಣುಗಳನ್ನ ತೆಗೆದು ಹಾಕಿಬಿಟ್ಟು, ಹೊರಗಿನಿಂದ ಏಳೆಂಟು ಕಣ್ಣುಗಳನ್ನ ಮಾಡಿಬಿಟ್ಟನಂತರ. ಅದಕ್ಕೆ ಆ ಕೃಷ್ಣನ ತುಟಿ ಸೋಕಿದ ಕೂಡಲೆ ಅದರಿಂದ ಪ್ರಪಂಚಾನೇ ಮೈಮರೆಸೋ ಅಂಥ ಗಾನಾಮೃತ ಹೇಗೆ ಹುಟ್ಟುತ್ತದೆಯೋ, ಹಾಗೆ, ಮನುಷ್ಯನ ಮನಸ್ಸಿನಿಂದ "ನಾನು ಮಾಡುವವನೂ" ಅಂಬೋ ಅಹಂಕಾರ ಅಳಿದ ಕೂಡಲೇ ಈಶ್ವರನೇ ಅವನಿಂದ ಜಗತ್ಕಲ್ಯಾಣಕ್ಕಾಗಿ ಪುಣ್ಯ ಕರ್ಮಗಳನ್ನ ಮಾಡಿಸುತ್ತಾ ಹೋಗುತ್ತಾನೆ. ಇದರರಿವೂ ಸಹ ಆ ವ್ಯಕ್ತಿಗೆ ಇರೋದಿಲ್ಲ. ಹೇಗಿರುತ್ತೇ ಆ ಸ್ಥಿತಿ ಅಂತೀಯಾ?....ಈ ಬುಗುರೀ ಬಹು ಜೋರಾಗಿ ತಿರುಗುತ್ತಾ ನಿದ್ದೆ ಮಾಡುತ್ತೇ ಅಂತಾರಲ್ಲಾ--ಹಾಗಿರುತ್ತೆ. ತಿರುಗು

ತ್ತಿರುತ್ತೆ ಬಹು ರಭಸವಾಗಿ--ಆದರೆ ಶಾಂತವಾಗಿರುತ್ತೆ....ಆ Balance.... ಹಾಗಿರುತ್ತೆ.

ಸೂರ:—ಹೌದೂ! ಹೀಗೆ ಶಾಂತಿಯೇ ನಮ್ಮ ಸಹಜಗುಣವಾಗಿ ಸಾಧುಗಳಾಗಿಬಿಟ್ಟರೇ, ಜಗತ್ತಿನ ವ್ಯಾಪಾರ ಹೇಗೆ ನಡೀಬೇಕು? ಕೋಪ, ಆಟೋಪ, ದರ್ಪ, ಅಹಂಕಾರ, ಸಮಯೋಚಿತವಾದ ನಿರ್ದಯ ಈ ಕೆಲವಾದರೂ ಗುಣಗಳಿಲ್ಲದೆ ಹೋದರೆ ರಾಜಕಾರ್ಯ ನಡೆಯೋದೇ ಇಲ್ಲ. ಅದರಲ್ಲೂ ನಮ್ಮ ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಂತೂ ನೀವು ಹೇಳಿದಂಥ ಸಾಧುಗಳೇನಾದರೂ ಆಫೀಸರಾದರೆ, ತಗೊಳ್ಳಿ ನಿಮ್ಮಂಥಾ ಸಾಧುಗಳ ಗೋಳು ಹೇಳೋದಕ್ಕೆ ಬಾರದು; ದೇಶದಲ್ಲೆಲ್ಲಾ ಕಳ್ಳಕಾಕರ ಕಾಟ, ಪುಂಡರ ಬಂಡಾಟ....

ಲಿಂಗ:--ತಡೀ ತಡೀ! ಸ್ವಲ್ಪ ನಿಧಾನಿಸು! ನೋಡು ಸೂರಪ್ಪ! ಸಾಧುವಾದ ಮಾತ್ರಕ್ಕೇ ಕೋಪ, ದರ್ಪ, ಪಟಾಟೋಪ ತೋರಿಸೋ ಶಕ್ತಿ ಹೊರಟುಹೋಗುತ್ತೇನಯ್ಯಾ? ಬೇಕಾದಷ್ಟು ಕೋಪ ತೋರಿಸಬಹುದು; ದರ್ಪ ತೋರಿಸಬಹುದು; ಪಟಾಟೋಪ ತೋರಿಸಬಹುದು. ಅದಕ್ಕೇನೂ ಅಡ್ಡಿಯಿಲ್ಲ--ಅದರಿಂದ ಲೋಕಕಲ್ಯಾಣವಾಗೋ ಪಕ್ಷಕ್ಕೆ....

ಸೂರ:—ಹೌದು! ಶಾಂತಿಯೇ ಸಹಜಗುಣವಾದ ಮೇಲೆ ಕೋಪ ಹೇಗೆ ಬರುತ್ತೇ?

ಲಿಂಗ:--ಕೋಪಾಂಬೋದು ತಾನಾಗಿತಾನು ಬರೋದೂ ಇಲ್ಲ; ಬರಬೇಕಾದ್ದೂ ಇಲ್ಲ; ಕೋಪ ತೋರಿಸಿಬಿಟ್ಟರೆ ಸಾಕು ಅಷ್ಟೇ.

ಸೂರ:--ಅದು ಹೇಗಾಗುತ್ತೆ ಲಿಂಗಪ್ಪಯ್ಯನವರೇ?

ಲಿಂಗ:—ನಾಟಕದಲ್ಲಿ ಆಂಜನೇಯನ ವೇಷ ಹಾಕಿದವನ ಮೇಲೆ ರಾವಣನ ವೇಷ ಹಾಕಿದವನು ಕೋಪಿಸಿಕೊಳ್ಳುವುದಿಲ್ಲವೇ—ಹಾಗೇ....

ಸೂರ:—ಅದು ನಿಜವಾದ ಕೋಪ ಆಗೋಲ್ಲ.

ಲಿಂಗ:—ಬೇಕಿಲ್ಲ. ಈಗ ನೋಡು, ನಿಜವಾದ ಕೋಪದಿಂದ. ಕೋಪಿಸಿಕೊಳ್ಳುವ ಮನುಷ್ಯನಿಗೆ ಎಷ್ಟು ನಷ್ಟ—ಮನಸ್ಸಿಗೆಷ್ಟು ಗಲಿಬಿಲಿ ಇಂಥ ಸ್ಥಿತೀಲಿ ಅಸಹಜವಾದ ಕಾವು ಹುಟ್ಟುತ್ತೆ; ಎದೆಬಡಿತ ವೇಗವಾಗಿ,

ರಕ್ತ ಹೆಚ್ಚಾಗಿ ತಲೆಗೆ ನುಗ್ಗುತ್ತೆ. ಕಣ್ಣುಗುಡ್ಡೆ ಮೇಲಿರುವ ಸಣ್ಣ ಸಣ್ಣ ನಾಳಗಳಲ್ಲಿ ಹೀಗೆ ಏಕ್‌ದಮ್ ಹೆಚ್ಚು ರಕ್ತ ನುಗ್ಗಿದಾಗ, ಅವೆಲ್ಲಾ ಒಡೆದು ಕಣ್ಣುಗಳು ಕೆಂಪೇರುತ್ತವೆ. ಈ ಪರಿಸ್ಥಿತೀಲಿ ಮನುಷ್ಯನು ವಿವೇಚನಾಶೂನ್ಯನಾಗಿ, ಅಸಹಜವಾದ ಅನೇಕ ಅನ್ಯಾಯಗಳನ್ನು ಮಾಡುತ್ತಾನೆ—ಹೌದೋ ಅಲ್ಲವೋ ?

ಸೂರ :—ಹೌದೂ.

ಲಿಂಗ :—ಅದಕ್ಕೆ ಬದಲಾಗಿ ತಾನು ರೇಗದೆ, ಮನಸ್ಸಿನಲ್ಲಿ ಶಾಂತನಾಗೇ ಇದ್ದುಕೊಂಡು, ಕೋಪಾನ ಮುಖದಲ್ಲಿ ಮಟ್ಟಿಗೆ ಧ್ವನಿಯಲ್ಲಿ ಮಟ್ಟಿಗೆ ತೋರ್ಪಡಿಸೋದರಿಂದ—ಅವನ ತಲೆ ತಂಪಾಗಿಯೇ ಇರುತ್ತೆ; ಅಲ್ಲದೆ ಅಸಹಜವಾದ ಅನ್ಯಾಯಗಳು ನಡೆಯುವುದಕ್ಕೆ ಅವಕಾಶವಿಲ್ಲ. ಅಲ್ಲದೆ ಯಾವ ಬಗೆಯ ಅಸಹಜವಾದ ಅವಾಂತರವೂ ನಡೆಯದೆ, ಕಾಣಿಸಿದ ಕೋಪ ತನ್ನ ಕರ್ತವ್ಯ ಮಾಡಿ ಮಾಯವಾಗುತ್ತೆ.

ಸೂರ :—ಇದು ಶುದ್ಧ ಅಸಾಧ್ಯ ಲಿಂಗಪ್ಪಯ್ಯನವರೇ ! ಅಲ್ಲಾ—ಕಳ್ಳನ್ನ, ದರೋಡೆಗಾರನನ್ನ ಅಟ್ಟಿಸಿಕೊಂಡು ಹೋದಾಗ, ಅವನೇನಾದರೂ ಬೈದರೆ, ಹಿಂತಿರುಗಿ ಹೊಡೆದರೆ, ಗಾಯಮಾಡಿದರೆ, ರೋಷ ಉಕ್ಕಿ ಬರದೆ ಇರುತ್ತೆಯೇ ? ಅಥವ ಹಾಗೆ ರೋಷ ಬರದಿದ್ದರೆ, ಕೆಲಸ ತಾನೆ ಆಗುತ್ತೆಯೇ ?

ಲಿಂಗ :—ಈಗ ನೋಡು ಸೂರಪ್ಪ ! ಈಗ ಸಾವಿತ್ರಿ ವಿಚಾರವಾಗಿ ಅಸಾಧ್ಯ ಕೋಪ ತೋರಿಸುತ್ತೇನೆ; ಆದರೆ ನನಗೆ ಆ ಕೋಪದಿಂದ ಪ್ರತಿಕ್ರಿಯೆ ಏನೂ ಆಗುವುದಿಲ್ಲ. ಕಣ್ಣುಗುಡ್ಡೆಗಳ ಮೇಲೆ ಬಿದ್ದು ಕಾಣಿಸುವ ಪರ್ವತದ ದೃಶ್ಯದ ಹಾಗೆ, ಕಾಣಿಸಿ ಕಣ್ಮರೆಯಾಗುತ್ತೆ. (ಸಿಟ್ಟಿಗೆದ್ದವನಂತೆ ಠಣ್ಮನೆ ಕುಳಿತು, ಗಡುಸಧ್ವನಿಯಲ್ಲಿ) ಸಾವಿತ್ರಮ್ಮಾ ! ಸಾವಿತ್ರೀ ! ! ಸಾವಿತ್ರೀ ! ! !

ಸಾವಿ :—(ಬೆದರಿದ ಹುಲ್ಲೆಯಂತೆ ಒಳಬಾಗಿಲಿನಿಂದ ಅಂಜಿ ಓಡಿಬರುವಳು) ಮಾ....ಮಾವ....ಮಾವಯ್ಯಾ ?

ಲಿಂಗ :—ಏನನ್ಯಾಯ ಇದು ! ಎರಡು ಲೋಟ ಕಾಫಿ ಮಾಡೋಕೆ ಇಷ್ಟು ಹೊತ್ತೇ ? ಚೆನ್ನಾಯಿತು. ಚೆನ್ನಾಯಿತು ! ! !

ಸಾವಿ:—ಸೋಸುತಾ ಇದ್ದೆ ಮಾವಯ್ಯಾ; ಈಗ ಸಕ್ಕರೆ ಹಾಕಿ ತಂದುಬಿಡುತ್ತೇನೆ.

ಲಿಂಗ:—ಸಾಕು ನಿನ್ನ ಕಾಫೀ! ಪುಣ್ಯ ಮಾಡಿದ್ದ ಸೂರಪ್ಪ ಈವತ್ತು!

ಸಾವಿ:—(ದುಃಖೋತ್ಕರ್ಷದಿಂದ ಬಿಕ್ಕುತ್ತಾ) ಮಾವಯ್ಯಾ! ಮಾವಯ್ಯಾ! ನೀವು ಹೇಳಿದ ಕೂಡಲೇ ನೀರಿಟ್ಟೆ ಒಲೇಮೇಲೆ. ಅದು ಮರುಳುತ್ತಿದ್ದ ಹಾಗೇ ಪುಡಿ ಹಾಕಿದೆ! ಅದೇ ಕೆಲಸ ಮಾಡುತ್ತಿದ್ದೆ!....ಅಯ್ಯೋ! ನಾನು ಈ ದಿನ ಎದ್ದ ಘಳಿಗೆ ಚೆನ್ನಾಗಿಲ್ಲ! ಬೆಳಿಗ್ಗೆ ಕಾಫೀಗೆ ಅವರು ಬೈದು ಬಚ್ಚಲಿಗೆ ಚೆಲ್ಲಿಬಿಟ್ಟು ಹೋದರು—ಪಾನಕಾ ಮಾಡಿ ಕುಡಿಸಿದೀಯಾಂತ.

ಸೂರ:—ಅಮ್ಮಾ ಸಾವಿತ್ರಮ್ಮಾ! ಲಿಂಗಪ್ಪಯ್ಯನವರು ತಮಾಷಿಗೆ ರೇಗಿದರಮ್ಮಾ, ಅಷ್ಟೇ. ನೀನು ಹೋಗಿ ನಿಧಾನವಾಗಿ ಕಾಫಿ ಮಾಡಿ ತಗೊಂಡು ಬಾ. ಅಯ್ಯೋ ಪಾಪ! ಚೆನ್ನಾಗಿ ನಟನೆ ಮಾಡುತೀರಿ ಲಿಂಗಪ್ಪಯ್ಯನವರೇ!

ಸಾವಿ:—(ಮುಂದೆ ಬಂದೆ) ಹೌ....ಹೌ....ಹೌದೇ....ಮಾವಯ್ಯಾ!

ಲಿಂಗ:—ಹೌದಮ್ಮಾ ಸಾವಿತ್ರೀ! ಸುಳ್ಳುಸುಳ್ಳಾಗಿ ಕೋಪ ತೋರಿಸೋದು ಹೇಗೆ ಅಂಬೋದನ್ನ ಸೂರಪ್ಪನಿಗೆ ತೋರಿಸಿಕೊಡೋದಕ್ಕೋಸ್ಕರ ಹಾಗಂದೆ ಅಷ್ಟೇ.

ಸಾವಿ:—(ಬಿಸಿಲು ಮಳೆ—ಕಣ್ಣೊರಸಿಕೊಂಡು ನಗುತ್ತಾ) ಹಾಗಾದರೆ ನೀವು ನಿಜವಾಗಿಯೂ ಕೋಪಿಸಿಕೊಳ್ಳಲಿಲ್ಲವೇ?

ಲಿಂಗ:—(ಎದ್ದು ಸಾವಿತ್ರಮ್ಮನ ತಲೆಯನ್ನು ನೇವರಿಸುತ್ತಾ) ಅಯ್ಯೋ ನನ್ನಮ್ಮಾ! ನಿನ್ನ ಮೇಲೆ ಕೋಪಿಸಿಕೊಳ್ಳೋ ಪಾಪಿ ಯಾರಮ್ಮಾ! ಹೋಗು. ನಿಧಾನವಾಗಿ ಕಾಫಿ ತಗೊಂಡು ಬಾ! ರಿಟೈರ್ ಆಗಿ ಕೂತಿರೋ ನಮಗೆ ಅಂಥ ರಾಜಕಾರ್ಯ ಯಾವುದು ಕೊಳ್ಳೇ ಹೋಗೋದು.

ಸಾವಿ:—ಈಗ ತಂದೇ ಮಾವಯ್ಯಾ! (ನಗುತ್ತ ಕಣ್ಣೊರಸಿಕೊಂಡು ಒಳಕ್ಕೆ ಹೋಗುವಳು.)

ಸೂರ: - ನನಗೆ ಪಾಠ ಹೇಳಿಕೊಡೋದಕ್ಕೆ ಪಾಪ ಗೌರಮ್ಮನಂಥ ಸೊಸೆಯ ಕಣ್ಣಲ್ಲಿ ನೀರು ತರಿಸಿದಿರಲ್ಲಾ? ಈ ಪಾಪ ನನ್ನ ತಲೆಯ ಮೇಲೇ ತಾನೇ?

ಲಿಂಗ:—ನೋಡೂ! ನಿನಗೆ ನಿಜವಾಗಿಯೂ ನನ್ನ ಮಾತು ಮನ ದಟ್ಟಾಗಿರೋದು ನಿಜವಾದರೆ, ಇದರ ಹತ್ತರಷ್ಟು ಪಾಪ ನಾನು ಹೊತ್ತು ಗೊಳ್ಳುತ್ತೇನೆ.

ಸೂರ:—ದೇವರು ಒಂದೊಂದು ಸಂಸಾರದಲ್ಲಿಯೂ ತಂದು ಜೋಡಿ ಸಿರುವ ವ್ಯಕ್ತಿಗಳ ಗುಂಪನ್ನ ನೋಡಿದಾಗಲೂ ನನಗೆ ಆಶ್ಚರ್ಯವಾಗುತ್ತೆ.

ಲಿಂಗ:—ಹಾಗಂದರೇನು ಸೂರಪ್ಪ?

ಸೂರ:—ಏನೂ ಇಲ್ಲಾ!....ಈಗ ನಿಮ್ಮ ಸ್ವಭಾವಾನೂ, ನಿಮ್ಮ ಮಗ ನಂಜುಂಡಯ್ಯನ ಸ್ವಭಾವಾನೂ ನೋಡಿದರೆ, ಆಕಾಶ ಭೂಮಿ ಗಳಷ್ಟು ಅಂತರ; ರವೆಯಷ್ಟಾದರೂ ಸಾಮ್ಯವಿಲ್ಲ. ಇನ್ನು ನಂಜುಂಡಯ್ಯ ಸಾವಿತ್ರಮ್ಮನವರ ಜೋಡೀಲೋ ಅಜಗಜಾಂತರ ನ್ಯಾಯ. ನಮ್ಮ ಮನೇಲೂ ಹಾಗೇ—ನನ್ನ ದೊಡ್ಡ ಮಗ ರಾಘು ತಂಗಿದ ಕಡೆ ತಲೆ ಮರೆಯೋನು—ದಾನಶೂರ—ಕರ್ಣನಗಿಂತ ಒಂದು ಕೈಮೇಲೆ ದೇವರು ಕೊಟ್ಟದ್ದರೆ; ಅವನ ಹೆಂಡತಿ ಅಷ್ಟಕ್ಕಷ್ಟೂ ಚಚ್ಚರವಂತೆ—ಒಪ್ಪ—ಓರಣೆ....

ಲಿಂಗ:—ಹೀಗೆ ಜೋಡಿ ಕೂಡಿದರೇ ಸೂರಪ್ಪ ಪರಸ್ಪರ ಸಂಸ್ಕಾರ ವಾಗಿ, ವ್ಯವಹಾರ ಸಮಧಾತುವಾಗಿ ಜರುಗೋದು. ಈಗ ನೋಡು— ನನ್ನ ಸ್ವಭಾವಾನೂ ನಮ್ಮ ನಂಜೂ ಸ್ವಭಾವದ ಹಾಗೇ ತೀಕ್ಷ್ಣವಾಗಿ ಇದ್ದಿದ್ದರೆ....

(ಸಾವಿತ್ರಮ್ಮನು ಹಿಡೀ ತಟ್ಟೆಯಲ್ಲಿ ಎರಡು ಲೋಟಗಳಲ್ಲಿ ಕಾಫಿ ತರುವಳು.)

ಲಿಂಗ:—ತಾ ತಾಯೀ! ತಾ!!

ಸೂರ:—ತಾಳು ನನ್ನಮ್ಮ! ನಾನು ತಗೋತೇನೆ. (ಎದ್ದು ಬಂದು ಎರಡು ಲೋಟಾ ಕಾಫೀನೂ ಎತ್ತಿಕೊಂಡು, ಬಲಗೈ ಲೋಟವನ್ನ ಲಿಂಗಪ್ಪಯ್ಯನಿಗೆ ಕೊಡಲು ಹೋಗುವನು.)

ಸಾವಿ:—ಅದಕ್ಕೆ ಸಕ್ಕರೆ ಕಡಿಮೆ ಹಾಕಿದೆ ಸೂರಪ್ಪನವರೇ !

ಲಿಂಗ:—ನೋಡಿದೆಯಾ! ಈ ಲೋಟಾ ತಾ.

ಸೂರ:—ತಡೆಯಿರಿ. (ಬಲಗೈ ಲೋಟ ಕೆಳಗಿಟ್ಟು ಇನ್ನೊಂದು ಲೋಟ ಬಲಗೈಲಿ ಹಿಡಿದು) ಹಿಡಿಯಿರಿ. (ಕೊಡುವನು.)

ಲಿಂಗ:—(ತೆಗೆದುಕೊಂಡು) ಯಾಕಪ್ಪ ಇಷ್ಟು ಕಷ್ಟ!

ಸೂರ:—ಎಡಗೈಲಿ ಕೊಡಬಾರದು ಲಿಂಗಪ್ಪಯ್ಯನವರೇ !

ಲಿಂಗ:—ನಿನಗೆ ಎಡಗೈ ಆದರೂ ನನಗೆ ಬಲಗಡೆ ಇತ್ತಲ್ಲಪ್ಪಾ—ಹೂಂ....ಕುಡಿದು ನೋಡು; ಕಾಫೀಗೆ ಸಕ್ಕರೆ ಇನ್ನೂ ಸ್ವಲ್ಪ ಬೇಕೇನೋ.

ಸೂರ:—(ಕುಡಿದು) ಆಹಾ! ದಿವ್ಯವಾಗಿದೆ ಪರಿಮಳ; ರುಚಿಯಂತೂ ಬಿಡಿ ಹೇಳಬೇಕಾದ್ದೇ ಇಲ್ಲ.

ಲಿಂಗ:—ಇದರ ಹೆಸರು ಸಂಜೀವಿನೀಂತ—ಕಾಫೀಂತ ಅಲ್ಲ.

ಸಾವಿ:—ಹೇಗಾಯಿತೋ ಕಾಫೀ ಅವಸರದಲ್ಲಿ ಮಾಡಿದ್ದು?

ಸೂರ:—ಸೊಗಸಾಗಿದೆಯಮ್ಮ; ನಿನ್ನ ಮನಸ್ಸಿದ್ದ ಹಾಗೇ ಇದೆ. ನಮ್ಮ ಮನೇಲಿ ಯಾಕೆ ಈ ರುಚಿಯಾಗೋಲ್ಲ ಕಾಫೀ?

ಸಾವಿ:—ಸ್ವಲ್ಪ ಹಾಲು ತರಲೇ ಮಾವಯ್ಯಾ?

ಲಿಂಗ:—ಬೇಡಮ್ಮಾ ಹದವಾಗಿದೆ. (ಸಾವಿತ್ರಮ್ಮನು ಸಂತೃಪ್ತಳಾಗಿ ಒಳಕ್ಕೆ ನಿಷ್ಕ್ರಮಿಸುವಳು.) ನಿಮ್ಮ ಮನೆಯ ಕಾಫಿ ಯಾಕೆ ಇಷ್ಟು ರುಚಿಯಾಗೋದಿಲ್ಲಾಂತೀಯಾ?....ಕೇಳು. ನಮ್ಮ ಸಾವಿತ್ರೀ ತಂದೆ ಕಾಫಿ ಮಾಡೋದ್ರಲ್ಲೇ ಏನು, ಬಗೆಬಗೆಯ ಅಡುಗೆ ಮಾಡೋದ್ರಲ್ಲೂ expert. ಅಲ್ಲದೆ ರಿಟೈರ್ ಆಗೋದಕ್ಕೆ ಮುಂಚೆ ಸಬ್ ಡಿವಿಜನ್ ಆಫೀಸರಾಗಿದ್ದಾಗ ಕೂಡ, ರಜಾ ಬಂದಿತೂಂದರೆ ಅಡುಗೆ ಮನೆಗೆ ಬರೋದು, ಅಡುಗೆಯವನ ಜೊತೇಲಿ ನಿಂತುಕೊಂಡು, ಹೊಸ ಹೊಸ ಹದಗಳಲ್ಲಿ ಬೇರೆ ಬೇರೆ ಅಡುಗೆಗಳನ್ನು ಮಾಡಿಸಿ ನೋಡೋದು. ಆದರದ್ದೇ ಮೂರು ಪುಸ್ತಕಗಳನ್ನ ಬರೆದಿಟ್ಟಿದಾರೆ ಅನ್ನು. ಇನ್ನು ಈ ಕಾಫೀ ವಿಚಾರ....ನೋಡೂ—ಕಾಫೀ ಬೀಜಾನ ಕರ್ರಗೆ ಸೀಯಿಸಿ ಹುರಿಯೋದು ತಪ್ಪೂಂತ ಅವರ

ಸಿದ್ಧಾಂತ. ಯಾಕೆಂದರೆ ಹಾಗೆ ಮಾಡೋವಾಗ ಕಾಫೀ flavour ಊ- ಅದರ ಪರಿಮಳ ಹೊರಟುಹೋಗಿ, ಅದರಲ್ಲಿರೋ ಆ ಜಿಡ್ಡು essence ಊ ಆವಿಯಾಗಿ, ಕಡೇಲಿ ಬರಿಯ ಇದ್ದಲುಳಿಯುತ್ತೇಂತ. ಅದಕ್ಕೋಸ್ಕರ ಯಾವುದೋ ಒಂದು ಹದದ ವರೆಗೇನೇ ಬೀಜವನ್ನ ಹುರಿಯಬೇಕು. ಎರಡನೇ ಪಾಯಿಂಟೂ ಹಾಗೆ ಹುರಿದ ಬೀಜಾನ ನುಣ್ಣಗೆ ಪುಡಿಮಾಡ ಬಾರದು; ಸ್ವಲ್ಪ ತರಿತರಿಯಾಗಿ ಪುಡಿಮಾಡಬೇಕು; ಯಾಕೆಂದರೆ, ನುಣ್ಣ ಗಾದ ಪುಡಿ ಸೋಸುವಾಗ ಕಷಾಯದ ಜೊತೇಲಿಳಿದು ಕಾಫೀ ರುಚಿ ಕೆಡಸಿ, ಅದನ್ನ ಕಹಿಮಾಡಿ ಬಿಡುತ್ತೇಂತ.

ಸೂರ:—ನೋಡಿದಿರಾ ಎಷ್ಟು ದೂರಬುದ್ಧಿ ಓಡಿಸಿದಾರೆ. ನನ್ನ ಹೆಂಡತೀನೂ ನಲವತ್ತು ವರುಷದಿಂದ ಕಾಫೀ ಮಾಡಿ ಬಸೀತಿದಾಳೆ. ನಾನೂ ಕೂಡ ಎಷ್ಟೋ ದಿನ ಮಾಡಿದೀನಿ. ಆದರೆ ಈ ಪಾಯಿಂಟು ಗಳು ಹೊಳೀಲೇ ಇಲ್ಲ. (ಎಡಭಾಗದ ಬಾಗಿಲಿನಿಂದ ಹೆಗಲ ಮೇಲಿರುವ ಟವಲಿ ನಲ್ಲಿ ತನ್ನ ಕೈಮುಖಗಳನ್ನು ಒರಸಿಕೊಳ್ಳುತ್ತಾ—ಚಡ್ಡಿ ಜುಬ್ಬ, ಬಿಳಿ ಟೋಪಿಗಳನ್ನು ಧರಿಸಿದ ಹದಿನಾರು ವರುಷದ ಸಿಂಗ್ರಿ ಪ್ರವೇಶ.)

ಲಿಂಗ:—ಆಯಿತೇನಪ್ಪ ಬಟ್ಟೆ ಒಗೆದು?

ಸಿಂಗ್ರಿ:—ಆಯಿತು ಸ್ವಾಮಿ.

ಲಿಂಗ:—ತರಕಾರೀ?

ಸಿಂಗ್ರಿ:—ಬಟಾಣಿಕಾಯಿ ನಾಲ್ಕಾಣೆ ವೀಸೆ. ಹುರಳೀಕಾಯಿ ಎರಡೂವರೆಯಾಣೆ. ಅದಕ್ಕೋಸ್ಕರ ಎರಡು ವೀಸೆ ಬಟಾಣಿ ಕಾಯಿನೇ ತಂದೆ.

ಲಿಂಗ:—ತಗೊಂಡು ಬಾ ಸುಲಿಯೋಣ. ನಾನು ಕೂತು ಏನು ಗೆಣಸು ಕೆತ್ತಬೇಕೇ?

ಸಿಂಗ್ರಿ:—ಅಮ್ಮಾ ಅವರು ತಾವೇ ಸುಲಿದುಬಿಟ್ಟರು. ಸಿಪ್ಪೇನೂ ಕಲಗಚ್ಚಿಗೆ ಸುರಿದು ಬಂದೆ.

ಲಿಂಗ:—ಸರಿ! ಹೋಗಿ ನಿನ್ನ ಇಂಗ್ಲೀಷು ಪುಸ್ತಕ ತಗೊಂಡು ಬಾ.

ಬಿಡುವಾಗಿರೋವಾಗಲೇ ಒಂದೆರಡು ಪಾಠ ಓದಿಬಿಡು. ಮಧ್ಯಾಹ್ನಕ್ಕೆ ನಾನು ಸೂರಪ್ಪನ ಮನೆಗೆ ಹೋಗಬೇಕು.

(ಸಿಂಗ್ರಿಯು ಬಂದ ಬಾಗಿಲಲ್ಲೇ ನಿಷ್ಕ್ರಮಿಸುವನು)

ಸೂರ:—ನನಗಿದೊಂದು ಮಟ್ಟಿಗೆ ಸಮಂಜಸವಾಗಿ ಕಾಣಲಿಲ್ಲ ಸ್ವಾಮಿ!

ಲಿಂಗ:—ಯಾವುದು ಸೂರಪ್ಪ?

ಸೂರ:—ಆಳುಕಾಳುಗಳನ್ನ ಅವರವರ ಯೋಗ್ಯತಾನುಸಾರ ಇಟ್ಟಿರೋದು ಬಿಟ್ಟುಬಿಟ್ಟು ಅವರನ್ನು ನಮ್ಮಂತೆ ಮಾಡೋ ಪ್ರಯತ್ನ.

ಲಿಂಗ:—ನೀನು ಹೇಳೋದು ನನಗೆ ಸ್ಪಷ್ಟವಾಗಿ ಅರ್ಥವಾಗಲಿಲ್ಲ.

ಸೂರ:—ಅಂಥ ದೊಡ್ಡ ವಿಚಾರವೇನೂ ಅಲ್ಲ. ಪ್ರಪಂಚದಲ್ಲಿ ದೇವರು ಐದು ಬೆರಳುನೂವೆ ಬೇರೆ ಬೇರೆಯಾಗಿ ಮಾಡಿದಾನೆ. ಹಕ್ಕಿಗೆ ರೆಕ್ಕೆ ಕೊಟ್ಟ; ಹುಲೀಗೆ ಬಲ ಕೊಟ್ಟ; ಮನುಷ್ಯನಿಗೆ ಬುದ್ಧಿ ಕೊಟ್ಟ. ಅವನು ಅವರವರಿಗೆ ಕೊಟ್ಟಿರೋ ಯೋಗ್ಯತೆ ಮೀರದೆ, ಇದ್ದಿದ್ದರಲ್ಲೇ ತೃಪ್ತಿಪಟ್ಟುಕೊಂಡಿರಬೇಕಾದುದು ಧರ್ಮ. ನೀವು ಈ ನೀತೀನೇ ಮೀರಿ ಆಳಾಗಿರೋ ಅವನಿಗೆ ಕನ್ನಡ ಕಲಿಸಿದಿರಿ; ಸಾಲದ್ದಕ್ಕೆ ಈಗ ಇಂಗ್ಲೀಷ್ ಬೇರೆ ಕಲಿಸುತಿದೀರಿ. ಇದರಿಂದ ಇವನು ಅವಿಧೇಯನಾಗಿ ನಿಮ್ಮ ತಲೇಮೇಲೆ ಹತ್ತಿಗೊಳ್ಳುತ್ತಾನೆಯೇ ಹೊರತು, ಅವನು ಆಳಾಗಿರೋದಿಲ್ಲ.

ಲಿಂಗ:—ಕೇಳು ಸೂರಪ್ಪ! ನಿನ್ನೀ ಭಯಕ್ಕೆ ಕಾರಣವೇ ಇಲ್ಲ. ಆ ಹುಡುಗನಿಗೆ ಓದಬೇಕೊಂಬೋ ಆಸೆ. ಸಾಧಾರಣವಾಗಿ ಹುಡುಗರು ನಾಲ್ಕು ದಿನದಲ್ಲಿ ಕಲಿಯೋ ಪಾಠಗಳನ್ನ ಇವನು ಎರಡು ಘಂಟೇ ಒಳಗೆ ಕಲಿತುಬಿಡುತ್ತಾನೆ. ಈಗ ನೋಡು. ಕನ್ನಡದಲ್ಲಿ ತಾಯಿನಾಡು, ವಿಶ್ವ ಕರ್ನಾಟಕ, ನವಜೀವನ, ವೃತ್ತಾಂತ ಪತ್ರಿಕೆ ಈ ಪತ್ರಿಕೆಗಳನ್ನೆಲ್ಲಾ ಸರಾಗವಾಗಿ ಓದುತ್ತಾನೆ. ವಿಚಾರಗಳನ್ನೆಲ್ಲಾ ಅರ್ಥಮಾಡಿಕೊಳ್ಳುತ್ತಾನೆ. ರಾತ್ರೆ ಮನೆಗೆ ಹೋದಮೇಲೆ ತಾನಿರೋ ತನ್ನ ದೊಡ್ಡಪ್ಪನ ಮನೆಯ ಮುಂದೆ ಅವರ ಕೇರಿ ಜನರೆಲ್ಲಾ ಸೇರಿಸಿ ಪತ್ರಿಕೆ ಓದಿ ಹೇಳುತಾನೆ. ಇದರಿಂದ ಅವರಿಗೆಲ್ಲಾ ಎಷ್ಟೋ ತಿಳುವಳಿಕೆ ಹೆಚ್ಚುತಾ ಇದೆ. ಅಲ್ಲದೆ,

ಅವರ ಪೈಕಿ ಓದುಬರಹ ಬರದವರಿಗೆ ರಾತ್ರಿ ಎರಡು ಗಂಟೆ ಹೊತ್ತು ಪಾಠ ಬೇರೆ ಹೇಳಿಕೊಡುತಾನೆ. ಅವರೆಲ್ಲಾ ಅವನನ್ನ "ಸಿಂಗ್ರಿಮೇಷ್ಟ್ರು, ಸಿಂಗ್ರುಪಾದ್ರು" ಅಂತ ಅಷ್ಟು ಪ್ರೀತಿಸುತಾರೆ. ಅಲ್ಲದೆ ಇವನು ನಮ್ಮ ಮನೆಯ ವಿಚಾರದಲ್ಲಿ ಹೇಗಿದಾನೇಂತ ತಿಳಿದಿದ್ದೀ? ನಂಜು ಒಂದೊಂದು ಸಲ ಕೋಪದಲ್ಲಿ ಹೊಡೆದರೂ, ರೇಗದೆ ಸುಮ್ಮನಿರುತಾನೆ. ಅಲ್ಲದೆ ಈ ಸಲ ಲೋಯರ್ ಸೆಕೆಂಡರೀ ಪರೀಕ್ಷೆಗೆ ಕಟ್ಟಬೇಕೂಂತ ಕಷ್ಟಪಡುತ್ತಿದಾನೆ. ಅವನಪ್ಪ ಅಮ್ಮ ಚಿಕ್ಕ ವಯಸ್ಸಿನಿಂದ ಓದಿಸಿದ್ದಿದ್ದರೆ, ಈ ವೇಳೆಗೆ ಇವನೂ ಇಂಟರ್‌ಮೀಡಿಯೆಟ್ ಪ್ಯಾಸ್ ಮಾಡುತ್ತಿದ್ದನೋ ಏನೋ....

ಸೂರ:— (ಅತೃಪ್ತನಾಗಿ) ಸರಿ ಸ್ವಾಮಿ!

ಲಿಂಗ:— ಪ್ರಪಂಚದಲ್ಲಿ ಎಲ್ಲರಿಗೂ ಅನ್ವಯಿಸೋ ಒಂದು ಧರ್ಮ ಅಂದರೆ ಸೂರಪ್ಪ, ಅದು—ಸೇವಾಧರ್ಮ. ಯಾವ ರೀತಿ ಸೂರ್ಯ, ಜಾತಿ, ವಯಸ್ಸು, ಗುಂಪು, ಅಂತಸ್ತು, ಗುಣ, ಸ್ಥಳ, ಯೋಗ್ಯತಾ ಯೋಗ್ಯತೆ ಒಂದರ ತಾರತಮ್ಯಾನೂ ಗಮನಿಸದೆ ನಿಷ್ಪಕ್ಷಪಾತ ದೃಷ್ಟಿಯಿಂದ ಎಲ್ಲಾ ಕಡೆಯೂ ಬೆಳಗಿ, ಪ್ರಾಣಿಕೋಟೀನೆಲ್ಲಾ ಸಾಕುತ್ತಾನೋ ಹಾಗೇನೇ, ನಾವು ಕೂಡ ಸೇವೆ—ನಮ್ಮ ಕೈಲಾದಷ್ಟು ಸೇವೆ ಮಾಡೋದೆ ದೊಡ್ಡ ಧರ್ಮ.

(ಸಿಂಗ್ರಿಯು ಕೈಲಿ ಇಂಗ್ಲೀಷ್ ಪುಸ್ತಕವೊಂದನ್ನು ಹಿಡಿದು ಪ್ರವೇಶಿಸುವನು.)

ಸೂರ:— ನಿಮ್ಮ ಸಾಧನೇ ಮುಂದೆ ನಾನು ತಲೆ ತಗ್ಗಿಸುತೇನೆ ಲಿಂಗಪ್ಪಯ್ಯನವರೇ; ನಿಮ್ಮ ಸಂಸ್ಕಾರ ದೊಡ್ಡದು.

ಲಿಂಗ:—ನನ್ನನ್ನೇಕೆ ಹೊಗಳುತೀ ಸೂರಪ್ಪ?

ಸೂರ:—ಇನ್ನೇನು ಮಾಡಬಲ್ಲೆ? ನಾನು ಬರುತ್ತೇನೆ—ಸ್ನಾನಕ್ಕೆ ಹೊತ್ತಾಗುತ್ತೆ. ಮಧ್ಯಾಹ್ನ ಬೇಗ ಬಂದುಬಿಡುತೀರಿ ತಾನೇ?

ಲಿಂಗ:—ಓಹೋ, ಬಂದುಬಿಡುತೇನೆ.

(ಸೂರಪ್ಪನು ಜೇಬಿನಿಂದ ನಶ್ಯದ ಡಬ್ಬಿ ತೆಗೆದು ಬೆರಳಿನಿಂದ ಎರಡೇಟು ಹೊಡೆದು, ತಟ್ಟನೆ ಲಿಂಗಪ್ಪನ ಕಡೆ ನೋಡಿ ನಕ್ಕು, ಡಬ್ಬಿಯನ್ನು ಮತ್ತೆ ಜೇಬಿಗೆ ಸೇರಿಸಿ ಹೊರಡಲನುವಾಗುವನು.)

ಲಿಂಗ:—(ಮುಗುಳು ನಗೆಯಿಂದ) ಆಗಲೀ! ಆಗಲೀ! ಯಾಕೆ ಸಂಕೋಚ ಸೂರಪ್ಪ!

ಸೂರ:—ಇಲ್ಲ. ಇಷ್ಟು ಹೊತ್ತೂ ಮರೆತುಹೋಗಿತ್ತು, ಈಗ ಮತ್ತೆ ಚಪಲ. ಬಹಳ ಕಡಿಮೆ ಮಾಡಿಕೊಳ್ಳುತಾ ಇದೇನೆ... (ನಿಷ್ಕ್ರಮಣ).

ಲಿಂಗ:—(ನಕ್ಕು ಇತ್ತತಿರುಗಿ) ಬಾರಯ್ಯಾ ಕೂತುಕೋ. ತೆಗೆ. ನಿನ್ನೆ ಓದಿದ ಮೂರು ಪಾಠಗಳನ್ನೂ ಓದು.

ಸಿಂಗ್ರಿ:—(ಕೆಳಗೆ ಕೂತು ಪುಸ್ತಕವನ್ನು ತೆರೆದು ಓದುವನು) ಹಾನೆಸ್ಟಿ ಈಜ್ ದಿ ಬೆಸ್ಟ್ ಪಾಲಿಸೀ.

ಲಿಂಗ:—ಹಾನೆಸ್ಟಿ— ಅಂತ ಅನ್ನಬೇಡ; ಆ 'ಹ'ನ ಬಿಟ್ಟುಬಿಟ್ಟು 'ಆನೆಸ್ಟಿ' 'ಆನೆಸ್ಟಿ' ಅನ್ನು.

ಸಿಂಗ್ರಿ:—ಆನೆಸ್ಟಿ ಈಜ್... ....

ಲಿಂಗ:—ಈಜ್—ಅದರ ಧ್ವನಿ— ಈಸ್-ಈಸ್.

ಸಿಂಗ್ರಿ:—ಈಸ್ ದಿ ಬೆಸ್ಟ್ ಪಾಲಿಸಿ.

ಲಿಂಗ:—ಹಂ; ಮುಂದೆ.

ಸಿಂಗ್ರಿ:—ಒನ್ಸ್ ಅಪಾನ್ ಎ ಟೈಮ್ ದೇರ್ ಲಿವ್ಡ್ ಎ ಮರ್ಚೆಂಟ್ ಇನ್ ಬೊಂಬಾಯ್.

ಲಿಂಗ:—ನೋಡೂ--ಕನ್ನಡದಲ್ಲಿ ಅದನ್ನ ಬೊಂಬಾಯ್ ಅಂತ ಅಂದರೂನೂವೇ ಇಂಗ್ಲೀಷ್‌ನಲ್ಲಿ ಹೇಳೋವಾಗ 'ಬಾಂಬೆ' ಅನ್ನಬೇಕು. 'ಬಾಂಬೆ'

ಸಿಂಗ್ರಿ:—ಬಾಂಬೆ.

ಲಿಂಗ:—ಏನು ಸ್ಪೆಲಿಂಗ್ ಬಾಂಬೆ ಅನ್ನೋದಕ್ಕೆ?

ಸಿಂಗ್ರಿ:—ಬಿ ಓ ಎಂ ಬಿ ಎ.

ಲಿಂಗ:—ವೈ ಸೇರಿಸಿಗೋ.

ಸಿಂಗ್ರಿ:—ಬಿ ಓ ಎಂ ಬಿ ಎ ವೈ.

ಲಿಂಗ:—ರೈಟ್ ಮುಂದೆ.

[ಈ ವೇಳೆಗೆ ಕೋಪೋದ್ರೇಕದಿಂದ ಕಿಡಿಯಾಗಿದ್ದ ನಂಜುಂಡಯ್ಯನು ಕೈಲಿ ಮೂರು ಪತ್ರಗಳು, ಪಾತ್ರೆಗಳ ಸೀಸೆ, ಪುಣ್ಣಾಗಿದ್ದ ಎರಡು ಕಂತೆ ಸೊಪ್ಪನ್ನು ಹಿಡಿದು, ಬಿದ್ದು ಮುಂಡಿಯು ಬಳಿ ಮಣ್ಣಾಗಿದ್ದ ಪಂಚೆಯನ್ನು ಕೊಡವುತ್ತಾ, ಬಲಗಡೆ ಬಾಗಿಲ ಬಳಿಗೆ ಬಂದು ತಟ್ಟನೆ ನಿಲ್ಲುವನು.]

ಸಿಂಗ್ರಿ:—ಹಿ ಹ್ಯಾಡ್ ಎ ಸರ್ವೆಂಟ್.

ನಂಜು:- (ಮುಂದೆ ಬಂದು) ಹೂ ವಾಸ್ ಅನ್ ಅಪ್ ಸ್ಟಾರ್ಟ್ ತಲೆ ಹರಟೇ!

ಸಿಂಗ್ರಿ:– (ಬೆಚ್ಚಿ ತಟ್ಟನೆದ್ದು ಪುಸ್ತಕವನ್ನು ಮಡಿಸಿ ಜೇಬಿಗಿಟ್ಟು) ಸ್ವಾಮಿ!

ನಂಜು:– ನೀನು ಇಂಗ್ಲೀಷು ಕಲಿತು ನಮ್ಮನ್ನ ಉದ್ಧಾರಮಾಡಿದ್ದು ಸಾಕು. ಎದ್ದು ಹೋಗಿ ಆ ಐಯ್ಯರ್ ಹೋಟಲಿನಲ್ಲೋ, ಇಲ್ಲ ಆ ಹಿಂದೂಸ್ತಾನಿ ಗವಾಯಿ ಕೇಶವರಾವ್ ಅಂತ ಇದಾನಲ್ಲ ಆ ಪ್ರೈಮರಿ ಸ್ಕೂಲ್ ಪಕ್ಕದಲ್ಲಿ ಅವನ ಮನೇಲೋ, ಇಲ್ಲಾ ಅವರಾ ಅನಿಷ್ಟ ನಾಟಕದ ಅಸೋಸಿಯೇಷನ್ ಇದೆಯಲ್ಲಾ ಸೊಸೈಟಿ ಪಕ್ಕದ ಮಹಡೀಲಿ ಅಲ್ಲೋ, ಎಲ್ಲಿದ್ದರೂ ಸರಿ ಆ ಪುಂಡ, ಹೋಗಿ ಈಗಲೇ ಕರೆಕೊಂಡು ಬಾ ಆ ತಲೆ ಹೋಕನನ್ನ.

ಸಿಂಗ್ರಿ:—ಚಿಕ್ಕಸ್ವಾಮಿಯೋರನ್ನೇ ಸ್ವಾಮಿ?

ನಂಜು:—(ಮುಂದೆ ಹೋಗಿದ್ದವನು ಹಿಂದಿರುಗಿ ನಿಂತು) ಹೌದೋ fool! ನಿನ್ನ ಚಿಕ್ಕ ಸ್ವಾಮಿಯೋರನ್ನೇ! ನಿನ್ನ ಸಂಗಡ ಚಕ್ಕಂದ ಆಡುತ್ತಿರುತ್ತಾನಲ್ಲ, ಆಳೂ ಕಾಳೂ ಅನ್ನೋ ತಾರತಮ್ಯ ಇಲ್ಲದೆ, ಆ ನೀಚನ್ನ. (ಸಿಂಗ್ರಿಯು ಬಲಬಾಗಿಲಿನಿಂದ ನಿಷ್ಕ್ರಮಿಸುವನು. ನಂಜುಂಡಯ್ಯನು ಮುಂದೆ ಹೋಗಿ ಮೇಜಿನ ಮೇಲೆ ಸೊಪ್ಪಿನ ಕಂತೆಯನ್ನೊಗೆದು, ಹೊದೆದಿದ್ದ ವಲ್ಲಿಯನ್ನು ಕುರ್ಚಿಯ ಮೇಲೆ ಹಾಕುತ್ತಾ) ಲೇ! ಲೇ! ಎಲ್ಲಿ ಹೋದೆ ಹಾಳಾಗಿ!!! (ಎದುರು ಬಾಗಿಲ ಕಡೆ ಹೋಗಲಿರುವನು.)

ಲಿಂಗ:—ಯಾಕೆ ನಂಜೂ, ಮುಂಡಿ ಮಣ್ಣಾಗಿದೆ?

ನಂಜು:—(ಕುಪಿತನಾಗಿ) ಆ ಹೆಡ್ ಮಿಸ್ಟ್ರೆಸ್ ಮನೆ ನಾಯಿ ನುಗ್ಗಿ ಬಂತು; ಓಡಿದೆ; ಅವಾಂತರದಲ್ಲಿ ಮುಗ್ಗರಿಸಿದೆ.

ಲಿಂಗ:--(ಮುಂದೆ ಬಂದು) ಯಾಕೆ ನಂಜೂ ಇಷ್ಟು ಕೋಪ ಗೊಂಡಿದ್ದೀಯಾ?

ನಂಜು:— ಮನೇಲಿರೋರೇನೇ ನನ್ನ ಮಾನಾನ ಮೂರು ಕಾಸಿಗೆ ಮಾರೋದಕ್ಕೆ ಪ್ರಾರಂಭಿಸಿ, ಸಂಜೆ ಬೆಳಗಾದರೆ ನನ್ನ ಮರ್ಯಾದೇನ ಮೋಚಿಸುತಾ ನಿಂತಿದ್ದರೂ, ನನಗೆ ಕೋಪ ಯಾಕೆ ಬರಬೇಕೂ?

ಲಿಂಗ: - ಏನಯ್ಯಾ ಹಾಗಂದರೆ? ಯಾರು ನಿನ್ನ ಮರ್ಯಾದೆಗೆ ಭಂಗ ತರೋರು ಈ ಮನೇಲಿ?

ನಂಜು:—(ರೇಗಿ) ನನ್ನ ಮರ್ಯಾದೆ ಯಾರು ಉಳಿಸುತಾ ಇದಾರೆ ಈ ಮನೇಲಿ? ನೀವು ಮನೇಗೆ ದೊಡ್ಡೋರಾಗಿದ್ದುಕೊಂಡು, ಆಳು ಕಾಳು—ಚಿಕ್ಕೋರು ಪುಟ್ಟೋರನ್ನ ಹದ್‌ಬಸ್ತಿನಲ್ಲಿಟ್ಟುಕೊಂಡು, ಬೆಳೆಸ ಬೇಕಾದೋರು, ಆ ಆಳನ್ನ ಕರೆಕೊಂಡು ತೊಡೆಯ ಮೇಲೆ ಕೂರಿಸಿ ಕೊಂಡು, ಆ ಮೊಮ್ಮಗನನ್ನ ತಲೆಯ ಮೇಲೆ ಹತ್ತಿಸಿಕೊಂಡು ಮುದ್ದಿ ಸುತಾ ಹಾಳು ಮಾಡುತ್ತಿದ್ದರೆ ಇನ್ನೂ ಮನೆಗೆ ಯಜಮಾನ ಅನ್ನಿಸಿ ಕೊಂಡ ನನ್ನ ಮರ್ಯಾದೆ ಮಣ್ಣುಪಾಲಲ್ಲದೆ ಇನ್ನೇನು?

ಲಿಂಗ:—ನೀನು ಸ್ವಲ್ಪ ಸಮಾಧಾನಕ್ಕೆ ಬಂದರೆ ವಿಚಾರ ತಿಳಿದು ಕೊಳ್ಳಬಹುದು. ಸುಮ್ಮನೆ ರೇಗುವುದರಿಂದ ಕೆಲಸ ಕೆಡುತ್ತೆಯೇ ಹೊರತು ನೆಟ್ಟಗಾಗೋಲ್ಲ ನಂಜೂ! ಶಾಂತನಾಗಿ ಕೂತುಕೋ ಬಾ! ನಿನ್ನ ಮನಸ್ಸಿನಲ್ಲಿ ಇರೋದನ್ನೆಲ್ಲಾ ಸ್ಪಷ್ಟವಾಗಿ ಹೇಳು. ತಿದ್ದಿ ಸರಿಪಡಿಸೋ ವಿಚಾರಗಳಿದ್ದರೆ, ಅಗತ್ಯವಾಗಿ ಸರಿಪಡಿಸೋಣ.

ನಂಜು:—(ಕೆಣಕಲ್ಪಟ್ಟ ಕೋಪವು ಕಿಡಿಯಾಗಿ) ಇನ್ನು ಸರಿಮಾಡುವು ದಕ್ಕೆ ಏನು ಉಳಿದಿದೆ? ಆ ಚಂಡಾಲ ಬಂದರೆ ಹೇಳೋದನ್ನೆಲ್ಲಾ ಹೇಗೆ ಹೇಳಬೇಕೋ ಹಾಗೆ ಹೇಳಿ ನೆಟ್ಟಗೆ ಮಾಡದೇ ಹೋದರೆ ನನ್ನ ಅಸ್ತಿತ್ವ ಕ್ಕೇನು ಬೆಲೆ!!

ಲಿಂಗ:—ಆ ಹುಡುಗನ ಮೇಲೆ ಯಾಕೆ ರೇಗುತೀಯಾ ನಂಜೂ! ಮೊದಲಿನಿಂದ ನಾನೂ........

ನಂಜು :—ಹೌದು ಹೌದೂ! ಮೊದಲಿನಿಂದ ನೀವೇ ಅವನನ್ನ ಹಾಳುಮಾಡಿದ್ದು. ರಾತ್ರಿ ಎಂಟು ಘಂಟೆಯಾದರೂ ಮನೆ ಸೇರೊಲ್ಲ ವಲ್ಲಾಂತ ನಾ ಕೂಗಾಡಿದರೇ, ತಿರುಗೋ ವಯಸ್ಸು; ಆಡೋ ವಯಸ್ಸು; ಆಡಿಕೊಳ್ಳಿ ಬಿಡೋ, ಅನ್ನೋದು! ಶನಿವಾರ, ಭಾನುವಾರ ರಜಾ ದಿನ ಗಳು ಬಂದರೆ—ಮಧ್ಯಾಹ್ನ ಊಟ ಆಗೋದಕ್ಕಿಲ್ಲ. ಪುಸ್ತಕ ಹಿಡಿದೇ, ತಲೇಗೆ ಕುಲಾವಿ ಸೆಕ್ಕಿಸಿ, ಕೈಲಿ ಆ ಹಾಳು ಬ್ಯಾಟ್ ಹಿಡಿದು ಹೊರಟು ಬಿಟ್ಟರೇ, ಮತ್ತೆ ಸಂಜೆಯುವರೆಗೂ ಪತ್ತೆ ಇರೊಲ್ಲವಲ್ಲಾಂತ ಹಿಡಿದು ಬುದ್ಧಿ ಕಲಿಸೋದಕ್ಕೆ ಹೋದರೆ, "ನಿನ್ನ ಈ ವಯಸ್ಸಿನಲ್ಲಿ ನೀನೂ ಹೀಗೆ ಆಡುತ್ತಿರಲಿಲ್ಲವೇನೋ ನಂಜೂ! ಆಡಿಕೊಳ್ಳಲಿ ಬಿಡೋ; ಓದೋದು ಇದ್ದೇ ಇದೆ" ಅಂತ ಆ ಪೋರನೆದುರಿಗೇನೇ ನನಗೆ ಬುದ್ಧಿ ಹೇಳುವುದು; ಹಾಳಾದ ನಾಟಕಾ, ಬೂಟಕಾ. ಸಂಗೀತಾಂತ ಅಯೋಗ್ಯ ಹುಡುಗರ ಜೊತೆ ಸೇರಿ ಕುಣೀತಾನಲ್ಲಾಂತ ದಂಡಿಸೋದಕ್ಕೆ ಹೋದರೆ "ಅದೂ ಒಂದು ಬಗೆ ವಿದ್ಯೆ ಕಾಣೋ! ಎಲ್ಲರಿಗೂ ಆ ವಿದ್ಯೆ ದೇವರು ಕೊಟ್ಟಿರೋದಿಲ್ಲಾ"ಂತ ನನ್ನ ಮುಖ ಮುರಿದೂ, ಅವನು ನಾಲ್ಕು ವರುಷಕಟ್ಟಿ ಕುಪ್ಪಳಿಸಿದರೂ ಇಂಟರ್‌ಮಿಡಿಯೆಟ್ ಪ್ಯಾಸ್ ಮಾಡೋದಕ್ಕೆ ಆಗದೇ ಡುಬ್ಕೀ ಹೊಡೀತಾ, ಕಾಸಿನಷ್ಟೂ ಪಶ್ಚಾತ್ತಾಪ ಪಡದೇ, ಉಂಡಾಡಿಕೊಂಡಿದ್ದರೂ, ಅವನಿಗೆ ಒಂದು ಚೂರು ಬುದ್ಧಿವಾದ ಹೇಳದೆ, ಹೊಟ್ಟೆಸಂಕಟ ತಡೀದೇ ನಾನು ಆಡೋ ಒಂದೆರಡು ಬುದ್ಧಿವಾದದ ಮಾತುಗಳಿಗೂ—ಕೊಡೋ ಎರಡು ಏಟುಗಳಿಗೂ ಅವಕಾಶ ಕೊಡದೆ ನನ್ನೇ ಗದರಿಸುತ್ತಾ ಮೊಮ್ಮಗ ನನ್ನ ಬೆಳೆಸಿ ನಿಲ್ಲಿಸಿದೀರಲ್ಲಾ?—ಈಗ ನಿಮ್ಮ ಮಾತಿಗಾದರೂ ಎಷ್ಟು ಬೆಲೆ ಕೊಡುತ್ತಾನೆ? ವಂಶದ ಗೌರವ—ಮನೆಯ ಮರ್ಯಾದೇನ ಹ್ಯಾಗೆ ಎಡಗಾಲಿನಲ್ಲಿ ಒದೀತಿದಾನೆ? ಸ್ವಲ್ಪ ನೋಡಿ, ನೀವೂ ಸಂತೋಷಪಡಿ. (ಕೈಲಿದ್ದ ಮೂರು ಲಕೋಟೆಗಳನ್ನೂ ಮೇಜಿನ ಮೇಲೆ ಬಡಿದು) ಲೇ ಸಾವಿತ್ರೀ!!

ಸಾವಿ :—(ಬಾಗಿಲಿಗೆ ಓಡಿಬಂದು ಭಯದಿಂದ) ಆಂ!

ನಂಜು :—ಎಲ್ಲಿ ಹೊರಟು ಹೋಗಿದ್ದೆ ಕಣ್ಮರೆಯಾಗಿ?—ಒಂದು ಲೋಟ ನೀರು ತಗೊಂಡುಬಾ.

(ಶತಪಥ ತಿರುಗುತ್ತಾ ಔಷಧಿ ಪೊಟ್ಟಣದಿಂದ ಪುಡಿ ತೆಗೆಯುವನು. ಲಿಂಗಪ್ಪ ಯ್ಯನು ನಿಧಾನವಾಗಿ ಒಂದು ಕಾಗದವನ್ನು ಲಕೋಟೆಯಿಂದ ಬಿಚ್ಚಿ ನೋಡುವನು,

ಸಾವಿತ್ರಮ್ಮನು ಲೋಟದಲ್ಲಿ ನೀರು ತರುವಳು. ನಂಜುಂಡಯ್ಯನು ಅದನ್ನು ಅವಳ ಕೈಯಿಂದ ಕಿತ್ತುಕೊಂಡು ಪುಡಿಯನ್ನು ಬಾಯಿಯಲ್ಲಿ ಹಾಕಿಕೊಂಡು, ಒಂದು ಗುಟುಕು ನೀರು ಕುಡಿದು ಲೋಟವನ್ನು ಮೇಜಿನ ಮೇಲೆ ಕುಕ್ಕಿ ವಲ್ಲಿಯನ್ನು ಹೆಗಲ ಮೇಲೆ ಎಸೆದು ಬಲಬಾಗಿಲಿನಿಂದ ಹೊರಕ್ಕೆ ಹಾದುಹೋಗುವನು.)

ಸಾವಿ:—(ಭಯಚಕಿತಳಾಗಿ) ಮಾವಯ್ಯಾ! ಮಾವಯ್ಯಾ! ಏನು ಸಮಾಚಾರ? ಯಾಕಿಷ್ಟೊಂದು ರೇಗಿದಾರೆ?

ಲಿಂಗ:—ಅವನ ಸ್ವಭಾವಾನೇ ಹೀಗಾಯಿತು, ಬಿಡು.

ಸಾವಿ:—ತಿರುಗಿ ಈವತ್ತು ಪುಡಿ ತಗೊಂಡರಲ್ಲ ಯಾಕೋ?

ಲಿಂಗ:—ತುಂಬ ಕೋಪ ಬಂದಾಗ ಯಾರಿಗಾದರೂ ಎದೆಬಡಿತ ಹೆಚ್ಚುತ್ತೆ. ಅದಕ್ಕೆ ಸಂಜೀವಿನೀ ಔಷಧಿ ಅಂದರೆ ಶಾಂತವಾಗಿರೋದಕ್ಕೆ ಪ್ರಯತ್ನಪಡೋದು. ಆದರೆ ಅವನ ಸ್ನೇಹಿತ ಇದಾನಲ್ಲ ಡಾಕ್ಟರ್ ಅಪ್ಪಣ್ಣ ಅವನು ತನಗೆ ಗೊತ್ತಿರೋ ಔಷಧಿಗಳ ಪ್ರಯೋಗವನ್ನೆಲ್ಲಾ ಇವನ ಮೇಲೆ ಮಾಡುತ್ತಾನೆ.

ಸಾವಿ:—ಆ ಕಾಗದಗಳೇನು ಮಾವಯ್ಯಾ?

ಲಿಂಗ:—ಏನೋ ಇನ್ನೂ ಓದಲಿಲ್ಲ. ನೀನೂ ಕೇಳು; ಮೊದಲಿನಿಂದ ಓದುತ್ತೇನೆ.

ಸಾವಿ:—ಅವರು ಮತ್ತೆ ಅಷ್ಟರೊಳಗೆ ಬಂದುಬಿಡುತ್ತಾರೋ ಏನೋ! ಯಾರ ಮೇಲೆ ರೇಗಿಬಿಟ್ಟಿದಾರೋ ಏನೋ!!

ಲಿಂಗ:—ಇನ್ನು ಯಾರಮೇಲೆ ರೇಗಬಲ್ಲ, ಸಿಂಗ್ರಿ, ಸುಂದರು, ನೀನು—ನಿಮ್ಮ ಮೂರು ಜನ ಬಿಟ್ಟು? ಈಗ ಸುಂದರೂ ಮೇಲೆ ರೇಗಿಬಿಟ್ಟಿದಾನೆ—ನಾನು ಅವನನ್ನ ಮುದ್ದಿಸಿ ಹಾಳುಮಾಡಿದ್ದೇನಂತ. ಹೋಗಿ ಆ ಹೊರಬಾಗಿಲು ಹಾಕಿಕೊಂಡು ಬಾ; ಕಾಗದಗಳನ್ನ ಓದಿನೋಡೋಣ. (ಸಾವಿತ್ರಮ್ಮನು ಬಾಗಿಲು ಹಾಕಲು ಹೋಗುವಳು. ಸೂರಪ್ಪನು ಮತ್ತೆ ಪ್ರವೇಶಿಸುವನು.) ಸೂರಪ್ಪಾ! ಹಾಗೇ ಆ ಬಾಗಿಲು ಅಗಳಿ ಹಾಕಿಕೊಂಡು ಬಾ.

ಸೂರ:—ಈ ದಿನ ಸಂಜೆಗೆ ಮೋಜಿನೀದಾರರ ಮನೆಗೆ ಆ ಬಾಲಸನ್ಯಾಸಿಗಳು ಬರುತ್ತಾರಂತೆ—ಆ ಸುದ್ದಿ ತಿಳಿಸೋಣಾಂತ ಬಂದ್ಲೆ.

ಲಿಂಗ:—ಒಳ್ಳೇ ಕೆಲಸ! ಬಾ! ನೀನೂ ಬಂದದ್ದು ಒಳ್ಳೆದಾಯಿತು. ನಂಜು ಈಗೆರಡು ನಿಮಿಷದ ಕೆಳಗೆ ತುಂಬಾ ಸಿಟ್ಟಿನಲ್ಲಿ ಬಂದು, ಸುಂದರು ಮೇಲೆ ರೇಗಿ "ಈ ಕಾಗದಗಳನ್ನ ನೋಡೂ"ಂತ ನನ್ನ ಮುಂದೆ ಬಡಿದು ಹೊರಟುಹೋದ.

ಸೂರ:—ಎಲ್ಲಿಗೆ ಹೋದರು?

ಲಿಂಗ:—ಎಲ್ಲಿಗೆ ಹೋದನೋ! ಅವನು ಮತ್ತೆ ಬರುವುದರೊಳಗೆ ಇವನ್ನ ಓದಿಬಿಡೋಣ.

ಸಾವಿ:—(ಕಾತುರಳಾಗಿ) ಓದಿ ಮಾವಯ್ಯಾ!

ಲಿಂಗ:—(ತಾನು ತೆರೆದಿದ್ದ ಕಾಗದದ ಲಕೋಟೆಯನ್ನು ತೆಗೆದುಕೊಂಡು) ಈ ಕಾಗದ ಡಾಕ್ಟರ್ ಬೆಳಗೊಳಕರ್‌ಗೆ (ಕಾಗದ ಒಂದೆ ರುಜು ನೋಡಿ) ಸುಂದರ್ ರಾವ್ ಬರೆದದ್ದು.

ಸೂರ:—ಬೆಳಗೊಳಕರ್ ಡಾಕ್ಟರ್ ಯಾರು?

ಲಿಂಗ:—ಅವನೇಪ್ಪ—ಆ ಬೆಳಗೊಳದ ಶಾನುಭೋಗ ಪುಟ್ಟಣ್ಣಯ್ಯನ ಮಗ ಅಪ್ಪಣ್ಣ.

ಸೂರ:— ಮತ್ತೇ........

ಲಿಂಗ:—ಅವನಿಗೆ ಅವರಪ್ಪ ಇಟ್ಟ ಹೆಸರು ಹಿತವಿರಲಿಲ್ಲ. ಅದಕ್ಕೋಸ್ಕರ ಬೊಂಬಾಯಿಕಡೆ ಹೆಸರಿಟ್ಟುಕೊಂಡಿದಾನೆ.

ಸಾವಿ:— ಓದಿ ಮಾವಯ್ಯಾ!

ಲಿಂಗ:—ಓದುತೇನೆ ತಾಯಿ!

"ನಮ್ಮೂರಿನ ಸುಪ್ರಸಿದ್ಧ ಡಬ್ಬಲ್ ಡಾಕ್ಟರ್ ಪುಟ್ಟಣ್ಣಾ ಅಪ್ಪಣ್ಣಾ ಬೆಳಗೋಳಕರ್, ಎಲ್. ಎಂ. ಪಿ. ಮತ್ತು ಪ್ರತ್ಯಕ್ಷ ಧನ್ವಂತ್ರಿ ಅವರ ಸಮಕ್ಷಮದಲ್ಲಿ 'ಅಜ್ಞನೂ, ನಿರಕ್ಷರಕುಕ್ಷಿಯೂ, ಅಪ್ರಯೋಜಕನೂ, ಮಾತಾಪಿತೃದ್ರೋಹಿಯೂ' ಆದ ಎನ್. ಸುಂದರರಾವ್ ಘಂಟಾಘೋಷವಾಗಿ ಹೇಳುವ ಅಪೂರ್ವವಾದ ಒಂದೆರಡು ಬುದ್ಧಿವಾದಗಳೇನೆಂದರೆ:—

ಸಾವಿ:—(ಕೈ ಕೈ ಹಿಸುಕಿಕೊಳ್ಳುತ್ತಾ) ಅಯ್ಯೋ! ಅವರಿಗೂ ಇವನು ಹೀಗೆಲ್ಲಾ ಬರೆಯೋದೇ........

ಲಿಂಗ :—"ನೀವು ನಿಮಗಿಂತ ವಯಸ್ಸಿನಲ್ಲಿ ಕಿರಿಯರಾದವರಿಗೆಲ್ಲಾ ಕಂಡಕಂಡಾಗ ಬುದ್ಧಿಹೇಳುವ ಕಸುಬನ್ನು ಯಾರಿಂದ ಕಲಿತಿರಿ? ನಿಮಗೆ ಸರ್ಕಾರದವರು ತಿಂಗಳೊಂದಕ್ಕೆ ಎಷ್ಟು ಪೇಷನ್ ಅಲೋಯನ್ಸ್ ಕೊಡುತ್ತಾರೆ? ನಿಮಗೆ ಗಿರಾಕಿಗಳು ಬಹು ಕಡಿಮೆಯೇ? ನಮ್ಮಂಥ ಹುಡುಗರನ್ನು ಹುಡುಕಿಕೊಂಡು ಬಂದು ಬುದ್ಧಿ ಹೇಳಬಯಸುವ ನಿಮ್ಮ ತಲೆಗೆ ರಿಪೇರಿ ಏನಾವದರೂ ಆಗತ್ಯವಿದೆಯೇ? ಮಹಾನುಭಾವ! ನಿಮ್ಮ ಅಂಗಡಿಯಲ್ಲಿ ಹೊತ್ತುಹೋಗದೆ, ಗಿರಾಕಿಗಳು ಬಾರದೆ ತಲೆನೋವು ಹತ್ತಿದರೆ, ನನಗೆ ತಿಳಿಸಿ—ಒಂದು ಹತ್ತು ಪಾಕೆಟ್ ಆಸ್ಪಿರಿನ್ ಕಳುಹಿಸುತ್ತೇನೆ. ಅಥವಾ ನಿಮಗೆ ಬಿಡುವಾಗಿದ್ದರೆ ಮನೆಗೆ ಹೋಗಿ ನಿಮ್ಮ ಹೆಂಡತಿಗೆ ಅಡುಗೆ ಕೆಲಸದಲ್ಲಾದರೂ ಸಹಾಯಮಾಡಿದರೆ, ಇಲ್ಲ ನಿಮ್ಮ ಮಗುವಿಗಾದರೂ ಕತೆಗಳನ್ನು ಹೇಳಿದರೆ ನಿಮ್ಮ ಗೃಹಸ್ಥಾಶ್ರಮವಾದರೂ ಸಾರ್ಥಕವಾಗುವುದಿಲ್ಲವೇ? ಇತರರ ಸಂಸಾರಕ್ಕೆ ತಲೆಹಾಕಿ, ಅವರ ಕುಟುಂಬವನ್ನು ಉಪದೇಶಗಳಿಂದ ತಿದ್ದುವ ಕೆಲಸವನ್ನು ನಾಳೆ ನೀವು ಸನ್ಯಾಸಿಗಳಾದ ಮೇಲೆ ಮಾಡಿದರೆ, ದೇವರು ಮೆಚ್ಚದಿದ್ದರೂ ನೀವೇ ಆದರೂ ಮೆಚ್ಚಿಕೊಳ್ಳಬಹುದು.

ಆಯ್ಯಾ ಅಪ್ಪಣ್ಣ! ನೀನು ಬಹು ದಿನಗಳಿಂದ ನನ್ನ ವಿಚಾರದಲ್ಲಿ ನನ್ನ ತಂದೆಯ ಮನಸ್ಸನ್ನು ಕೆಡಿಸುತ್ತಾ, ನನ್ನ ಮತ್ತೂ ನನ್ನ ಸ್ನೇಹಿತರ ವಿಚಾರದಲ್ಲಿ ಸುಳ್ಳುಪೊಳ್ಳು ಅನಿಷ್ಟಗಳನ್ನೆಲ್ಲಾ ಸೃಷ್ಟಿಮಾಡಿ ನಮ್ಮ ತಂದೆಯ ಕಿವಿಯಲ್ಲಿ ಊದುತ್ತಾ, ನಮ್ಮ ಕುಟುಂಬದಲ್ಲಿ ತಂದು ಒಡ್ಡುತ್ತಿರುವ ಒಡಕಿನಿಂದ, ನನ್ನ ಮನಸ್ಸು ಬಹಳ ಕೆಟ್ಟಿದೆ. ನಾನೂ ಸಹಿಸಿ ಸಹಿಸಿ ಸಾಕಾಗಿ ರೋಸಿ ಹೋಗಿದ್ದೇನೆ. ಈ ಕಾಗದ ನಿನಗೆ ಕೊನೆಯದಾಗಿ ಬರೆದಿದ್ದೇನೆ. ನಾನು ಪರೀಕ್ಷೇಲಿ ಫೇಲಾದರೆ ನಿಮ್ಮಪ್ಪನ ಗಂಟೇನು ಖರ್ಚಾಗಲಿಲ್ಲ ನಾನು ಕ್ರಿಕೆಟ್ಟು, ನಾಟಕ, ಸಂಗೀತಗಳಲ್ಲಿ ಕಾಲ ಕಳೀತಿದ್ದರೆ ನಿನ್ನ ಸಂಪಾದನೆಗೇನೂ ಕೊರತೆಯಾಗಲಿಲ್ಲ. ನೀನೂ ನನ್ನಂತೆ ವಿದ್ಯಾರ್ಥಿಯಾಗಿದ್ದಾಗ ಎಷ್ಟು ದಿವ್ಯವಾಗಿ ಓದುತ್ತಾ ಇದ್ದೆ, ಹೇಗೆ L. M. P. ಮೊದಲನೆಯ ಕ್ಲಾಸಿನಲ್ಲೇ ಮೂರು ವರುಷ ಕುಂಟಿ ಕುಕ್ಕರಿಸಿದೆ, ಮುಂದೆ ನಾಲ್ಕನೆಯ ವರ್ಷ ಹ. ಕುಂ. ರಹಿತರಾದ........

ಶ್ರೀ ಅವರ ವಿಚಾರದಲ್ಲಿ ಅವಾಂತರವಾಗಿ ಕಡೆಗೆ ಆ ಸ್ಕೂಲನ್ನೇ ಬಿಟ್ಟು ಹೇಗೆ ಭಿಷಗಾಚಾರ್ಯನಾಗಿ ಕೂತೆ, ಅನ್ನುವ ವಿಚಾರವೆಲ್ಲಾ ನಮ್ಮ ಅಸೋಸಿಯೇಷನ್ನಲ್ಲಿ ರುಜುವಾತಾಗಿ ರಿಕಾರ್ಡಾಗಿದೆ—ಚಿಕ್ಕವರಿಗೆ ಬುದ್ಧಿ ಹೇಳೋ ಈ ಕಸಬುದಾರಿಕೇನ ಬಿಟ್ಟು, ನಿನ್ನನ್ನ ನೀನು ತಿದ್ದಿಕೋವ್ಮಾ ಬೆಳಗೊಳದ ಕರುವೇ! ಆಗ ದೇವರು ಮೆಚ್ಚುತಾನೆ. ಇನ್ನು ಮುಂದೆ ನಮ್ಮ ಸಂಸಾರದ ಗೋಜಿಗೆ ಬಂದರೆ, ನಮ್ಮ ತಂದೇ ಕಿವೀಲಿ ನನ್ನ ವಿಚಾರ ಏನಾದರೂ ಸುಳ್ಳುಪಳ್ಳು ಊದಿ, ಅವರು ಮನೆಗೆ ಬಂದು ನನ್ನ ಮೇಲೆ ರೇಗಿದ್ದೇ ಆದರೆ, ಮಾರನೆಯ ದಿನದಿಂದ ನಿನ್ನ ಗುಳಿಗೆಗಳನ್ನ ನೀನೇ ಗಂಟಲಿನಲ್ಲಿ ಹಾಕಿಕೊಂಡು ನೀರು ಕುಡಿದು, ಬಂತೆ ಹೊತ್ತು ಕೊಂಡು ಊರು ಬಿಡುತ್ತಿರಬೇಕು -- ಹಾಗೆ ಮಾಡುತ್ತೇನೆ ಎಚ್ಚರವಾಗಿರು. ಇಷ್ಟರಮೇಲೂ ನಿನಗೆ ಬುದ್ಧಿವಾದ ಹೇಳುತ್ತಿರಬೇಕು ಅನ್ನೋ ಚಟ ಹೆಚ್ಚಿ ನಾಲಗೆ ಕಡಿತವಾದರೆ, ನಿನ್ನ ಕಾಂಪೌಂಡರ್ ಇದಾನಲ್ಲ ಬೃಹಸ್ಪತಿ ಅವನ ಕೈಲಿ ಪೆನ್ಸಿಲ್ ಕೊಟ್ಟು ಒಂದು ಬೃಹದ್ವ್ಯಾಖ್ಯಾನಾದರೂ ಬರೆಸು. ಮುಂದೆ ನಿನ್ನ ಮಗ ರಾಮು ಅದನ್ನ ರಾಗ ತಾಳಗಳಿಂದ ರಸವತ್ತಾಗಿ ಮಾಡಿ. ಹರಿಕಥೆ ಮಾಡುತ್ತಾ ಪ್ರಚಾರ ಮಾಡುತ್ತಾನೆ. ನಿನ್ನಂಥ ಸ್ವಪ್ರತಿಷ್ಠೆ ದುರಹಂಕಾರಿ ಒಣನಿಂಬೇಕಾಯಿಗೆ ಹೆಚ್ಚಾಗಿ ಬರೆಯಲು ಇಷ್ಟವಿಲ್ಲ—ಇತಿ ಎಚ್ಚರಿಕೆಗಳು.

ನಿನಗೆ ಯಾವ ರೀತಿ ಸಂಬಂಧಿಸದಿದ್ದರೂ ನಿಷ್ಕಾರಣವಾಗಿ ನಿನ್ನಿಂದ ಬಾಧಿಸಲ್ಪಟ್ಟು ರೇಗಿದ ನಿನ್ನ ಗುರು,

—ಎನ್. ಸುಂದರರಾವ್.

ವಿ. ಸೂ.—ಈ ಕಾಗದವನ್ನು ಹತ್ತುಬಾರಿ ಓದಿಕೊಂಡು ಹರಿದು ಹಾಕಿಬಿಡು.

ಸಾವಿ:—(ಆಶ್ಚರ್ಯ ಸಂತಾಪಗಳಿಂದ) ಇದೇನು ದುರ್ಬುದ್ಧಿ ಬಂತು ಈ ಹುಡುಗನಿಗೆ!

ಸೂರ:—ಯಾಕೆ ಹೀಗೆ ಹುಚ್ಚಾಬಟ್ಟೆ ಬರೆದಿದಾನೆ ಆತನಿಗೇ?

ಲಿಂಗ:—ಪಾಪ! ಬಹಳ ಸಂಕಟಪಟ್ಟು ಬರೆದಿದಾನೆ. ಮುಖ್ಯ ನಂಜೂಗೆ ಬುದ್ಧಿ ಇಲ್ಲ. ಅವನಿಗೆ ಮನೇದು ಮದ್ದು ಹೊರಗಿನದು

ಮುದ್ದೂಂತ ಆಗಿಹೋಗಿದೆ. ಅಯ್ಯೋ ಪಾಪ! ಎಷ್ಟು ನೊಂದು ಬರೆದಿರ ಬೇಕು ಆ ಹುಡುಗ.

ಸಾವಿ:—ತಂದೆಯು ಸ್ನೇಹಿತರಿಗೆ ಹೀಗೆ ಅಗೌರವವಾಗಿ ನೀನೂ ತಾನೂ ಅಂತ ಬರೀಬಾರದಾಗಿತ್ತು ಮಾವಯ್ಯಾ. ಅದಕ್ಕೇ ಅವರಿಷ್ಟು ರೇಗಿಬಿಟ್ಟಿದ್ದಾರೆ. ಈ ಸಿಟ್ಟಿನಲ್ಲಿ ಇನ್ನೇನೇನಾಗುತ್ತೋ!

ಲಿಂಗ:—ಅವನು ಬರೆದಿರೊ ರೀತಿ ವಕ್ರವಾಗಿ ಹುಡುಗಾಗಿದ್ದರೂ, ವಿಚಾರ ನ್ಯಾಯುವಾಗಿದೆ. (ಆ ಕಾಗದವನ್ನು ಕೆಳಗಿಟ್ಟು ಮತ್ತೊಂದು ಲಕೋಟೆ ಯನ್ನು ತೆಗೆದು) ನಂಜೂ ಅಡ್ರಸ್‌ಗೆ (ಒಳಗಿನಿಂದ ಎರಡು ಹಾಳೆಗಳನ್ನು ತೆಗೆದು ಮೇಲಿನದನ್ನು ಮುಗುಚಿನೋಡಿ) ದೇವರಯ್ಯ ಬರೆದದ್ದು.

ಸೂರ:—ನಿಮ್ಮ ಅಳಿಯನೇ?

ಲಿಂಗ:—ಹೌದೂ.

ಸೂರ:—ಆ ಇನ್ನೊಂದು ಹಾಳೆ?

ಲಿಂಗ:—(ತಿರುಗಿಸಿ ನೋಡಿ) ಇದು ದೇವರಯ್ಯನಿಗೆ ಸುಂದರು ಬರೆದದ್ದು.

ಸಾವಿ:—ಇದೇನು ಹುಚ್ಚು ಬಂತು ಈ ಹುಡುಗನಿಗೆ! ಎಂಥ ಗಳಿಗೇಲಿ ಎದ್ದ ಈ ದಿನ! ಇನ್ನು ಇವರಿಗೇನು ಹುಚ್ಚಾಪಟ್ಟೆ ಬರೆದು ಬಿಟ್ಟಿದ್ದಾನೋ ಏನೋ! ಓದಿ ಮಾವಯ್ಯ!

ಲಿಂಗ:—ಅಂಥ ಹುಡುಗನಲ್ಲಮ್ಮ ಅವನು. ಬಹಳ ತಿಳುವಳಿಕಸ್ತ; ಒಳ್ಳೇ ಪ್ರೇಮಿ; ಮನೆ, ವಂಶ, ಸತ್ಯ. ಧರ್ಮಾಂದರೆ ಬಹಳ ಶ್ರದ್ಧೆ— ಬಹಳ ಗೌರವ ಅವನಿಗೆ.

ಸಾವಿ:—ನಿಮ್ಮ ಪ್ರೀತೀಲಿ ಅವನು ಮಾಡೋ ತಪ್ಪೊಂದೂ ಕಾಣೋಲ್ಲ. ಓದಿ ಮಾವಯ್ಯಾ ಅದನ್ನ!

ಲಿಂಗ:—"ತೀರ್ಥಸ್ವರೂಪರಾದ ಭಾವನವರ ಸನ್ನಿಧಿಯಲ್ಲಿ ದೇವರ ಯ್ಯನು ಮಾಡುವ ಅನಂತ ಸಾಷ್ಟಾಂಗ ನಮಸ್ಕಾರಗಳು ಅದಾಗಿ ಈ ವರೆವಿಗೆ ಉಭಯ ಕುಶಲೋಪರಿ ಸಾಂಪ್ರತ.

" ಹೋದವಾರ ನಾನು ಕೋರ್ಟ ಕೇಸಿಗಾಗಿ ಅಲ್ಲಿಗೆ ಬಂದಿದ್ದಾಗ, ನಾನೂ ನೀವೂ ಸೇರಿ ಚಿ. ಸುಂದರ ಮತ್ತು ನಮ್ಮ ಚಿ. ಸೌ. ಗಂಗಮ್ಮನ ವಿವಾಹದ ವಿಚಾರವನ್ನು ಕಟ್ಟಕಡೆಗೆ ತೀರ್ಮಾನಿಸಿದ ಸಂಗತಿಯು ಮಾವನವರ ಕಿವಿಯನ್ನೂ ನಿಮ್ಮ ಧರ್ಮಪತ್ನಿಯವರ ಕಿವಿಯನ್ನೂ ಮುಟ್ಟಿಲ್ಲವೆಂದು ತೋರುತ್ತದೆ"

ನನಗೇ ಗೊತ್ತಿಲ್ಲವೇ ದೇವರಯ್ಯಾ ಬಂದಿದ್ದದ್ದು !!

ಸಾವಿ:—ಆ ಹುಡುಗನ ಮದುವೆಗೂ ಬಲವಂತವೇ !

ಲಿಂಗ:—ಆ ಹುಡುಗನಿಗಿಷ್ಟವಿಲ್ಲ; ಗಂಗೇಗೆ ಬೇರೆ ಗಂಡು ನೋಡೋಣಾಂತ ಅಷ್ಟು ಬಗೇಲಿ ಹೇಳಿದೀನಿ—ಇಷ್ಟಾಗಿ ಇವನಿಗೆ ಇನ್ನೂ ಬುದ್ಧಿ ಬರಲಿಲ್ಲವಲ್ಲ.

ಸಾವಿ:—ಓದಿ ಮಾವಯ್ಯಾ ಮುಂದಕ್ಕೆ.

ಲಿಂಗ:—"ಕಿವಿಯನ್ನು ಇನ್ನೂ ಮುಟ್ಟಿಲ್ಲವೆಂದು ತೋರುತ್ತದೆ" ಆಯಿತಲ್ಲ .. ....

"ಆದರೆ ಈ ವಿಚಾರ ನಿಮ್ಮ ಮಗನ ಕಿವಿಗೆ ಹೇಗೆ ಬಿದ್ದಿತೋ;— ಇಲ್ಲಾ ಅವನೇ ಏನಾದರೂ ಕೋರ್ಟ ಕಾಂಪೌಂಡಿನ ಆ ಹೂವರ್ಚಿ ಮರದ ಹಿಂದೆ ಬಚ್ಚಿಟ್ಟುಕೊಂಡು ಕೇಳಿಸಿಕೊಂಡನೋ ಹೇಗೋ— ಅಂತೂ ನಾಲ್ಕು ದಿನಗಳ ಕೆಳಗೆ ನಿಮ್ಮ ಚಿರಂಜೀವಿಯಿಂದ ನನಗೆ ಈ ಪತ್ರ ಬಂದಿದೆ. ಅದನ್ನೇ ನಿಮ್ಮ ಅವಗಾಹನೆಗಾಗಿ ಇದರೊಂದಿಗೆ ಕಳುಹಿಸಿರುವುದರಿಂದ ಅದರ ವಿಚಾರ ಹೆಚ್ಚಿಗೆ ಬೆಳೆಸಲು ಇಷ್ಟವಿಲ್ಲ. ಮುಖ್ಯವಾಗಿ ನಾನು ಸಂಸಾರವನ್ನು ಆರಂಭಿಸುವ ಮೊದಲು ನೀವು ದಯೆಯಿಟ್ಟು ಮಾಡಿದ ವಾಗ್ದಾನವು ನೆರವೇರಲು ಅಡ್ಡಿಯಲ್ಲಾ ಎಂದೂ, ನಮ್ಮ ಬಡವರ ಮನೆಯ ಗಂಗೆಗೆ ನಿಮ್ಮ ಮನೆಯಲ್ಲಿ ರಕ್ಷಣೆ ಸಿಕ್ಕಲಿಲ್ಲ ವಲ್ಲಾ ಎಂದೂ ವ್ಯಸನ. ಮುಖ್ಯ ದೈವಸಂಕಲ್ಪ. ಬಹುಶಃ ಈ ಸಂಬಂಧ ನಿಮ್ಮ ಪತ್ನಿ ....ಯವರಿಗೆ....ಇಷ್ಟವಿರಲಾರದೆಂದು ನಿಮ್ಮ ತಂಗಿ ಚಿ. ಸೌ. ಗೌರಿ ಅನುಮಾನಿಸಿದಳು. ಆದರೆ ಅದನ್ನ ನಾನು ನಂಬಲಿಲ್ಲ."

ಇಂತಿ ನಮಸ್ಕಾರಗಳು,

ಚಿ. ದೇವರಯ್ಯ.

........ಛೀ ! ಛೀ ! ಎಂಥ ಕೃತ್ರಿಮದ ಮಾತು.

ಸಾವಿ:—(ದುಃಖದಿಂದ)ನಾನು ಯಾವ ಮಾತಿಗೂ ಬರದೆ ಅಡುಗೆಯ ಮನೆಯಲ್ಲೇ ಜೀವಮಾನಾನೆಲ್ಲಾ ಕಳೀತಿದ್ದರೂ, ಅತ್ತಿಗೆ ನನ್ನಲ್ಲಿ ಅನುಮಾನಪಟ್ಟರೇ?....ಮುಖ್ಯ ನನ್ನ ದುರಾದೃಷ್ಟ ಒಳ್ಳೇ ಪೂಜೆ ಮಾಡಿದ್ದಿದ್ದರೇ... ....

ಲಿಂಗ:—(ಸಮಾಧಾನಪಡಿಸುತ್ತಾ) ಸಾವಿತ್ರೀ! ತಾಯಿಾ! ಗೌರಿ ನಿಜವಾಗಿಯೂ ಹಾಗಂದಿರಲಾರಳು. ಅವಳದು ದೊಡ್ಡಗುಣ. ಈ ಪಾತಾಳಗರಡೀ ವಿದ್ಯೆಯೆಲ್ಲಾ ಅವನದೇ.

ಸಾವಿ:—ಈ ಹುಡುಗಪಾಳ್ಯದ ಕಾಗದ ಓದಿಬಿಡಿ ಮಾವಯ್ಯಾ; ಭಾವನವರನ್ನ ಇಷ್ಟು ರೇಗಿಸೋದಕ್ಕೆ ಇದೇನೇನು ಬರೆದುಬಿಟ್ಟಿದೆಯೋ!

ಲಿಂಗ:—ಈ ಎರಡು ಕಾಗದಗಳೂ ಒಟ್ಟಿಗೆ ಈ ದಿನವೇ ಇವನ ಕೈಗೆ ಬರಬೇಕೇ. ಹುಂ. (ಕೆಳಗಿನ ಹಾಳೆಯನ್ನು ಮಗುಚಿ)

"ತೀರ್ಥರೂಪ ಶ್ರೀಮಾನ್ ದೇವರಯ್ಯನವರ ಸನ್ನಿಧಿಯಲ್ಲಿ ಬಾಲಕ ಸುಂದರನ ಅನಂತಾನಂತ ವಂದನೆಗಳೊಡನೆ ಕಡೆಯ ಬೇಡಿಕೆ.

"ಮದುವೆಯಾಗಿ ಮುಂದೆ ಹುಡುಗಿಯೊಂದಿಗೆ ಆಜೀವಪರ್ಯಂತವೂ ಸಂಸಾರ ಮಾಡಿಕೊಂಡಿರಬೇಕಾದ ಭಾರವನ್ನು ತಲೆಯಲ್ಲಿ ಹೊರಬೇಕಾದ ನಾನೇ ಮದುವೆಗೆ ಒಲ್ಲೆನೆಂದು ಒಂದು ಬಾರಿಯಲ್ಲ, ಹತ್ತು ಬಾರಿಯಲ್ಲ, ನೂರು ಬಾರಿ ನಿಮ್ಮಲ್ಲಿ ಘಂಟಾಘೋಷವಾಗಿ ಹೇಳಿ, ನಿಮ್ಮ ಕಿವಿಗಳಲ್ಲಿ ಒದರಿ, ಕೂಗಿ, ಅರಚಿ ಕಿರಿಚಿದ್ದರೂ ಸಹ, ತಾವು ಮತ್ತೆ ದೊಡ್ಡ ಮನಸ್ಸು ಮಾಡಿ, ಮೊನ್ನೆ ಕೋರ್ಟ್ ಕಾಂಪೌಂಡಿನ ಹೂವರ್ಚಿ ಮರದ ಕೆಳಗೆ ನಮ್ಮ ತಂದೇನ ಕೂಡಿಸಿಕೊಂಡು, ನನ್ನ ಮದುವೆಯ ಲಗ್ನ ನಿಷ್ಕರ್ಷೆ ಮಾಡಿಸುವ ಪಿತೂರಿ ನಡೆಸಿದುದು ನನಗೆ ತುಂಬ ವ್ಯಸನವನ್ನುಂಟು ಮಾಡಿದೆ. ನಾನು ನಮ್ಮ ತಂದೆಯ ಮಾತನ್ನು ಮಿಾರದಂತೆ, ಅವರಿಗೆ ಅಚ್ಚುಮೆಚ್ಚಾಗಿ ನಡೆದುಕೊಂಡು ಅವರ ಮನಸ್ಸಿಗೆ ಸಂತೋಷವನ್ನುಂಟು ಮಾಡಬೇಕೆಂದು ಎಷ್ಟು ಪ್ರಯತ್ನಿಸಿದರೂ, ನಿಮ್ಮಂಥಾವರಿಂದ ನನಗೂ ಅವರಿಗೂ ಇರುವ ದಿವ್ಯ ಸಂಬಂಧ ಹುಳಿಯಾಗುತಾ ಇದೆ. ನಾನು

ನಿಮ್ಮಲ್ಲಿ ಬೇಡುವದಿಷ್ಟೆ; ನನಗೆ ಮದುವೆಯೇ ಇಷ್ಟವಿಲ್ಲ. ಮುಂದೆ ಮದುವೆಯಾದರೂ, ನಿಮ್ಮ ಮಗಳು ಚಿ. ಸೌ. ಗಂಗಮ್ಮನನ್ನು ದೇವ ರಾಣೆಗೂ ಮದುವೆಯಾಗುವುದಿಲ್ಲ. ನಿಮ್ಮಾಣೆಗೂ ಆಕೆಯು ನನಗೆ ತಂಗಿ. ಆಕೆಗೆ ವರನನ್ನು ಹುಡುಕುವುದು ನಿಮಗೆ ತೊಂದರೆಯಾದರೆ, ನಾನು ಹುಡುಕಿ ಕೊಡುತ್ತೇನೆ. ಒಂದು ವೇಳೆ ಆಕೆಗೆ ಇತರರನ್ನು ಮದುವೆಯಾಗಲು ಇಷ್ಟವಿಲ್ಲದ ಪಕ್ಷಕ್ಕೆ, ನಾನು ಆಕೆಯನ್ನು ನನ್ನ ತಂಗಿ ಯಂತೆ ಜೀವಂತನಾಗಿರುವವರೆಗೂ ಸಾಕುತ್ತೇನೆ. ನಿಮಗೂ ನಮ್ಮ ತಂದೆಗೂ ಹಿಂದೆಯೇ ನಾನು ಹಸುಗೂಸಾಗಿದ್ದಾಗಲೇ ನಡೆದಿದ್ದಿತೆಂಬ ಒಪ್ಪಂದಕ್ಕೆ, ನನ್ನ ಜೀವನವನ್ನು ಬಲಿಗೊಡಬೇಡಿ. ನೀವು ಈ ವಿಚಾರ ವನ್ನು ಇನ್ನೂ ಒತ್ತಾಯ ಮಾಡಿದರೆ ಮುಂದಾಗಬಹುದಾದ ಅನರ್ಥ ಗಳಿಗೆ ನೀವೇ ಗುರಿಯಾಗುವಿರಿ. ಎಚ್ಚರ."

ಇತಿ ಸಾಷ್ಟಾಂಗ ನಮಸ್ಕಾರಗಳು,

ಎನ್. ಸುಂದರರಾವ್.

ಸೂರ: ನಿಜ ಲಿಂಗಪ್ಪಯ್ಯನವರೇ! ಹುಡುಗ ಬಹಳ ನೊಂದು ಬರೆದಿದಾನೆ. ಅದು ಯಾಕೆ ನಂಜುಂಡಯ್ಯನವರು ಈ ವಿಚಾರದಲ್ಲಿ ಇಷ್ಟು ಹಟ ತೊಟ್ಟಿದಾರೆ.

ಲಿಂಗ: - ಅವನು ಸ್ವಭಾವದಿಂದಲೇನೇ ಹಟಮಾರಿ.

ಸಾವಿ: —ಅವರ ಮಾತುಳಿಸೋದಕ್ಕೋಸ್ಕರ ಇವನು ಈ ಮದುವೆಗೆ ಒಪ್ಪಿಬಿಟ್ಟರೆ ಅವರಿಗೆಷ್ಟು ಸಂತೋಷವಾಗುತ್ತೆ ಮಾವಯ್ಯಾ!

ಲಿಂಗ: —ಇವನ ಒಂದು ಘಳಿಗೆ ಸಂತೋಷಕ್ಕೋಸ್ಕರ, ಅಹಂಕಾರ ತೃಪ್ತಿಗೋಸ್ಕರ, ಹುಡುಗನ ಬಾಳನೇ ಬಯಲುಮಾಡೋದೆ-- ಚೆನ್ನಾಗಿದೆ.

(ಹೊರಗಡೆ ಬಾಗಿಲಬಳಿ ಹೆಜ್ಜೆಯ ಸಪ್ಪಳ)

ಸಾವಿ: --ಅವರೇ ಬಂದರೇನೋ! ಮಾವಯ್ಯಾ ನೀವೇ ಸಮಾ ಧಾನ ಮಾಡಬೇಕು. (ಆತಂಕಗೊಂಡು ಒಳಕ್ಕೆ ಹೋಗುವಳು)

ಸೂರ:— ನಾನು ಬರುತೇನೆ ಲಿಂಗಪ್ಪಯ್ಯನವರೇ! ಮತ್ತೆ ಮಧ್ಯಾನ್ಹ ನಾನೇ ಬರುತೇನೆ.

ಲಿಂಗ:—ತಡೀ ಸೂರಪ್ಪ, ಯಾರು ಬಂದರು ಹೋಗಿ ನೋಡು ಬಾಗಿಲು ಬಳಿ. (ಸೂರಪ್ಪನು ಹೋಗಿ ಬಾಗಿಲು ಅಗುಳಿ ತೆಗೆದು ನೋಡುವನು)

ಸೂರ:—(ಹಿಂದಿರುಗಿ) ಯಾರೂ ಇಲ್ಲ.

ಲಿಂಗ:—ಸ್ವಲ್ಪ ಬಾಗಿಲು ಹಾಕಿ ಬಾ—ಎರಡು ನಿಮಿಷ. (ಸೂರಪ್ಪನು ಹೋಗಿ ಬಾಗಿಲು ಅಗುಳಿ ಹಾಕಿಬರುವನು.) (ಮೂರನೆಯ ಲಕೋಟೆ ಯಿಂದ ಕಾಗದವನ್ನು ಹಿರಿದು ನೋಡಿ) ಓಹೋ! ಈವತ್ತಿನ ಉದ್ರೇಕಕ್ಕೆ ಮುಖ್ಯ ಕಾರಣ ಇಲ್ಲಿದೆ ನೋಡಪ್ಪ. ತಿಂಗಳಿಗೈದು ರೂಪಾಯಿ ಈ ಬೃಹಸ್ಪತಿಗೆ ಮುಡಿಪು ಕಟ್ಟಿ ಮುಂದೆ ಒಂದು ತಿಂಗಳ ಭವಿಷ್ಯನೆಲ್ಲಾ ತರಿಸು ತಾನೆ. ಅದರಲ್ಲಿ ಬರೆದಿರೋ ಅನಿಷ್ಟಗಳು ಜರುಗಲೇ ಬೇಕೂಂತ ನಿಷ್ಟಲ ಭಕ್ತಿ. ಮತ್ತೆ ಜರುಗಿಸೋ ಸಾಹಸ ಪ್ರಯತ್ನ. ಏನು ಹೇಳೋದು ನಮ್ಮ ನಂಜುಂಡನ ಸಂಸ್ಕಾರಾನ ಸೂರಪ್ಪ. ಅವನ ಸ್ನೇಹಿತರುಗಳೋ ಅವನನ್ನು ಬೆದರಿಸಿ ಕಿತ್ತುಕೊಂಡು ತಿನ್ನುವರೇ ಹೊರತೂನೂವೇ, ಅವನಿಗೆ ಧೈರ್ಯಕೊಟ್ಟು ಸಲಹೆ ಹೇಳಿ, ಸಮಾಧಾನ ಮಾಡಿ, ಒಳ್ಳೆಯ ಮಾತುಗಳಿಂದ ತಿದ್ದುತಾ ವ್ಯವಹಾರ ವಿವೇಚನೇ, ವಿಶಾಲ ದೃಷ್ಟಿ ಬರೋದಕ್ಕೆ ಸಹಾಯ ಮಾಡೋ ಅಂಥ ಸೊಳ್ಳೆಗಳನೇ ಕಾಣೆ—ಅವನ ಸುತ್ತಣ ಗುಂಪಿನಲ್ಲಿ.

ಸೂರ:—ಅವನು ಯಾರು ಈ ಭವಿಷ್ಯ ಬರಿಯೋನು?

ಲಿಂಗ:—ಅವನೊಬ್ಬ ಹಗಲುಗಳ್ಳ—ಮನೆ ಹಾಳ. ಪೋಸ್ಟ್ ಮೇಸ್ಟರು ನರಸಿಂಗರಾಯನ ನೆಂಟ. ಮನುಷ್ಯನ ಭವಿಷ್ಯ ಅವನಿಗೆ ಕಂಡು ಬಂದುಬಿಟ್ಟರೆ, ಅವನ ಕೈಗೆ ಬಂದಿರೋ ಅಲ್ಪ ಸ್ವಲ್ಪ ಸುಖಾನೂ ಬಯಲಾಗಿ, ಅವನು ಜೀವಂತನಾಗಿರೋ ವರೆಗೂ ಭವಿಷ್ಯದ ಭಯದಲ್ಲಿ ನಡುಗುತಾ ಜೀವಚ್ಛವವಾಗತಾನೇಂತಲೇ, ಭವಿಷ್ಯಾನ ಇವನ ಕಣ್ಣಿಗೆ ಕಾಣದಂತೆ ದೇವರು ಗೋಪ್ಯವಾಗಿ ಬಿಟ್ಟಿರೋದು. ಅಂಥಾದ್ದರಲ್ಲಿ ಅದನ್ನ—ಅಂದರೆ ಸುಳ್ಳೋ ಪಳ್ಳೋ ಏನೋ ಒಂದು ಭವಿಷ್ಯಾಂತ ಹೇಳಿ ದರೆ ಸಾಕು, ದೇವರ ವಾಣೀಗಿಂತ ಹೆಚ್ಚಾಗಿ ಅದನ್ನ ನಂಬೋ ಕುರಿಗಳಿಗೆ

ಅದರಿಂದ ತಮ್ಮ ಸಹಜವಾದ ಮನಶ್ಶಾಂತೀನ ಹಾಳುಮಾಡಿಕೊಳ್ಳೊ ಆ ಅಲ್ಪರಿಗೆ ಏನು ಹೇಳೋಣ?

ಸೂರ:—ಓದಿ ಲಿಂಗಪ್ಪಯ್ಯನೋರೆ ಅದನ್ನ—ಏನು ಬರೆದಿದಾನೋ ನೋಡೋಣ.

ಲಿಂಗ:—"ಎಸ್. ನಂಜುಂಡಯ್ಯ…ಹುಟ್ಟಿದ ತಾರೀಖು ೧೮೯೬ನೇ ನವೆಂಬರ್ ೧೩. ಹುಟ್ಟಿದ ಹಬ್ಬಕ್ಕೆ ನಲವತ್ತು ವರುಷಗಳು ಕಳೆದುವು. ಮುಂದಿನ ಹದಿನೈದು ದಿವಸಗಳ ವಿವರ ಭವಿಷ್ಯ. ನೀವು ಬಹಳ ಸರಳ ಸ್ವಭಾವದವರಾದ್ದರಿಂದ ಈ ತಿಂಗಳು ನಿಮ್ಮ ನೆಂಟರು ಇಷ್ಟರು ನಿಮ್ಮಿಂದ ಸ್ವಾರ್ಥವನ್ನು ಗಳಿಸಲು ಹವಣಿಸುವರು. ತತ್ಪರಿಣಾಮವಾಗಿ ನೀವು ತೊಂದರೆಗೆ ಸಿಕ್ಕುವಿರಿ. 'ಕೈ ಹಿಡಿದ ಹೆಂಡತಿಗಿಂತ ಕೂಡಿದ ಮಿತ್ರನೇ ಮೇಲು' ಎಂಬಂತೆ ನಿಮ್ಮ ಮನೆಯುವರೇ ಎದುರಾಗಬಹುದು. ತತ್ಪರಿಣಾಮವಾಗಿ ನೀವು ಕುಪಿತರಾಗಬಹುದು. ನಿಮ್ಮ ದೈವಭಕ್ತಿಯು ಅಪಾರವಾದದ್ದರಿಂದ ಅವರು ಮುಂದೆ ನಿಲ್ಲಲಾರರು. ನಿಮಗೆ ಮನನೋಯುವಂಥ ಸಂಗತಿಗಳು ಜರುಗಬಹುದು. ಹಣಕಾಸಿನ ವಿಚಾರದಲ್ಲಿ ಎಚ್ಚರವಾಗಿರಿ. 'ಕೂಡಿಟ್ಟ ಹಣ ಕಡೆಯುತನಕ' ಎಂಬುದನ್ನು ನೆನಪಿನಲ್ಲಿಡಿ. ನಿಮ್ಮ ದೇಹಾರೋಗ್ಯದ ಕಡೆ ಎಚ್ಚರವಿರಲಿ. 'ನಾಹ್ಯಾರೋಗ್ಯ ಸಮಂ ಭಾಗ್ಯಂ' ಆರೋಗ್ಯ ಕೆಡದಂತೆ ನೋಡಿಕೊಳ್ಳಿ. ಹೆಚ್ಚು ಔಷಧಿ ಪತ್ಯಗಳು ಗುಣ ತೋರದೇ ಹೋದಾವು.

ಸೂರ:—(ಬಾಗಿಲ ಕಡೆ ನೋಡಿ) ಓಹೋ ಯಾರೋ ಬಂದ ಹಾಗೆ ಹೆಜ್ಜೆ ಸಪ್ಪಳ. ನಾನು ಇನ್ನು ಹೊರಡುತೇನೆ; ಬರುತೇನೆ ಲಿಂಗಪ್ಪಯ್ಯನವರೇ!

[ಲಿಂಗಪ್ಪಯ್ಯನು ಕಾಗದಗಳನ್ನು ಲಕೋಟೆಗಳಲ್ಲಿ ಹಾಕಿ ಮುಚ್ಚಿಟ್ಟು ನಿಲ್ಲುವನು. ಸೂರಪ್ಪನು ಹೋಗಿ ಬಾಗಿಲು ತೆರೆದುಕೊಂಡು ಹೊರಟುಹೋಗುವನು — ಕ್ಷಣಕಾಲದಲ್ಲಿ ಹೊರಗಿನಿಂದ ಹದಿನೆಂಟು ವರುಷದ ಮುದ್ದುಮುಖದ ಸುಂದರ ಮೂರ್ತಿ ಕೈಲೊಂದು ಚಿಕ್ಕಪುಸ್ತಕ, ಕಂಕುಳಲ್ಲಿ ಒಂದು ಹಾಕಿ ಬ್ಯಾಟ್ ಹಿಡಿದು ಹಾಡುತ್ತಾ ಪ್ರವೇಶಿಸುವನು.]

ಸುಂದರ—ಜನ್‌ಮೇ ಕೋಈ ನಹೀಂ ಅಪನಾ ।
ದೌಲತ್ ದುನಿಯಾಂ ಮಾಲ್ ಖಜಾನ್ ।
ಸಬ್ ಸಂಪತ್ ಸಪನಾ । ಸಮಝ್‌ ಮನ ।
ಕೊಈ ನಹೀಂ ಅಪನಾ ॥ (ತಾತನ ಕಡೆ ತಿರುಗಿ ಅಭಿನಯಿಸುತ್ತಾ)
ಸಬ್ ದೋಸ್ತೋಂ ಹೈಂ ಅಪನೆ ಮತ್‌ಲಬ್‌ಕೆ
ಜಗ್‌ಮೆ ಕಿಸೀಕಾ ಕೋಈ ನಹೀಂ । ಸಮಝ್ ಮನ್ ॥

ಲಿಂಗ:—ಏನಯ್ಯಾ ಹೀಗಂದರೇ? ಎಲ್ಲೀದು ಈ ಹಾಡು ?

ಸುಂದರ:—ಇದು ನಾವು ಬರೋ ತಿಂಗಳು ನಮ್ಮ ಅಸೋಸಿಯೇಷನ್ ಡೇ ಗೆ ಆಡಬೇಕೂಂತಿರೋ "ಅಪ್ಪನ ಮಗ" ಅನ್ನೋ ಸಾಮಾಜಿಕ ನಾಟಕದಲ್ಲಿ ಪ್ರಾಯದ ಮಗ ತನ್ನ ಮುದಿ ಅಪ್ಪನನ್ನ ಮನೆಬಿಟ್ಟು ಹೊರಡಿಸಿಬಿಟ್ಟಾಗ ಅವನು ಹಾಡು ಹೇಳುತಾನೇ····ಹೋಗುತಾ····ಅದರ ಮಟ್ಟು ಇದು.

ಲಿಂಗ:—ಮನೆಬಿಟ್ಟು ಹೋಗುತಾ ಹಾಡು ಹೇಳುತಾ ಹೋಗತಾನೆಯೋ? ಎಲ್ಲಾದರೂ ಉಂಟೇ?

ಸುಂದರ:—ಉಂಟು.

ಲಿಂಗ:—ಎಲ್ಲಿ?

ಸುಂದರ:—ನಾಟಕದಲ್ಲಿ.

ಲಿಂಗ:—ಅಷ್ಟೇನ್ನೊ....ಈಗ ನೀನು ಹಾಡಿದ ಹಾಡಿನರ್ಥ ಏನು?

ಸುಂದರ:—ಪ್ರಪಂಚದಲ್ಲಿ ನನ್ನವರೂಂತ ಯಾರೂ ಇಲ್ಲ. ಎಲೈ ಮನಸ್ಸೆ! ಇದನ್ನು ನೀ ತಿಳಿ! ಐಶ್ವರ್ಯ, ಆಸ್ತಿ, ಹಣ-ಕಾಸು ಇವೆಲ್ಲಾ ಸ್ವಪ್ನ ಸಮಾನಾಂತ.

ಲಿಂಗ:—ಯಾರು ಬರೆದದ್ದು ಆ ನಾಟಕ?

ಸುಂದರ:—ನಾನೇ ತಾತ!

ಲಿಂಗ:—(ಆನಂದ ಸಂತೋಷಗಳಿಂದ ಅಪ್ಪಿ) ಭೇಷ್! ಭೇಷಪ್ಪಾ! ಅಲ್ಲವೊ ಸುಂದರೂ! ನನಗೆ ತೋರಿಸಲೇ ಇಲ್ಲವಲ್ಲೋ ನಿನ್ನೀ ನಾಟಕಾನ?

ಸುಂದರ:—ಆಡಿದಾಗ ನಾಟಕಕ್ಕೇನೆ ಕರೆಕೊಂಡು ಹೋಗಿ ತೋರಿಸೋಣಾಂತ ಬರೆದದ್ದನ್ನ ತೋರಿಸಲಿಲ್ಲ.

ಲಿಂಗ: —ನಿನ್ನ ನಾಟಕದಲ್ಲಿ ಮಗ ತಂದೇನ ಮನೇಯಿಂದ ಹೊರ ಡಿಸಿ ಬಿಡುತಾನೋ ?

ಸುಂದರ:—ಹೌದು ತಾತ.

ಲಿಂಗ:— ಎಲ್ಲಿಂದ ತಗೊಂಡೆ ಈ ಕಥೇನ ?

ಸುಂದರ: -- ನನಗೇನೇ ಹೊಳೀತು ಯೋಚನೆ ಮಾಡುತಾ.

ಲಿಂಗ;—ಅಂದರೆ ನಿನ್ನ ನಾಟಕದಲ್ಲಿ ಮಗ ಮಾಡಿದುದು ತಪ್ಪೂ ಅಂತ ತೋರಿಸುತೀಯಾ ?

ಸುಂದರ:— ನಮ್ಮ ಸಾಮಾಜಿಕ ನಾಟಕದಲ್ಲಿ ಇವನದು ತಪ್ಪು.... ಇವನದು ಸರಿ ಇವನು ಪಾಪಿ···ಇವನು ಪುಣ್ಯಾತ್ಮ ಅಂತ ತೋರಿಸೋ ಪ್ರಯತ್ನವಿಲ್ಲ. ನಮ್ಮ ನಾಟಕಗಳು ಪಾತ್ರಪ್ರಧಾನವಲ್ಲ. ವಸ್ತುಪ್ರಧಾನ....

ಲಿಂಗ:—ಶಾಬಾಷಪ್ಪ ? ....ತುಂಬ ಮುಂದೆ ಹೊರಟು ಹೋಗಿ ದೀಯಾ? ಏನು ಹಾಗಂದರೆ ?

ಸುಂದರ: ನಮ್ಮ ನಾಟಕದಲ್ಲಿ ಪ್ರಪಂಚದಲ್ಲಿರೋ ಯಾವುದಾದ ರೂ ಇಬ್ಬರು ವಕ್ತಿಗಳಲ್ಲಿ ಪರಸ್ಪರ ಸರಸ ಪ್ರೀತಿ ಇದ್ದರೆ ಜೀವನ ಎಷ್ಟು ಮಧುರವಾಗಿರುತ್ತೆ; ಅದು ವಿರಸವಾದರೆ—ಅಂದರೆ ತಪ್ಪು ಯಾರದ್ದೂಂ ತಲ್ಲ....ಯಾವ ಕಾರಣದಿಂದಲಾದರೂ ಸರಿಯೇ. ಆ ಮಧುರ ಬಾಂಧವ್ಯ ವಿರಸವಾದರೆ ಅದೇ ಶಾಂತಿಮಯ ಜೀವನ ಎಷ್ಟು ವಿಷಮಯ ನರಕವಾ ಗುತ್ತೆ ಅಂತ ತೋರಿಸೋದು.

ಲಿಂಗ:— ಭೇಷ್! ಭೇಷ್! ಎಲ್ಲಿ ಸುತ್ತಕೊಂಡು ಬಂದರೂ ಕಡೆಗೆ ಅಲ್ಲಿಗೇ ಬರುತ್ತೆ. ನಿಮ್ಮಂಥ ಹುಡುಗರ ತಲೆಗಳೂ ಅತ್ತ ಕಡೆಗೆ ಓಡುತಾ ಇದೆಯಲ್ಲಾ....ಸಂತೋಷದ ಸಂಗತಿ.

ಸುಂದರ:—ಏನು ತಾತ ?

ಲಿಂಗ: - ಅಲ್ಲ ತಲೇನ ತುಂಬ ದೂರ ತಳ್ಳಿದಿಯಾ. ಅಂದರೆ ನಿನ್ನ ನಾಟಕದ ಪ್ರಕಾರ ತಂದೆಮಕ್ಕಳಿಬ್ಬರೂ ಒಳ್ಳೆ. ಸದ್ಗುಣಶಾಲಿಗಳೂ ಅನ್ನೂ—

ಸುಂದರ— ಹೌದು ಆದರೆ ಅವರಲ್ಲಿ ಕಾರಣಾಂತರಗಳಿಂದ ದುರಭಿಪ್ರಾಯಗಳುಂಟಾಗಿ ಆ ಬಾಂದವ್ಯ ಒಡೆಯುತ್ತೇ-

ಲಿಂಗ:— ಆಮೇಲೆ ಮುಂದೆ....

ಸುಂದರ:— ಮುಂದೆ ಈ ದುರಭಿಪ್ರಾಯಗಳು ತೊಲಗಿದ ಮತ್ತೆ ಪರಸ್ಪರ ಹೊಂದಿಕೆಯಾಗುತ್ತೇಂತ ನಾನು ತೋರಿಸಿರೋದು ನಾಟಕದಲ್ಲಿ. ಏಕೆಂದರೆ ನಾಟಕ ನೋಡಿದವರು ನಿರಾಶಾವಾದಿಗಳಾಗಬಾರದೂಂತ.

ಲಿಂಗ:— ಅಂದರೆ ನಿಜವಾಗಿಯೂ ಜೀವನದಲ್ಲಿ ಹಾಗೆ ಆಗಲಾರದೂ ಅಂತಲೇ ?

ಸುಂದರ:— ಅದು ಹೇಳೋದು ಕಷ್ಟ....ಕೇಳೀ ತಾತ....ನಾನು ಆ ಮಗನ ಪಾರ್ಟು. ನಮ್ಮ ಸೆಕ್ರೆಟರಿ ಇದಾರಲ್ಲಾ ಅಡ್ವೊಕೇಟ್ ಕೆ. ಶಾಮಣ್ಣನವರು ಅವರು ತಂದೆ ಪಾರ್ಟು... ತುಂಬಾ ಚೆನ್ನಾಗಿ ಮಾಡತಾರೆ ತಾತ—ಆಮೇಲೆ....

ಲಿಂಗ:— ಅದು ಸರೀ ಸುಂದರೂ ! ಸ್ವಲ್ಪ ಹೀಗೆ ಬಾ !

ಸುಂದರ:— ಏನು ತಾತ ?

ಲಿಂಗ:— (ತಲೆಯನ್ನು ನೇವರಿಸುತ್ತಾ) ನೀನು ಹೀಗೆ ನಾಟಕಾ ಬೂಟಕಾಂತ ಅಲೆಕೊಂಡು ಪರೀಕ್ಷೇಲಿ ಫೇಲಾಗುತಾ ಇದೀಯಲ್ಲಾ, ಇದರಿಂದ ನಿನ್ನ ತಂದೆತಾಯಿಗಳಿಗೆ ಎಷ್ಟು ದುಃಖಾಂಬೋದನ್ನ ಒಂದು ಕ್ಷಣವಾದರೂ ಯೋಚಿಸುತಿದ್ದೀಯಾ?

ಸುಂದರ:— (ಗಂಭೀರನಾಗಿ) ದಿನಕ್ಕೆ ನೂರು ಬಾರಿಯಾದರೂ ಅದನ್ನ ಯೋಚಿಸದಿರೋದಕ್ಕೆ ಸಾಧ್ಯವೇ ಇಲ್ಲ; ಆದರೆ ನನಗೇನು ಮಾಡಬೇಕೊ ಅನ್ನೋದೇ ತೋಚದು. ನೀವು ಕಂಡಹಾಗೆ ಹೋದ ವರುಷವೆಲ್ಲಾ ಆಟ ಗೀಟ ನಾಟಕಾ ಬೂಟಕಾ ಎಲ್ಲಾನೂ ಕಟ್ಟಿಟ್ಟುಬಿಟ್ಟು ಹಗಲು ರಾತ್ರೆ ಎಲ್ಲಾ ಓದಿ ಹಾಳು ಪರೀಕ್ಷೆಗೆ ಕೂತೆ. ಕಡೆಗೆ ಆಚೆ ವರ್ಷ ಪ್ಯಾಸಾಗಿದ್ದ ಇಂಗ್ಲಿಷನಲ್ಲಿ ಪ್ಯಾಸ್ ಆಯಿತು; ಫಸ್ಟ್ ಕ್ಲಾಸ್ ನಂಬರು ಬಂತು. ಆದರೆ ಕನಸಿನಲ್ಲೂ ಯೋಚಿಸದಿದ್ದ ಹಾಗೆ ಕೆಮಿಸ್ಟ್ರೀಲಿ ಫೇಲಾದೆ ....ಅರ್ಥ ಕ್ವೆಶ್ಚನ್ ಪೇಪರ ತುಂಬ ಲೆಕ್ಕಗಳೇ ತುಂಬಿದ್ದುದರಿಂದ ಫಿಫ್ಟಿ

ಫಾರಂನಲ್ಲೇ ಅತ್ತುಕೊಂಡು ಕೇಳಿಕೊಂಡೆ, ಚರಿತ್ರೆ ತಗೊಳ್ಳುತೀನಿ, ಲಿಕ್ಕ ಸೈನ್ಸ್ ಬೇಡಾಂತ. ಆದರೆ ಅದಕ್ಕೆ ಅಪ್ಪ ಒದ್ದರೇ ಹೊರತು ನನ್ನ ಬೇಡಿಕೆ ಕಣ್ಣೀರು ಯಾವ ಕೆಲಸಕ್ಕೂ ಬರಲಿಲ್ಲ. ಇದೊಂದು ವಿಚಾರ ನನ್ನ ಕೈ ಮೀರಿದ್ದು. ಮಿಕ್ಕ ವಿಚಾರದಲ್ಲಿ ನಾನು ತಂದೆ ತಾಯಿಗಳ ಮನಸಿಗೆ ರವೆ ಯಷ್ಟು ವ್ಯಥೆಯಾಗದಂತೆ ನಿಮ್ಮ ಮಾತಿನಂತೆ ನಡೆದುಕೊಳ್ಳುತಾ ಇದೇನೆ.

ಲಿಂಗ: ಸುಳ್ಳು ಸುಂದರೂ. ಬಾ ಇಲ್ಲಿ, ಈ ಕಾಗದಗಳನ್ನು ನೋಡು.

ಸುಂದರ:—(ಕಾಗದಗಳನ್ನು ತಗೊಂಡು ಆಶ್ಚರ್ಯದಿಂದ ನೋಡುತ್ತಾ) ಈ ಕಾಗದಗಳು ಇಲ್ಲಿಗೆ ಹ್ಯಾಗೆ ಬಂದುವು ?

ಲಿಂಗ:—ನೀನು ಡಾಕ್ಟರ್ ಅಪ್ಪಣ್ಣನಿಗೆ ಬರೆದದ್ದನ್ನ ಅವನೇ ಕೈಯೆತ್ತಿ ನಿಮ್ಮಪ್ಪನ ಕೈಗೆ ಕೊಟ್ಟಿರಬೇಕು. ಇನ್ನು ನೀನು ದೇವರಯ್ಯ ನಿಗೆ ಬರೆದಿದ್ದ ಕಾಗದಾನ ಅವನೇ ನಿಮ್ಮಪ್ಪನಿಗೆ ಪೋಸ್ಟ್ ಮಾಡಿದಾನೆ. ಹೌದೂ, ನೀನು ಹೀಗೆ ಅವರಿಗೆ ಬರೆಯಬಹುದೇ ?

ಸುಂದರ:—ನಾನು ಏನು ಮಾಡಲಿ ತಾತ ! ಆ ಅಪ್ಪಣ್ಣ ಅಣ್ಣನಿಗೆ ಸ್ನೇಹಿತನಾಗಿರದೆ ಹೋಗಿದ್ದರೆ, ಅವನು ಮಾಡೋ ಪಾಪಕೆಲಸಕ್ಕೆ ಅವ ನನ್ನ ಯಾವತ್ತೋ ಕಾಲು ಮುರಿದು ಕೂಡಿಸಿಬಿಡುತಿದ್ದೆ. ನಾನು ಎಲ್ಲಿ ರಲೀ, ಯಾವ ಸ್ನೇಹಿತರ ಜೊತೇಲೀ, ದೊಡ್ಡವರ ಜೊತೇಲೀ, ಎಲ್ಲಿ ಕೂತಿರಲೀ— ಹೋಗತಿರಲೀ ಬಂದು ಉಪದೇಶ ಸುರುಮಾಡಿ, ಅವರೆದು ರಿಗೆ ನನ್ನ ಮರ್ಯಾದೆ ಕಳೀತಾನೆ. ನನ್ನ ಕೈಲಿ ಅದನ್ನ ಸಹಿಸುವದಕ್ಕೆ ಸಾಧ್ಯ ಇಲ್ಲ. ಅಣ್ಣನಿಗೆ ನನ್ನ ಮರ್ಯಾದೆ ಮೇಲೆ ಮಮತೆ ಇಲ್ಲದಿದ್ದರೂ ನನಗೆ ಅದಕ್ಕಿಂತ ಹೆಚ್ಚಿನದು ಯಾವದೂ ಇಲ್ಲ.

ಲಿಂಗ:—ಅವನ ಕಾಗದದ ವಿಚಾರ ಹಾಗಿರಲಿ—ಈ ದೇವರಯ್ಯ ನಿಗೆ ನೀನು ಬರೆದಿರುವುದೂ ?

ಸುಂದರ:—ನನಗೆ ಮದುವೇನೇ ಇಷ್ಟವಿಲ್ಲ; ಅದೂ ಈಗ,— ಹೀಗೆ ಒಂದೇಸಮನೇ ಈ ಇಂಟರ್‌ಮೀಡಿಯೇಟ್ ಪರೀಕ್ಷೇನಲ್ಲೇ ನಾಲ್ಕು ವರುಷದಿಂದ ಫೇಲಾಗತಾ ಕೂತಿರೋವಾಗ, ಒಂದು ವೇಳೆ ನಾನು

ಬಿ.ಎಸ್.ಸಿ. ಪ್ಯಾಸ್ ಮಾಡಿದ ಮೇಲೆ ಮದುವೆಯಾದರೂ, ಆ ಹುಡಿಗೀನ ಮದುವೆಯಾಗುವದೇ ಇಲ್ಲ. ಇದು ಸಾಧ್ಯವಾಗದ ಮಾತು. ಇದಕ್ಕಾಗಿ ನನಗೆ ಎಂಥ ಶಿಕ್ಷೆಯಾದರೂ ಸರಿಯೇ....ನಾನು ಅವರಿಗೆ ಬರೆದಿರುವ ಕಾಗದದಲ್ಲಿ ಒಂದಾದರೂ ಅಪಚಾರದ ಮಾತಾಡಿಲ್ಲ. ನನ್ನ ಅಭಿಪ್ರಾಯಾನ ಖಂಡಿತವಾಗಿ ತಿಳಿಸಿಬಿಟ್ಟಿದೀನಿ–ಅಷ್ಟೇ.

ಲಿಂಗ:—ಅಂದರೆ ನಿನ್ನ ತಂದೆತಾಯಿಗಳ ಇಷ್ಟ ನಿನಗೆ ಅನಿಷ್ಟ; ಅವರ ಸಂತೋಷ ನಿನಗೆ ದುಃಖ; ಇದು ನನಗೆ ಅಷ್ಟು ಸಮಂಜಸವಾಗಿ ಕಾಣಲಿಲ್ಲ.

ಸುಂದರ:—ಈ ಮದುವೆಯ ವಿಚಾರ ಒಂದು ಬಿಟ್ಟು, ಅಣ್ಣ. ಇನ್ನು ಏನು ಹೇಳಿದರೂ ಸರಿಯೇ. ಬಾವಿಗೆ ಹಾರು ಅಂದರೂ ಸರಿಯೇ, ಕಣ್ಣು ಮುಚ್ಚಿಕೊಂಡು ಹಾರುತೇನೆ.

ಲಿಂಗ:—ಬಾವಿಗೆ ಹಾರೋದಕ್ಕಿಂತ ಕಷ್ಟವೇ ಸುಂದರ, ಮದುವೆ ಮಾಡಿಕೊಳ್ಳೋದು?

ಸುಂದರ:— ಹೌದು ತಾತ. ಅದರಲ್ಲಿ ಭವಿಷ್ಯ ಸ್ಪಷ್ಟವಾಗಿ ಗೊತ್ತು —ಒಂದೇ ಹಾರಿಗೆ ಬಿಡುಗಡೆ; ಇದರಲ್ಲಿ ಹಾಗಲ್ಲ—ಇಲ್ಲಿನ ಭವಿಷ್ಯವನ್ನೆ ಯೋಚಿಸುವುದೇ ಕಷ್ಟ—ಇನ್ನು ಅನುಭವಿಸುವದಂತೂ....

ಲಿಂಗ:—ಹಾಗೇನಿಲ್ಲಾ ಸುಂದರೂ; ಈಗ ನಾವೆಲ್ಲಾ....

ಸುಂದರ:—ತಾತಾ! ನಿಮ್ಮ ದಮ್ಮಯ್ಯಾ! ನೀವು ನನ್ನನ್ನ ದಿಗ್ಬಂಧನಕ್ಕೆ ಸಿಕ್ಕಿಸಬೇಡಿ. ಮೊದಲಿಂದ ಆ ಹುಡಿಗಿಯ ಜೊತೇಲಿ ಬೆಳೆದ ನನಗೆ, ಈ ಸಂಬಂಧ ಯೋಚನೆ ಮಾಡೋದಕ್ಕೆ ಕೂಡ ದುಃಖವಾಗುತ್ತೆ; ಬೇಡ. ತಲೆ ಕೆಡುವ ವರೆಗೂ ಯೋಚಿಸಿ, ಯೋಚಿಸಿ, ಹುಚ್ಚಾಗಿ ಕಡೆಗೆ ತೀರ್ಮಾನಿಸಿ ಬಿಟ್ಟಿದೇನೆ....(ಹೊರಗಡೆ ಜೋರಾಗಿ ಬಾಗಿಲು ಗುದ್ದಿದ ಸದ್ದು)

ನಂಜು:—(ಸುಂದರನು ಹೋಗಿ ಬಾಗಿಲು ತೆರೆಯುತ್ತಲೇ ಹುಲಿಯಂತೆ ಮುಂದೆ ನುಗ್ಗಿ ಬಾಗಿಲು ಹಾಕಿ) ಏನೋ ನೀನು ತೀರ್ಮಾನಿಸಿರುವುದೂ? ನಿಮ್ಮಪ್ಪ ನಾನಿನ್ನು ಬದುಕಿದ್ದೇನಲ್ಲೋ? ತಲೆಹರಟೆ ತಿರುಬೋಕೀ! ಎದೆ ಸೀಳಿದರೆ ಎರಡಕ್ಷರವಿಲ್ಲ; ಪ್ರಪಂಚದ ಕಷ್ಟ ಏನೂಂತ ಗೊತ್ತಿಲ್ಲ; ಇಂಥ

ಕೋರೀ ದೊಡ್ಡ ದೊಡ್ಡೋರಿಗೆ ಏಕ ವಚನದಲ್ಲಿ ಕಾಗದ ಬರೆಯೋದು! --ಪುಂಡರು ಪೋಕರಿಗಳು ಹೆದರಿಸಿ ಬರೀತಾರಲ್ಲ ಆ ಹೊಲಸು ಭಾಷೇಲಿ! ವಂಶದ ಗೌರವ ಇಲ್ಲ! ಮನೆಯ ಗೌರವವಿಲ್ಲ! ಮನೆಹಾಳಾ! ಯಾರು ಹೇಳಿಕೊಟ್ಟರೋ ನಿನಗೆ ಕಾಗದ ಬರೆಯೋದನ್ನ? ನಿಂತು ಮುದ್ದುಮು ದ್ದಾಗಿ ಹರಟುತಿದಾನೆ ಬಾಯಿಗೆ ಬಂದ ಹಾಗೇ. ಬೊಗಳೋ! ಹ್ಯಾಗೆ ಬರೆ ದೆಯೋ ಅಂಥ ಪುಂಡು ಕಾಗದಾನ ಅಂಥಾ ದೊಡ್ಡ ಮನುಷ್ಯನಿಗೇ?

ಸುಂದರ:— ಅವನು ದೊಡ್ಡ ಮನುಷ್ಯನಾಗಿದ್ದಿದ್ದರೆ, ಹಾಗೆ ಹಲ್ಕಾ ರೀತಿ ನಡೀತಿರಲಿಲ್ಲ.

ನಂಜು:—(ರೇಗಿ)ಹಲ್ಲು ಹಿಡಿದು ಮಾತನಾಡೋ ಪೋಲೀ!

ಸುಂದರ:— ನೀವು ಬಾಯಿಗೆ ಬಂದ ಹಾಗೆ ಬೈತಿದ್ದರೆ ನಾನು ಕೇಳಿ ಕೊಂಡು ಸುಮ್ಮನಿರುವುದಕ್ಕೆ ಸಾಧ್ಯವಾಗುವುದಿಲ್ಲ.

ನಂಜು:- ಏನು ಮಾಡುತೀಯೋ ದ್ರೋಹಿ? ನನಗೂ ಕಾಲು ಮುರೀತೀಯೋನೋ? ಬಾರೋ! ಮುರೀಬಾರೊ........ನಿನ್ನ ಕೆಚ್ಚನ್ನ ನೋಡೋಣ!!

ಲಿಂಗ:—ನಂಜೂ! ಇದು ಯಾಕೆ ಹೀಗೆ ಹುಚ್ಚನ ಹಾಗೆ ರೇಗುತೀ! ಸುಂದರ ಏನು ನಿನ್ನ ಮಗನಲ್ಲವೇ? ಅವನಿಗಿಂತ ಹೆಚ್ಚೇನೋ ಆ ಡಾಕ್ಟರೂ? ಸ್ವಲ್ಪ ಸಮಾಧಾನ ಮಾಡಿಕೊಂಡು........

ನಂಜು:—ನೀವಿಬ್ಬರೂ ಹೀಗೆ ಸೇರಿ ನನ್ನ ಮರ್ಯಾದೇನ ತಿಂದು ತೇಗೋದರ ಬದಲು, ನನಗೆ ವಿಷಾನಾದರೂ ಕೊಟ್ಟು ಕೊಂದುಬಿಡಿ ಒಂದೇ ಸಲ.

ಲಿಂಗ:— ಹೀಗೆ ರೇಗಾಡಿದರೆ ಯಾರಿಗೂ ಸುಖವಿಲ್ಲಪ್ಪ.

ನಂಜು:— ಇಂಥ ಪಾಪಿ ಮಗ ಹುಟ್ಟಿದ ದಿನವೇ ನನ್ನ ಸುಖ ಹೋಯಿತು.

ಸಾವಿ:— (ಒಳಬಾಗಿಲ ಬಳಿ ಇಣಿಕಿ ನೋಡುತ್ತಿದ್ದವಳು ದುಃಖವನ್ನು ತಡೆ ಯಲಾರದೆ ಮುಂದೆ ಬಂದು) ಅಯ್ಯೋ! ಈ ಹೊತ್ತು ನಿಮ್ಮ ಬಾಯಿಂದ ಇಂಥಾ ಮಾತುಗಳು ಯಾಕೆ ಬರುತಾ ಇವೇ?

ನಂಜು—(ಸಾವಿತ್ರಮ್ಮನ ಕಡೆಗೆ) ನಾನಿನ್ನೂ ಬದುಕಿದ್ದೀನಲ್ಲಾಂತ! (ಇತ್ತ ತಿರುಗಿ) **ಬೊಗಳೋ ಚಂಡಾಲಾ!** ಯಾಕೋ ಬರೆದೆ ಇಂಥ ನೀಚ ಕಾಗದಾನ ಆ ಡಾಕ್ಟರಿಗೇ?

ಸುಂದರ:—ಅವನು ನೀಚ! ಅದಕ್ಕೆ ಅವನಿಗೆ ತಕ್ಕ ಹಾಗೇನೆ ಬರೆದೆ ಅವನಿಗೆ ಅರ್ಥವಾಗೋ ಭಾಷೇಲಿ

ಲಿಂಗ:—(ಮುಂದೆ ಬಂದು) ಸುಂದರಾ!........

ನಂಜು:—ಅವನು ನೀಚನೇನೋ ಪಾಪೀ! ದ್ರೋಹಿ! (ಸುಂದರನ ಕಪಾಳಕ್ಕೆ ಛಟ್ೀರನೆ **ಹೊಡೆಯುವನು**)

ಸಾವಿ: ಮಾವಯ್ಯಾ!! (**ಕೂಗಿಕೊಂಡು** ಅಡ್ಡಬಂದು ಸುಂದರನನ್ನು ಹಿಡಿದುಕೊಳ್ಳುವಳು)

ಲಿಂಗ: —ಸುಂದರ! ನೀನು ಸ್ವಲ್ಪ ದುಡುಕಬಾರದಪ್ಪಾ. ನಂಜು! ನೀನು ನನ್ನ ಹೊಡೆ, ಅವನ ಮೇಲೆ ಕೈ ಮಾಡಬೇಡ!! (ಅಡ್ಡಬರುವನು)

ನಂಜು:—ಅವನು ಸ್ವಲ್ಪ ದುಡುಕೋದೇನೂ. ಆ ಡಾಕ್ಟರನ್ನ ಕರೆದುಕೊಂಡು ಬಂದು ಅವನ ಕಾಲಮೇಲೆ ಕೆಡುವುತೇನೇ ಈ ನೀಚನನ್ನ; ಆಗ ಗೊತ್ತಾಗುತ್ತೆ ಈ ಪಾಪಿಗೆ; ಅದು ವರೆಗೂ ಈ ದುರಹಂಕಾರಕ್ಕೆ ಶಾಸ್ತಿ ಇಲ್ಲ.

ಸುಂದರ:—ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ.

ಲಿಂಗ:—ಆ ಡಾಕ್ಟರನ ಮಾತು ಬಿಟ್ಟುಬಿಡು ನಂಜು!

ನಂಜು:—ನಿಮ್ಮಪ್ಪ ನಾನಿರೋವಾಗ ಅದು ಸಾಧ್ಯವೇ ಕಾಣೋ! ಈಗಲೇ ಆ ಕೆಲಸ ಮಾಡುತೇನೆ. (ಹೊರಡಲಿರುವನ)

ಸಾವಿ:—ಮಾವಯ್ಯಾ! ನೀವಾದರೂ ಸ್ವಲ್ಪ....

ಲಿಂಗ:—(ಮುಂದೆ **ಹೋಗಿ**) ನಂಜೂ! ನಂಜೂ! ದುಡಕಬೇಡ. ಇಲ್ಲಿ ಬಾ!

ಸುಂದರ:—(ಮುಂದೆ ನುಗ್ಗಿ) ಅವನು ಇಲ್ಲಿಗೆ ಬಂದರೆ; ಅವನೇ ನನ್ನ ಕಾಲಿಗೆ ಬೀಳಬೇಕಾಗುತ್ತೆ....ಇಷ್ಟೊಂದು ಅಪಮಾನದಲ್ಲಿರೋದು ನನ್ನಿಂದ ಸಾಧ್ಯವಿಲ್ಲ.

ಸಾವಿ:—ಸುಂದರಾ !! (ಮುಂದೆ ಬರುವಳು.)

ನಂಜು:—(ಸರ್ಪದಂತೆ ತಿರುಗಿ)ಎಲ್ಲಿಗೆ ಹೊರಟೆಯೋ ಪುಂಡ ?

ಸುಂದರ:— ಕಾಡಿಗೇ !

ನಂಜು:—ಸಿಲ್ಲೋ ದ್ರೋಹೀ !

ಸುಂದರ :—(ಮುಂದುವರಿದು) ಸಾಧ್ಯವಿಲ್ಲ. ಈಗ ನಾನು ಯಾವ ಧರ್ಮಾರ್ಜನೂ ನೋಡೋದಕ್ಕೆ ಸಾಧ್ಯವಿಲ್ಲ. ನನ್ನ ಮಾನ ಮರ್ಯಾದೆ ನಾನು ಉಳಿಸಿಕೊಳ್ಳಬೇಕು.

ನಂಜು :— ನಿನಗೆ ಮಾನ ಮರ್ಯಾದೆ ಬೇರೆ ಇದೆಯೇನೋ ?

ಸುಂದರ :— ಅದು ಆ ಘಾತುಕಿ ಅಪ್ಪಣ್ಣನ್ನ ಕೇಳಿದರೆ ಗೊತ್ತಾಗುತ್ತೆ.

ನಂಜು :—ಮತ್ತವನ ಸುದ್ದೀ ? ಚಂಡಾಲಾ !!

(ಕೆನ್ನೆಗೆ ಮತ್ತೊಂದು ಪೆಟ್ಟು ಹೊಡೆಯುವನು)

ಸಾವಿ :—ಅಯ್ಯೋ !! (ಅಡ್ಡಬರುವಳು)

ಸುಂದರ ;—(ನಿಂತು) ನಿಮಗಿನ್ನೂ ತೃಪ್ತಿಯಾಗದಿದ್ದರೆ ತೆಪ್ಪಗೆ ನಿಂತಿರುತ್ತೇನೆ; ಮನಃಪೂರ್ತಿಯಾಗಿ ಹೊಡೆದುಬಿಡಿ. ಮತ್ತೆ ನಿಮ್ಮ ಕೈಗೆ ಸಿಗಲಾರೆ.

ಸಾವಿ:— ಸುಂದರಾ. (ಬಿಕ್ಕುತ್ತಾ ಅಪ್ಪುವಳು)

ನಂಜು:— ಏನೋ ಪೋಕ್ರೀ ! ಹುಡುಗರನ್ನ ಬೆದರಿಸಿದ ಹಾಗೆ ಬೆದರಿಸುತೀ? ಎಲ್ಲಿಗೆ ಹೋಗುತಿಯೋ ನೀನೂ? ಆ ನಿನ್ನ ಪೋಲೀಪಟಾಲಂ ನಾಟಕದ ಸ್ನೇಹಿತರಗಳೂ, ಆ ಕ್ರಿಕೆಟ್ ಕೋರಿಗಳೂ ನಿನ್ನ ಸಾಕಿಕೊಳ್ಳುತಾರೇನೋ?

ಲಿಂಗ:—ನಂಜೂ ! ನಿನ್ನ ಮಾತುಗಳೊಂದೂ ನನಗೆ ಸರಿಯಾಗಿ ಕಾಣೋದಿಲ್ಲ. ನಿನ್ನ ಕೋಪಾವೇಶದಲ್ಲಿ ಏನೇನು ಕೂಗಾಡುತಿದೀಯೋ ! ... ನನ್ನ ಮಾತು ಸ್ವಲ್ಪ ಕೇಳು. ದುಡುಕಿದರೆ........

ನಂಜು:—ಏನು ದುಡುಕಿದರೇ ? ಈ ನೀಚ ಮನೆ ಬಿಟ್ಟು ಹೋಗ ತಾನೇಂತ ತಾನೇ? ಒಂದನಿಷ್ಟ ತೋಲಗಿದಹಾಗಾಯಿತು.

ಸುಂದರ:—ಅಮ್ಮಾ ! ನಾನಿನ್ನು ಹೊರಡುತೇನೆ !

['ಸುಂದರೂ' ಎಂದು ಅಳುತ್ತಿರುವ ಸಾವಿತ್ರಮ್ಮನ ಕಾಲಿಗೆ ನಮಸ್ಕರಿಸಿ, ತಾತನ ಪಾದಗಳಿಗೆ ನಮಸ್ಕರಿಸುವನು; ಲಿಂಗಪ್ಪಯ್ಯನು ಕಣ್ಣೀರು ತುಂಬಿ ಅವನ ತಲೆಯನ್ನು ನೇವರಿಸುವನು. ನಂಜುಂಡಯ್ಯನ ಕಾಲಿಗೆ ನಮಸ್ಕರಿಸಲು ಹೋಗುವನು]

ನಂಜು:—(ಕಾಲಿನಿಂದ ತಳ್ಳಿ) ನೀನು ನನಗೆ ಮಾಡಿರೋ ನಮಸ್ಕಾರಗಳೇ ಸಾಕೋ ! (ಹೊರಡಲಿರುವ ಸುಂದರನನ್ನು ತಡೆದು) ಎಲ್ಲಿಗೋ ಹೋಗೋದು? (ಸುಂದರನು ತೆಪ್ಪಗೆ ಹೋಗುತ್ತಿರುವನು) ಎಲ್ಲಿಗೆ ಹೋಗುತೀಯೋ? ಬೊಗಳೋ ಕತ್ತೇ! (ಮತ್ತೊಂದೇಟು ಹೊಡೆಯುವನು.)

ಸಾವಿ:—ಬಿಟ್ಬಿಬಿಡೀಂದ್ರೆ ನಿಮ್ಮ ದಮ್ಮಯ್ಯ ! ಹೊಡೆಯಬೇಡಿ. ನಿಮ್ಮ ಕಾಲಿಗೆ ಬೀಳುತೇನೆ. (ನಂಜುಂಡಯ್ಯನ ಪಾದಗಳನ್ನು ಹಿಡಿಯಲು ಹೋಗುವಳು.)

ನಂಜು:—(ಸಾವಿತ್ರಮ್ಮನನ್ನು ತಳ್ಳಿ) ಎಲ್ಲಿಗೆ ಹೋಗುತೀಯೋ ಹಾಳಾಗಿ ?

ಸುಂದರ:—(ಸರ್‍ರನೆ ತಿರುಗಿ) ನೀವಿಲ್ಲದಿರೋ ಅಲ್ಲಿಗೆ !

ನಂಜು:—ತೊಲಗು ಪಾಪಿ ಮಗನೇ !! (ಕತ್ತು ಹಿಡಿದು ಬಾಗಿಲು ತೆರೆದು ದಬ್ಬುವನು)

ಸಾವಿ—ಮಗೂ ! ಸುಂದರೂ !! ಅಯ್ಯೋ ! ಮಾವಯ್ಯಾ !! ಹೊರಟೇಹೋದನಲ್ಲಾ !!! (ಮುಂದೆ ಹೋಗುವಳು)

ಲಿಂಗ:—ನಿನಗೆ ಬುದ್ಧಿ ತುಂಬಾ ಕೆಟ್ಟುಹೋಗಿದೆಯೋ ನಂಜೂ ! ಅದೇನು ಅಪ್ಪನ ದರ್ಪಾಂತ ಹೀಗಾಡುತಾ ಇದೀಯೋ ನನಗೆ ತಿಳೀದು ....ಸುಂದರೂ ! ಸುಂದರಾ!! (ಕೂಗುತ್ತಾ ಹೊರಗೆ ಹೋಗುವನು)

ಸಾವಿ:—ಸುಂದರೂ ! ಮಗೂ ! ಮಾವಯ್ಯಾ !! (ಕೂಗುತ್ತಾ ಹೊರಗೆ ಹೋಗಲಿರುವಳು)

ನಂಜು:—(ತಡೆದು) ನೀನೆಲ್ಲಿಗೆ ಹೊರಟೆಯೋ ಆ ಪಿತೃದ್ರೋಹೀನ ಮುದ್ದಿಸೋದಕ್ಕೇ ?

ಸಾವಿ:—(ಬಿಕ್ಕುತ್ತಾ) ಮನೆಗೊಂದು ಮುತ್ತಿನಮಣಿ ಅಂಥ ಮಗ ಅವನ್ನ ಒಂಟಿಯಾಗಿ ಹೀಗೆ... (ಗದ್ಗದಿತಳಾಗುವಳು)

ನಂಜು:— ಹೋಗು ಹೋಗು! ನಿಮ್ಮ ಮಾವಯ್ಯನ ಜೊತೇಲಿ ನೀನೂ ಹೋಗಿ ಅವನನ್ನ ಆ ಪೋಲೀಪಟಾಲಂಗೆ ಸೇರಿಸಿಬಿಟ್ಟು ಬಾ. ನನ್ನ ಮನೆಬಿಟ್ಟು ಎಲ್ಲೊಪ್ಪತ್ತು ಕೂಳು ಹುಟ್ಟುತ್ತೊ ಆ ಭಿಕಾರೀಗೆ ನಾನೂ ನೋಡುತೇನೆ.

ಸಾವಿ:—(ಹೋಗುತಾ) ಬೆಳಗಿನಿಂದ ಯಾರ ಮೇಲೋ ಇದ್ದ ಕೋಪ, ಪಾಪ! ಈ ಬಡಪಾಯಿಯ ಮೇಲೆ ತಿರುಗೋಣೇ! (ಕಣ್ಣೊರಸಿ ಕೊಳ್ಳುವಳು)

ನಂಜು: (ರೇಗಿ) ಸಾಕು ಹೊರಡೇ! (ಸಾವಿತ್ರಮ್ಮನು ಹೊರಟು ಹೋಗುವಳು) ಎಲ್ಲರೂ ಬುದ್ಧಿ ಹೇಳೋರೆ ಆಗಿಬಿಟ್ಟಿದೀರಿ ಈ ಮನೇಲಿ. ನಿಮಗೆ ಒಬ್ಬೊಬ್ಬರಿಗಾಗಿ ಕಷ್ಟ ಕಾಣಿಸಿ ಬುದ್ಧಿ ಕಲಿಸುತೇನೆ. ಹೋಗಿ ಹೋಗಿ ನಾಯಾಗಿ ಅಲೆಕೊಂಡು ಬಂದರೆ, ತುತ್ತಿನ ಬೆಲೆ ಗೊತ್ತಾಗಿ ಸೊಕ್ಕು ಅಡಗುತ್ತೆ. ನಿಮ್ಮನ್ನ ತಿದ್ದದೆ ಹೋದರೆ, ಅಪ್ಪಣ್ಣ ಹೇಳೋ ಹಾಗೇ ನಾನು ಮನೆಗೆ ಯಜಮಾನನಾದದ್ದಕ್ಕೇನು ಸಾರ್ಥಕ?

(ಮೇಜಿನ ಮೇಲಿದ್ದ ಪತ್ರಗಳನ್ನು ಹಿಡಿದು ಎಡಗಡೆಯ ಕೋಣೆಗೆ ರಭಸದಿಂದ ನಿಷ್ಕ್ರಮಿಸುವನು)

ಪ್ರವೇಶ ಎರಡು

[ದೇವಸ್ಥಾನದ ಮುಗ್ಗಲು ಕೈದೋಟ. ಸಂಜೆ ಆರು ಗಂಟೆಯ ಸಮಯ. ಸಿಂಗ್ರಿಯೂ ಲಿಂಗಪ್ಪಯ್ಯನೂ ಮಾತನಾಡುತ್ತಾ ನಿಂತಿರುವರು. ಸಿಂಗ್ರಿಯ ಮುಖದಲ್ಲಿ ಬೇಸರಿಕೆ, ಮತ್ತೂ ಲಿಂಗಪ್ಪಯ್ಯನ ಮುಖದಲ್ಲಿ ನಿರೀಕ್ಷಣೆಗಳು ಕಂಡುಬರುತ್ತಿವೆ.]

ಲಿಂಗ:-- ಅಷ್ಟು ದುಡುಕಬೇಡ ಸಿಂಗ್ರಿ; ಸಮಾಧಾನ ಮಾಡಿಕೋ. ಪ್ರಪಂಚದಲ್ಲಿ ನಮ್ಮ ಮತ್ತು ಸುತ್ತಣವರ ಸಂಬಂಧ ಆದರೆ ಮುಳ್ಳು ಬೇಲಿಯ ಮೇಲೆ ಹಾಸಿರೋ ಪಂಚೆ ಇದ್ದ ಹಾಗೆ. ಈ ಸಂಸಾರ ಇರೋದೇ ಹಾಗೆ. ಬೇಸರಪಟ್ಟುಕೊಂಡು ಬಗ್ಗಿಸಿ ಎಳೆದರೆ—ಪಂಚೆ ಚಿಂದಿಯಾಗಿ ಹರಿದು ಹೋಗುತ್ತೆಯೇ ಹೊರತು ಪ್ರಯೋಜನವೇನೂ ಆಗೊಲ್ಲ. ನಿಧಾನವಾಗಿ ತಾಳ್ಮೆಯಿಂದ ಬಿಡಿಸಿಕೋಬೇಕು.

ಸಿಂಗ್ರಿ:— ಇನ್ನು ಅವರ ಕೈಕೆಳಗೆ ಆಳುತನ ಮಾಡೋಕೆ ನನ್ನ ಕೈಲಾಗೊಲ್ಲ ಸ್ವಾಮೀ; ನೀವು ನನ್ನ ಮೇಲೆ ದಯೆಮಾಡಿ ನನಗಪ್ಪಣೆ ಕೊಡಬೇಕು.

ಲಿಂಗ: —ನೋಡು ಸಿಂಗ್ರಿ! ಈಗ ಆ ಮನೆಗೆ ನಂಜುಂಡಪ್ಪನವರು ಯಜಮಾನರು—ಅಲ್ಲವೇನೋ ?

ಸಿಂಗ್ರಿ: --ತಮ್ಮನ್ನ ಬಿಟ್ಟುಬಿಟ್ಟು ಅವರು . ....

ಲಿಂಗ: ನಮ್ಮ ಯಜಮಾನಿಕೆ ಕಾಲವೆಲ್ಲಾ ಮುಗೀತಪ್ಪಾ; ನಾನು ಊರ ಸುತ್ತ ಕೋಟೆ ಇದ್ದ ಹಾಗೆ ಇದೇನಷ್ಟೆ. ನಂಜುಂಡಪ್ಪನೇ ಅರಮನೆ, ಅವರೇ ಯಜಮಾನರು. ಅವರು ಹೇಳಿದ ಹಾಗೆ ನಾನೂ ಸಹ ಕೇಳಬೇಕು, ಇಂಥಾದ್ದರಲ್ಲಿ ನೀನು ಕೇಳೊಲ್ಲಾಂದರೆ ಹೇಗಾಗುತ್ತಪ್ಪ ?

ಸಿಂಗ್ರಿ: --ಹೇಳಿದ ಹಾಗೆ ಕೇಳೋದಕ್ಕೇನೂ ಇಲ್ಲ ಸ್ವಾಮೀ. ಹಗಲೂ ರಾತ್ರೆ ದುಡೀ ಅಂದರೆ ದುಡಿಯೋದಕ್ಕೆ ಸಿದ್ಧ. ಆದರೆ ಅವರಿಗೆ ಸಿಟ್ಟು ಬಂದಾಗ—ತಪ್ಪಿರಲಿ, ತಪ್ಪಿಲ್ಲದಿರಲಿ ಸುಮ್ಮಸುಮ್ಮನೆ ರೇಗಿದ್ದೇ ಕೆಲಸ.... ...

ಲಿಂಗ:--ನೋಡು. ಅವನ ಸ್ವಭಾವ ಸ್ವಲ್ಪ ದುಡುಕು. ಎಲ್ಲರ ಮೇಲೂ ಹಾಗೆ ರೇಗುತಾನೆ. ಅಷ್ಟಕ್ಕೋಸ್ಕರವೇ ನಾವು ಬೇಜಾರು ಪಟ್ಟುಕೋ ಬಾರದು.

ಸಿಂಗ್ರಿ: —ಅಲ್ಲಸ್ವಾಮೀ! ಸಿಟ್ಟು ಬಂದಾಗ ಬೇಕಾದರೆ ಹಿಡಿದುಕೊಂಡು ಹೊಡೀಲಿ; ನಾಲಕೇಟು ತಿನ್ನಬಹುದು. ಆದರೆ ಅವರು ಹುಟ್ಟಿದ್ದು ಬೆಳದದ್ದನ್ನೆಲ್ಲಾ ಸೇರಿಸಿಕೊಂಡು ಕೆಟ್ಟಮಾತು ಅಂತಾ ಇದ್ದರೆ

ಕೇಳಿಕೊಂಡು ಸುಮ್ಮಗಿರಲಾರೆ. ನೀವು ನಮ್ಮಪ್ಪನ್ನ ಸಾಕಿ ಬೆಳಸಿದಿರೀ ಅಂತಾ ಕೇಳಿ ಬಂದು ನಿಮ್ಮ ಪಾದಸೇವೇಲಿ ನಿಂತೆ. ಮುಂದೂನೂ ದಿನಾ ಎರಡುಗಂಟೆ ಬಂದು ನಿಮ್ಮ ಸೇವೆ ಮಾಡಿಕೊಂಡು ಓಗುತೀನಿ. ಆದರೆ ಆ ಮನೆ ಸಂಬಳ ನನಗೆ ಬೇಡ, ಅವರ ಆಳುತನಾನೂ ಬೇಡ.

ಲಿಂಗ:—ನೀನು ಬಹಳ ನೊಂದಿರೋ ಹಾಗೆ ಕಾಣುತ್ತೆ. ಇನ್ನೊಂದು ಕೆಲಸಮಾಡು. ಇನ್ನು ಮುಂದೆ ನೀನು ನನ್ನ ಕೈಯಿಂದ ಸಂಬಳ ತಗೋ; ಅಂದರೆ ನನ್ನವನಾಗಿ ಮನೇಲಿರು.

ಸಿಂಗ್ರಿ:—'ನನ್ನ ಮನೆ ಬಿಟ್ಟು ಹಾಳಾಗೋಗು, ಎಲ್ಲಾದರೂ ಓಗಿ ದಿವಾನಗಿರಿ ಮಾಡ್ಕೋಗು. ನಿನ್ನಂತ ತಲೆಹರಟೇಗೆ ಈ ಕೆಲಸ ಅಲ್ಲ ... ನಿನ್ನ ಎಲ್ಲಿಟ್ಟಿರಬೇಕೋ ಅಲ್ಲಿಟ್ಟಿರಬೇಕಾಗಿತ್ತು, ತಿರುಬೋಕಿ' ಅಂತೆಲ್ಲಾ ಅವರು ಬೈದಿರೋವಾಗ ಆ ಮನೇಲಿ ಬೆಳಗಿಂದ ಸಂಜೇವರೆಗೂ ಹ್ಯಾಗಿರಲಿ ಸ್ವಾಮೀ !! (ಕಂಬನಿದುಂಬುವನು)

ಲಿಂಗ:—(ಬೆನ್ನು ಚಪ್ಪರಿಸುತ್ತ) ಅಷ್ಟು ನೊಂದುಕೋಬೇಡ ಸಿಂಗ್ರೀ. ನಾನು ನಂಜೂಗೆ ಹೇಳುತೇನೆ. ನೀನು ಇನ್ನೊಂದು ತಿಂಗಳು ಇದ್ದು ನೋಡು. ಅಷ್ಟುಹೊತ್ತಿಗೆ ನಿನಗೆ ಈ ಇಂಗ್ಲೀಷ್ ಪಾಠಾನೂ ಮುಗಿದ ಹಾಗಾಗುತ್ತೆ; ನಿಮ್ಮಪ್ಪನೂ ರಿಟೈರ್ ಆಗುತಾನೆ. ಆಮೇಲೆ ಊರಿಗೆ ಹೋಗುವ ಯೋಚನೆ ಮಾಡೂವೆ.

ಸಿಂಗ್ರಿ:—ನಿಮ್ಮಪ್ಪಣೆ— ಆದರೂವೆ .. ....ಸುಂದರಪ್ಪನೋರು ಆ ಮನೇಲಿಲ್ಲದಿರೋದು ...

ಲಿಂಗ:—ಎಲ್ಲರಿಗೂ ಅದೇ ದುಃಖ ಸಿಂಗ್ರೀ; ....ಅದಕ್ಕೋಸ್ಕರವೇ ನಿನ್ನ ಸೂರಪ್ಪನ ಮನೆಗೆ ಓಡಿಸಿದ್ದದ್ದು. ಅವನು ಹೊರಟ ದಿನ 'ಕಾಗದ ಬರೀತೇನೇ'ಅಂತ ನೂರು ಸಲ ಹೇಳಿ ಹೋದ. ಹದಿನಾರು ದಿವಸವಾಯಿತು. ಒಂದು ಕಾಗದವೂ ಇಲ್ಲ. ಸೂರಪ್ಪ— ಪಾಪ 'ಅವನೆಲ್ಲಿದ್ದರೂ ನಾನು ಪತ್ತೆ ಮಾಡುತೇನೆ' ಅಂತ ಹೇಳಿದಾನೆ. (ಎದುರುಗಡೆಯೇ ದಿಟ್ಟಿಸಿ ನೋಡಿ) ಇಷ್ಟು ಹೊತ್ತಾದರೂ ಇವನ ಪೂಜೆ ಮುಗಿಯಲಿಲ್ಲವೇ? ನೀನು ಹೋದಾಗ ಇನ್ನೂ ಮಡಿ ಉಟ್ಟಿರಲಿಲ್ಲವೇನು ?

ಸಿಂಗ್ರಿ:—ಸಂಧ್ಯಾವಂದನೆ ಮಾಡುತಾ ಇದ್ದರು. ಮುಗುಟ ಉಟ್ಟಿದ್ದರು. 'ಎರಡು ನಿಮಿಷದಲ್ಲಿ ಬಂದೆ ನಡಿ' ಅಂದರು. (ಅತ್ತ ಕಡೆಯೇ ನೋಡಿ ಹಸನ್ಮುಖಿಯಾಗಿ) ಅದೋ! ಬಂದೇಬಂದರು.

ಲಿಂಗ:—ಸಧ್ಯ ಬಂದನಲ್ಲ. ಏನು ಸೂರಪ್ಪ! ನಮ್ಮ ಮನೆ ಅಡ್ರೆಸ್ಸೇ ಮರೆತುಹೋದ ಹಾಗಿದೆಯಲ್ಲಾ?

ಸೂರ:—(ಪ್ರವೇಶಿಸಿ) ನಮಸ್ಕಾರ ಲಿಂಗಪ್ಪಯ್ಯನವರಿಗೆ—ಎಲ್ಲ ಕ್ಷೇಮ ತಾನೇ?

ಲಿಂಗ:—ನಿನ್ನಂಥ ಹಿರಿಯರ ಆಶೀರ್ವಾದದಿಂದ.

ಸೂರ:—[ಚಕಿತನಾಗಿ] ನನ್ನಂಥ ಹಿರಿಯನೇ?....ಹೌದು ಹೌದು. ಈಗ ಜ್ಞಾಪಕಕ್ಕೆ ಬಂತು. ನಿಮ್ಮನ್ನ ಈ ಪ್ರಶ್ನೆ ಕೇಳಬಾರದೂಂತ ಆವತ್ತೇ ಹೇಳಿದ್ದರಲ್ಲ.

ಲಿಂಗ:—ಅದು ಹೋಗಲಿ. ಬೆಳಿಗ್ಗೆ ರೈಲಿನಲ್ಲಿ ಊರಿಗೆ ಬಂದವನು ನಮ್ಮ ಮನೆಯ ಕಡೆ ಸುಳೀಬೇಡವೇ? ಅಂಥ ಅಪರಾಧ ನಾವು ಏನು ಮಾಡಿದ್ದೊ?

ಸೂರ:—ರೈಲು ಇಳಿದ ತಕ್ಷಣ ನಿಮ್ಮ ಮನೇ ಕಡೇಗೇನೇ ಹೊರಟೆ. ಸುಂದರ—ಹಾಸನದಲ್ಲಿ ಅಮುಲ್ದಾರರು ಚಂದೂಲಾಲ್‌ರ ಮನೇಲಿ ಎರಡು ದಿನ ಇದ್ದು, ಮೊನ್ನೆ ಎಂಟನೇ ತಾರೀಖು ಶಿವಮೊಗ್ಗೇ ಕಡೆಗೆ ಹೋದನಂತೆ–ಅನ್ನೋ ಸಮಾಚಾರ ತಿಳಿಸೋಣಾಂತ ಮುಕ್ಕಾಲು ದಾರಿ ನಡೆದು ಆ ಪೋಸ್ಟಾಫೀಸಿನ ವರೆಗೂ ಬಂದೆ. ಆದರೆ ನಿಮ್ಮ ಮನೆ ಬೀದೀಗೆ ತಿರುಗುತ್ತಲೂನೂವೇ ಕಾಲು ಮುಂದಕ್ಕೆ ಹೆಜ್ಜೆ ಇಡಲಿಲ್ಲ. ಹಿಂದಿರುಗಿಬಿಟ್ಟೆ........

ಲಿಂಗ:—ಹಾಸನದಿಂದ ಹೊರಟುಹೋದನಂತೆಯೇ?

ಸೂರ:—ಹೌದು. ಶಿವಮೊಗ್ಗೇಗೆ ಹೋಗುತೇನೇಂತ ಹೇಳಿ ಹೊರಟು ಹೋದನಂತೆ.

ಲಿಂಗ:—ಸೌಖ್ಯವಾಗಿದ್ದನಂತೆ?

ಸೂರ:—ಅವನಿಗೇನು ಲಿಂಗಪ್ಪಯ್ಯನವರೇ! ಚಿನ್ನದಂಥ ಹುಡುಗ. ಯಾವ ಊರಿಗೆ ಹೋಗಲೀ—ಯಾರ ಮನೆಗೆ ಹೋಗಲೀ ಅಷ್ಟು ಪ್ರೀತಿ ಆದರಗಳಿಂದ ಕಾಣುತಾರೆ.

ಲಿಂಗ:—ನಿಜ....ಒಳ್ಳೇ ಹುಡುಗ. ಚಿನ್ನದಂಥ ಹುಡುಗನೇನೇ—ಈ ಸತ್ಯ ನಂಜೂ ತಲೇಗೆ ಯಾವಾಗ ಮೂಡೋದು!

ಸೂರ:—ಮೂಡಿದ ಹಾಗೇ ಆಯಿತು ಬಿಡಿ.

ಲಿಂಗ:—ಬೆಳಗ್ಗೆ ಬಂದವನು ಯಾಕಕ್ಕೆ ಹಿಂದಿರುಗಿಬಿಟ್ಟೆ?

ಸೂರ:—ನೋಡಿ, ಲಿಂಗಪ್ಪಯ್ಯನವರೆ! ಪ್ರಪಂಚದಲ್ಲಿ ಈ ದೈವ ಲೀಲೆ ಅನೇಕ ಸಲ ವಿಚಿತ್ರವಾಗಿರುತ್ತೆ. ನಾನು ನಿಮ್ಮ ದರ್ಶನಕ್ಕೇಂತ ಹೊರಟೆ—ಆದರೆ ನಿಮ್ಮ ಮನೆ ಮುಖ ಕಾಣುತ್ತಲೂ—ನಿಮ್ಮ ಮಗ ನಂಜುಂಡಯ್ಯನ ಜ್ಞಾಪಕ ಬಂದು 'ಛೀ! ಆ ಮನೆಗೆ ಕಾಲಿಡಬಾರದು' ಅಂತ ಹೇಳಿ ಸರ್ರನೆ ಹಿಂದಿರುಗಿ ಬಂದುಬಿಟ್ಟೆ.

ಲಿಂಗ:—ನಿನಗೂ ನಂಜೂಗೂ ಏನಾದರೂ ವಾಗ್ವಾದ ನಡೀತೇ?

ಸೂರ:—ಆ ಪುಣ್ಯ ಇನ್ನೂ ಲಭಿಸಿಲ್ಲ. ಲಭಿಸಿದರೆ, ನನ್ನ ದಾರಿ ಉಪಯೋಗಿಸಿ ಅವರಿಗೆ ಸ್ವಲ್ಪ ಬುದ್ಧಿ ಕಲಿಸೇನು. (ಸಿಡುಕಿನಿಂದ ಇತ್ತ ತಿರುಗಿ) ಅಲ್ಲ ಲಿಂಗಪ್ಪಯ್ಯನವರೇ! ಆ ಮುದ್ದು ಮಗನನ್ನ ನಿಷ್ಕಾರಣವಾಗಿ ಹೊಡೆದು ಮನೆ ಬಿಟ್ಟು ಗದುಮುತಾ ಇದ್ದರೆ ನೀವು ನೋಡುತಾ ಸುಮ್ಮ ನಿದ್ದಿರಾ? ಹಾಗಿರೋದು ಒಂದು ದೊಡ್ಡ ಗುಣವೇ?

ಲಿಂಗ:—ನೀನು ಸುಂದರೂನ ಜ್ಞಾಪಿಸಿಕೊಂಡು ಸ್ವಲ್ಪ ಸಿಟ್ಟಾಗಿದೀಯಾಂತ ಕಾಣುತ್ತೆ; ನ್ಯಾಯುವೇ. ಆದರೆ ನೋಡು ಸೂರಪ್ಪ! ಆ ಸಮಯದಲ್ಲಿ ನಾನು ಏನೇನು ಮಾಡಬೇಕೋ ನಂಜೂನ ಸಮಾಧಾನ ಮಾಡೋದಕ್ಕೆ ಅದನ್ನೆಲ್ಲಾ ಮಾಡಿದೆ.

ಸೂರ:—ಒಳ್ಳೇ ಮಾತಿನಲ್ಲಿ ನೀತಿ ಹೇಳುತಾ ಇದ್ದಿರೇನೋ?

ಲಿಂಗ: ಅವನನ್ನ ತಡೆಯೋದಕ್ಕೆ ಏನೇನು ಹೇಳಬೇಕೋ ಎಲ್ಲಾನೂ ಹೇಳಿದೆ ಅಡ್ಡ ನಿಂತು ತಡೆದೆ. ಆದರೆ ಸುಂದರು ವಯಸ್ಸು ಬಂಡೆ ಹಾಯೋ ವಯಸ್ಸು. ಅದು ಅವನನ್ನ ಅಲ್ಲಿ ನಿಲ್ಲುಗೊಡಲಿಲ್ಲ.

ಸೂರ:—ಒಳ್ಳೆಯ ಸಮಾಧಾನ ಲಿಂಗಪ್ಪಯ್ಯನವರೇ—ನಂಜುಂಡಯ್ಯ ಅಷ್ಟು ಕ್ರೂರವಾಗಿ ಹೊಡೀತಿರೋವಾಗ ಸುಂದರೂ ಕಡೇಗೆ ಬೆರಳು ತೋರಿಸೋದು........

ಲಿಂಗ:—ಒಂದು ಸಮಯ ನೀನೇ ನನ್ನ ಸ್ಥಿತೀಲಿ ಇದ್ದೇ ಅಂತ ಇಟ್ಕೊ; ಆಗೇನು ಮಾಡುತಿದ್ದೆ ?

ಸೂರ:—ನಮ್ಮ ಹಿರಿಯರೇನು ಬುದ್ಧಿ ಇಲ್ಲದವರೇ ಸ್ವಾಮೀ ? ಅಷ್ಟಿಲ್ಲದೇ ಚತುರೋಪಾಯಗಳನ್ನ ಮಾಡಿಟ್ಟಿದಾರೆಯೇ ? ನಾನು ನಿಮ್ಮ ಸ್ಥಿತೀಲಿ ಇದ್ದಿದ್ದರೆ, ಒಳ್ಳೆ ಮಾತಿಗೆ ಯಾವಾಗ ನಂಜುಂಡಯ್ಯ ಸಗ್ಗ ಲಿಲ್ಲವೋ— ಆಗ ತೆಗೆದು ಎರಡು ಕೊಟ್ಟಿದ್ದೇ, ಸುಂದರೂನ ಕರಕೊಂಡು ಹೊರಟುಹೋಗುತಿದ್ದೆ.

ಲಿಂಗ: —ಏನು ಫಲವಾದ ಹಾಗೆ ಆಗುತಿತ್ತು ? ಸಂಸಾರ ಹಲಾಕು ಆಗಿ ಹೋಗೋದು. ಅಲ್ಲದೆ ಸುಂದರು ನಂಜೂನ ಮಗ. ಈ ಮಧ್ಯೆ ಆ ಸಾವಿತ್ರೀ ಗತಿ ಏನಾಗುತಾ ಇತ್ತು, ನೋಡೂ ಸೂರಪ್ಪ ! ಪ್ರಪಂಚದ ಲ್ಲಿರೋ ಪ್ರತಿಯೊಂದು ಜೀವಾನೂ ಸಂಸ್ಕಾರವಾಗುತಾ ಹೋಗುತ್ತೆ. ಆದರೆ ಕಾಲ ವ್ಯತ್ಯಾಸ. ನಮ್ಮ ಅವಸರಕ್ಕೆ ಹುಣ್ಣು ಮಾಗಿದ ಹಾಗೆ— ಸಂಸ್ಕಾರಾನ ಓಡಿಸೋದಕ್ಕೆ ಸಾಧ್ಯವಿಲ್ಲ. ನೋಡು—ನಂಜು—ಇಷ್ಟು ದುಷ್ಟ ಸ್ವಭಾವದವನ ಹಾಗೆ ಕಂಡು ಬಂದರೂ— ಅವನಲ್ಲಿ ಅವನ ಸಂಸ್ಕಾರಕ್ಕೆ ಕಾರಣವಾಗಿ ಒಂದು ದೊಡ್ಡ ಗುಣ ಇದೆ.

ಸೂರ:—(ಗಹಗಹಿಸಿ ನಕ್ಕು) ಚೆನ್ನಾಗಿ ಹೇಳಿದಿರಿ. 'ಬಂಡೆಯ ಒಳಗಿನಿಂದ ಹೂ ಅರಳಿತು' ಅಂದ ಹಾಗಾಯಿತು. ಅದೆಂಥಾ ಮಹಾಗುಣ ಸ್ವಾಮೀ ?

ಲಿಂಗ: -ಪಶ್ಚಾತ್ತಾಪ ಪಡೋ ಗುಣ ದುಡುಕಿನಲ್ಲಿ ತಾನು ಮಾಡಿದ ತಪ್ಪಿಗೆ ಮನಸ್ಸಿನ ಉಬ್ಬರವಿಳಿತಗಳು ನಿಂತು ಶಾಂತವಾದಾಗ ಆ ತಪ್ಪಿಗಾಗಿ ನೋಯುವದು. ಇದೊಂದು ಗುಣವೇ ಸಾಕು—ಆತ್ಮ ಸಂಸ್ಕಾರವಾಗುವುದಕ್ಕೆ; ಇಂದಲ್ಲ ನಾಳೆ, ನಂಜುವಿನಲ್ಲಿರೋ ಈ ದುಷ್ಟ ತನ ಹೊರಟು ಹೋಗುತ್ತೇ ಅನ್ನೋ ಭರವಸೆ ಕೊಡೋದಕ್ಕೆ.

ಸೂರ:—ನೀವೇ ಹೊಗಳಿಕೋಬೇಕು ಸ್ವಾಮಿ ನಿಮ್ಮ ಮಗನನ್ನ.

ಲಿಂಗ: ನನಗೆ ಆ ಅಭಿಮಾನವಿಲ್ಲ ಸೂರಪ್ಪ. ನಿನ್ನ ಮನಸ್ಸು ಸ್ವಲ್ಪ ಗಲಬಿಲಿ ಆಗಿದೆ. ರಾತ್ರಿ ಮಲಗೋವಾಗ ಯೋಚನೆಮಾಡಿ ನೋಡು —ಇವರ ಸತ್ಯಾಂಶ ನಿನಗೇ ಗೊತ್ತಾಗುತ್ತೆ.

ಸೂರ:—ಅಂದರೆ ನಿಮಗೆ ಈಗಲೂ ನಂಜುಂಡಯ್ಯನವರ ಮೇಲೆ ಸಿಟ್ಟಿಲ್ಲಾನ್ನಿ!

ಲಿಂಗ:—ಸಿಟ್ಟಿಗೆ ಅವಕಾಶವೇ ಇಲ್ಲ. ಅವನು ದುಡುಕಿ ತಪ್ಪು ಮಾಡುತಾ ಇದಾನೆ ಅಂತಾ ನನಗೆ ಗೊತ್ತು. ಅವನ ತಪ್ಪನ್ನ ಅವನು ತಿದ್ದುಕೊಳ್ಳೋ ಹಾಗೆ ಮಾಡಬೇಕು ಅಷ್ಟೇ.

ಸೂರ:—ಸರಿ ಸ್ವಾಮೀ ಹಾಗಾದರೆ; ನನಗೆ ಈ ತತ್ವ ಅರ್ಥ ವಾಗೊಲ್ಲ.

ಲಿಂಗ:—ನೀನು ಬೆಳದಿರೋ ಡಿಪಾರ್ಟಮೆಂಟ್ ಅಂಥಾದ್ದು; ಅದು ಸರಿ. ಮುಂದಕ್ಕೆ ಶಿವಮೊಗ್ಗಾದ ಕಡೆಗೆ ಯಾರನ್ನಾದರೂ ಕಳಿಸಿ ಸುಂದರೂನ ಪತ್ತೆ ಹಚ್ಚಿಸಿ ತರಿಸಿಬಿಡಬೇಕಲ್ಲಾ.

ಸೂರ:—ನಂಜುಂಡಯ್ಯನೋ ?

ಲಿಂಗ:—ಅವನು ಮನಸಿನಲ್ಲೇ ಕೊರಗತಾ ಇದ್ದಾನೆ. ಅವನು ಯಾರ ಹತ್ತಿರಾನೂ ಬಾಯಿ ಬಿಡದಿದ್ದರೂನೂವೇ ಅವನ ಚರ್ಯೆಯಿಂ ದಲೇ ಸ್ಪಷ್ಟವಾಗಿ ಗೊತ್ತಾಗುತ್ತೆ.

ಸೂರ:—ಅಂದರೇ, ಸುಂದರೂನ ಪತ್ತೆಮಾಡಿ ಕರೆಸಿದರೆ, ನಂಜುಂ ಡಯ್ಯನವರು ತಮ್ಮ ತಪ್ಪನ್ನ ಒಪ್ಪಿಕೊಂಡು ಮನೆಗೆ ಬರಮಾಡಿಕೊಳ್ಳು ತಾರೋ ?

ಲಿಂಗ:—ನಂಜೂಗೆ ದುರ್ಯೋಧನನ ಹಾಗೆ ವಿಪರೀತವಾದ ಸ್ವಾಭಿಮಾನ. ಅದರ್ಥ ಅವನ ಕಣ್ಣನ್ನ ಕುರುಡು ಮಾಡುತ್ತೆ. ಅವನು ತನ್ನ ತಪ್ಪು ಒಪ್ಪಿಕೊಳ್ಳದೇ ಹೋದರೂವೆ, ಸುಂದರೂ ಮನೆಗೆ ಬಂದರೆ ನಿಜವಾಗಿಯೂ ಮನಸ್ಸಿನಲ್ಲಿ ಸಂತೋಷಪಟ್ಟುಕೊಳ್ಳುತಾನೆ.

ಸೂರ:—ಅದು ಹೇಗಾದರೂ ಇರಲಿ. ನಾನು ಶಿವಮೊಗ್ಗೆ ಸ್ಟೇಷನ್ ಮೇಷ್ಟ್ರಿಗೆ ರೇಲ್ವೆ ಕಾನ್‌ಸ್ಟೇಬಲ್ ಮೂಲಕ ಮೊನ್ನೆ ಹೇಳಿಕಳುಹಿಸಿದೇನೆ.

ಸುಂದರೂ ಹಿಂದಕ್ಕೆ ಬರಬಹುದೂಂತ ಹೇಳೋ ಪಕ್ಷಕ್ಕೆ ಅವನನ್ನ ಕರೆಸೋ ವಿಚಾರ ನನಗೆ ಬಿಡಿ....ಅಲ್ಲ! ಬಂದು ಇಲ್ಲಿ ಯಾಕೆ ನಿಂತಿದ್ದೀರಾ? ನಡೀರಿ--ನಮ್ಮ ಮನೇಗಾದರೂ ಹೋಗೋಣ.

ಲಿಂಗ:—ಸಾವಿತ್ರಮ್ಮ ದೇವಸ್ಥಾನಕ್ಕೆ ಹೋಗಿದಾಳೆ. ಅವಳು ಪೂಜೆ ಮಾಡಿಸಿಕೊಂಡು ಬರಲೀಂತ ಇಲ್ಲೇ ನಿಂತಿದ್ದೇನೆ.

ಸೂರ:—ಅಯ್ಯೋ ಪಾಪ! ಆ ಹೆಣ್ಣುಮಗಳು ನಿಮ್ಮ ಮಗನ ಕೈ ಹಿಡಿದದ್ದಕ್ಕೆ ಎಷ್ಟು ದುಃಖ ಅನುಭವಿಸಬೇಕಾಯಿತು.

ಲಿಂಗ:— ಒಂದು ವೇಳೆ ನೀನು ಅವಳನ್ನ ಕಂಡರೂ 'ಸುಂದರು ಹಾಸನದಲ್ಲಿದಾನೆ, ಸೌಖ್ಯವಾಗಿದಾನೆ, ಒಂದು ವಾರದೊಳಗೆ ಬರುತಾನೆ' ಅಂತಲೇ ಹೇಳು. (ಇತ್ತ ತಿರುಗಿ) ತಿಳೀತೇ ಸಿಂಗ್ರೀ! ನೀನೂ ಕೂಡ ಸೂರಪ್ಪನವರು ಹೀಗೆ ಹೇಳಿದ್ರೂ ಅಂತಲೇ ಹೇಳು.

ಸೂರ:—(ಹಿಂತಿರುಗಿ) ಸಿಂಗ್ರಿ ಇಲ್ಲೇ ಇದ್ದಾನೆಯೋ! ಹಾಗಾದರೆ ಸಾವಿತ್ರಮ್ಮನ ಜೋತೇಲಿ ಸಿಂಗ್ರಿ ಮನೆಗೆ ಹೋಗುತಾನೆ, ನೀವು ಬನ್ನಿ, ನಮ್ಮ ಮನೆಯ ಕಡೆ ಹೋಗೋಣ.

ಲಿಂಗ:— ಹಾಗೇ ಮಾಡುತೀಯ ಸಿಂಗ್ರೀ? ದೇವಸ್ಥಾನಕ್ಕೆ ಹೋಗಿ ಪೂಜೆ ಮುಗಿಯುವವರೆಗೂ ಅಲ್ಲೇ ಇದ್ದು 'ಸೂರಪ್ಪನವರು ಸಿಕ್ಕಿದ್ದರು; ಹೀಗೆ ಹೇಳಿದರೂ' ಅನ್ನೋಸಮಾಚಾರಾನೂ ಹೇಳಿ, ಜೋತೇಲಿ ಮನೆಗೆ ಕರಕೊಂಡು ಹೋಗು. ನಂಜೂ ಏನಂದರೂ ಸಿಟ್ಟಾಗಬೇಡ. ನಾನು ಸೂರಪ್ಪನವರ ಮನೆಗೆ ಹೋಗಿಬಿಟ್ಟು ಬೇಗ ಬಂದುಬಿಡುತ್ತೇನೆ.

ಸಿಂಗ್ರಿ:—ಆಗಲೀ ಸ್ವಾಮೀ! (ಬಲಗಡೆಗೆ ಹೋಗವನು)

ಲಿಂಗ:—ಬಾ ಸೂರಪ್ಪ! ನಿನ್ನಿಷ್ಟದಂತೆ ಆಗಲಿ. (ಎಡಗಡೆಗೆ ಹೊರಡುವನು) (ಸೂರಪ್ಪನು ಡಬ್ಬಿಯನ್ನು ತೆಗೆದು ಬಡಿದು, ಲಿಂಗಪ್ಪಯ್ಯನು ನೋಡುತ್ತಲೇ ಮತ್ತೆ ಜೇಬಿಗೆ ಹಾಕಿ ನಗುವನು. ಲಿಂಗಪ್ಪಯ್ಯನು ನಿಷ್ಕ್ರಮಿಸುತ್ತಾ) ಆಗಲೀ! ಆಗಲೀ! ಅದೂ ಒಂದು ಬಗೆಯ ಕ್ಷಣಿಕ ಶಾಂತಿಸಂಧಾನ. (ನಿಷ್ಕ್ರಮಣ)

ಪ್ರವೇಶ ಮೂರು

[ನಂಜುಂಡಯ್ಯನ ಮನೆಯ ಹಜಾರ. ಬೆಳಿಗ್ಗೆ ಎಂಟೂವರೆ ಗಂಟೆ. ನಂಜುಂಡಯ್ಯನು ಚಿಂತಾಕ್ರಾಂತನಾಗಿ ಆರಾಮ ಕುರ್ಚಿಯ ಮೇಲೆ ಕುಳಿತು ಬಲಗೈಲಿರುವ ಶೀಸೆಯಿಂದ ಔಷಧವನ್ನು ಕುಡಿಯುತ್ತಾ ಎಡಗೈಲಿರುವ ಪತ್ರವನ್ನು ಓದುತ್ತಿರುವನು. ಮುಖದಲ್ಲಿ ಆಯಾಸ ಆತಂಕಗಳ ಸೂಚನೆ]

ನಂಜು:— ಈ ವಾರದಲ್ಲಿ ನಿಮ್ಮ ದೇಹಸ್ಥಿತಿ ನೆಟ್ಟಗಿಲ್ಲದಿದ್ದರೆ ಖಾಯಿಲೆಯಾಗಿರುವುದೆಂದು ತಿಳಿಯಿರಿ. ನೀವು ಬಹಳ ಸರಳ ಸ್ವಭಾವದವರಾದುದರಿಂದ ಎಲ್ಲರೂ ನಿಮ್ಮಿಂದ ಉಪಯೋಗ ಪಡೆಯುವ ಹಂಚಿಕೆ ಹೂಡಿ, ನಿಮ್ಮ ಸೌಜನ್ಯವನ್ನು ದುರುಪಯೋಗ ಪಡಿಸಿಕೊಳ್ಳುವರು. ನಿಮಗೆ ಈ ವಾರದಲ್ಲಿ ಚಿಂತೆ ಹೆಚ್ಚಿದರೂ ಹೆಚ್ಚಬಹುದು; ತಗ್ಗಿದರೂ ತಗ್ಗಬಹುದು ಒಂದು ವೇಳೆ ಹೆಚ್ಚಾದಲ್ಲಿ ನಮ್ಮ ಚಿಂತಾನಿವಾರಕ ತಾಯತಿಯನ್ನು ಕೂಡಲೇ ತರಿಸಿ ಕೊಂಡು ನಿಮ್ಮ ಬಲತೋಳಿಗೆ ಕಟ್ಟಿಕೊಳ್ಳಿರಿ. (ಕತ್ತೆತ್ತಿ ಖಿನ್ನನಾಗಿ ಸುತ್ತಲೂ ನೋಡುವನು.) ...ನಿಮ್ಮ ಮನೆಯವರೊಂದಿಗೆ ಅತಿಯಾದ ಸ್ನೇಹದಿಂದಿರಬೇಡಿ. 'ಅತಿಸ್ನೇಹ ಗತಿಗೆಡಿಸಿತು' ಸಲಿಗೆಯವರನ್ನು ದೂರದಲ್ಲಿಡುವುದೇ ಮೇಲು. ಈ ವಾರ ನಿಮಗೆ ನಿದ್ದೆ ಕಡಿಮೆಯಾದರೂ ಆದೀತು. ಹಾಗಾಗುವ ಪಕ್ಷಕ್ಕೆ ನಮ್ಮ 'ಸುಷುಪ್ತಿದಾಯಕಾಸವ'ದ ಮೂರು ರೂಪಾಯಿನ ಸಣ್ಣ ಸೀಸೆಯನ್ನು ಕೂಡಲೇ ತರಿಸಿಕೊಳ್ಳಿರಿ. (ಹಿಂದಿನಿಂದ ಸಾವಿತ್ರಮ್ಮನು ಒಂದು ಲೋಟ ಬಿಸಿನೀರನ್ನು ಹಿಡಿದು ಬರುವಳು. ನಂಜುಂಡಯ್ಯನು ಅತ್ತ ತಿರುಗುವನು.) ಇಷ್ಟು ಹೊತ್ತೇ ಒಂದು ಲೋಟ ಬಿಸಿನೀರಿಗೆ?

ಸಾವಿ:—ಆಗಲೇ ತಂದ ನೀರು ಸಾಕಷ್ಟು ಬಿಸಿಯಾಗಿರಲಿಲ್ಲ; ಕುದೀತಾ ಇರಬೇಕೂಂತ ಹೇಳಿದರಲ್ಲ. ಅದಕ್ಕೋಸ್ಕರ ಕುದಿಸಿ ತಂದೆ. (ಆ ನೀರಿನ ಲೋಟವನ್ನು ಮೇಜಿನ ಮೇಲಿಟ್ಟು, ಬೆರಳುಗಳನ್ನು ಹಿಸುಕಿಕೊಳ್ಳುವಳು)

ನಂಜು:—(ಸಿಡಿದು)ಅಲ್ಲವೇ ಪತಿದ್ರೋಹೀ!! ಈ ಕುದಿಯೋ ನೀರು ಸಮೇತ ಮಾತ್ರೆ ನುಂಗಿ ನಾನು ಸಾಯಲೀ ಅಂತಲೇ ನಿನ್ನ ಬಯಕೇ?

ಸಾವಿ:—(ಕಿವಿಮುಚ್ಚಿ) ರಾಮರಾಮ!

ನಂಜು:—(ಅಣಗಿಸುವ ಧ್ವನಿಯಲ್ಲಿ) ಆಹಹಾ! ಅಭಿನವ ಸಾವಿತ್ರೀ! ....ಅಲ್ಲವೇ! ಮಾತ್ರೆ ನುಂಗೋದಕ್ಕಲ್ಲವೇನೇ ನಾನು ನೀರು ಕೇಳಿದ್ದು?

ಸಾವಿ:—(ಹೆದರಿ ಸುಮ್ಮನಿರುವಳು)

ನಂಜು:—(ರೋಷದಿಂದೆದ್ದು) ಅಲ್ಲವೇನೇ? ಬೊಗಳೇ!!

ಸಾವಿ:—(ಬೆಚ್ಚಿ) ಹೌದು.

ನಂಜು:—ಹೌದೂಂತ ಗೊತ್ತಿದ್ದೂ ಈ ಕುದಿಯೋ ನೀರು ತಂದೆಯಾ ನನ್ನ ಗಂಟಲು ಸುಡೋಕೆ?

ಸಾವಿ:—(ಗದ್ಗದಿತಳಾಗಿ) ಬಿಸಿನೀರು ತಂದಾಗ, ನೀವು ರೇಗಿ 'ಕುದಿಯೋ ನೀರು ತಾ' ಅಂದಿರಲ್ಲ— ಅದಕ್ಕೋಸ್ಕರ ಹೆದರಿ....

ನಂಜು:—(ಅಣಕಿಸುತ್ತಾ) ಅಯ್ಯೋ! ಗಂಡಾಂದರೆ ಏನು ಭಯ! ಏನು ಭಕ್ತಿ!

ಸಾವಿ:—(ಪೆಚ್ಚಾಗಿ) ಈಗೇನು ಮಾಡಲೀಂದರೆ?

ನಂಜು:— (ರೇಗಿ) ಈ ಕುದಿಯೋ ನೀರನ್ನ ನಿನ್ನ ತಲೇಮೇಲೆ ಸುರಕೊಂಡು ಒಂದು ಲೋಟ ಕಾದು ಆರಿದ ನೀರನ್ನ ತಗೊಂಡು ಬಂದು ನನ್ನ ತಲೆಯ ಮೇಲೆ ಕುಕ್ಕು: ಮನೆಹಾಳಿ! ಒಂದು ಕಾಸಿನ ಕೆಲಸಕ್ಕೆ ಒಂದು ಘಂಟೆ ಕಾದು ಸಾಯಬೇಕು. ಇನ್ನು ಮಾತ್ರೆ ತಗೊಂಡು, ನಾನು ಕೂಳು ತಿಂದು ಹಾಳಾಗೋದು ಯಾವಾಗ?

(ಬಲವಾಗಿ ಬಿಸಿನೀರಿನ ಲೋಟವನ್ನು ಕೈಲಿದ್ದ ಶೀಸೆಯಿಂದ ಸಾವಿತ್ರಮ್ಮನ ಕಡೆಗೆ ಬಡಿಯುವನು. ಬಿಸಿನೀರು ಹಾರಿ, ಸಾವಿತ್ರಮ್ಮನು ಕೈಕಾಲುಗಳನ್ನು ಕೊಡುವುತ್ತಾ ಹೆದರಿದ ಹುಲ್ಲೆಯಂತೆ ಒಳಕ್ಕೆ ಹೊರಟು ಹೋಗುವಳು)

ನಂಜು:—ನಾನು ಯಾರಿಗೋಸ್ಕರ ಈ ಹಾಳು ಸಂಸಾರ ನಡಿಸಬೇಕು !....ವಂಶೋದ್ಧಾರಕ ಮಗ—ಮನೆಬಿಟ್ಟು ಕೆಟ್ಟು ಪೋಲಿಯಾದ. ಕೈ ಹಿಡಿದ ಹೆಂಡತಿಯಿಂದ ಈ ನರಕ ಸುಖ.

(ಇತ್ತ ಕಡೆಯಿಂದ ಮನಿಆರ್ಡರ್ ಫಾರಂನ್ನೂ ದುಡ್ಡಿನ ಚೀಲವನ್ನೂ ಕೈಲಿ ಹಿಡಿದು ಸಿಂಗ್ರಿಯು ಪ್ರವೇಶ; ಭಯಭೀತನಾಗಿರುವನು)

ಸಿಂಗ್ರಿ:— ಸ್ವಾಮಿ ! (ಹಣವನ್ನೂ ಫಾರಂನ್ನೂ ಮುಂದೆ ಚಾಚುವನು)

ನಂಜು:— ಯಾಕೋ ಹಿಂದಕ್ಕೆ ತಂದೆ? ಪೋಸ್ಟ್‌ಮೇಷ್ಟ್ರು ಹಾಳಾಗಿ ಹೋಗಿದ್ದನೇನೋ ?

ಸಿಂಗ್ರಿ:—ನಾನು ಪೋಸ್ಟ್ ಆಫೀಸ್ ವರೆಗೂ ಹೋಗಿರಲಿಲ್ಲ.

ನಂಜು:—ಇನ್ನೆಲ್ಲಿಗೆ ಹೋಗಿದ್ದೆ ಹಾಳಾಗೀ ?

ಸಿಂಗ್ರಿ:— ಅಂಗಡಿ ಬೀದಿ ಹತ್ತಿರಾನೇ ಫಾರಂ ನೋಡಿದೆ. ಬರೆದದ್ದು ತಪ್ಪಾಗಿತ್ತೂಂತ ಹಿಂದಕ್ಕೆ ತಂದೆ.

ನಂಜು: —(ರೇಗಿ) ಏನೋ? ನಾನು ಬರೆದಿರೋ ಮನಿಆರ್ಡರ್ ಫಾರಂ ತಪ್ಪಾಗಿದೆಯೆ? ಆ ತಪ್ಪನ್ನ ನೀನು ಕಂಡುಹಿಡಿದೆಯಾ?

ಸಿಂಗ್ರಿ:—ದುಡ್ಡು ಕಳಿಸೋದು ಯಾರಿಗೆ ಅನ್ನೋಕಡೆ ದೇವರಯ್ಯನೋರಿಗೆ ಅಂತ ಬರೆದು, ಕೆಳಗಡೆ 'ಬೆಂಗಳೂರು' ಅಂತಾನೆ ಬರೆದಿದೆ.

ನಂಜು:— (ರೋಷಾವೇಶದಿಂದ ಮುಂದೆ ನುಗ್ಗಿ ಅವನ ಕೈಯಿಂದ ಫಾರಂನ್ನೂ ಹಣವನ್ನೂ ಕಿತ್ತುಕೊಂಡು ಬರೆದಿರುವುದನ್ನು ನೋಡುವನು; ಕೋಪವು ಮತ್ತೂ ಹೆಚ್ಚುವುದು) ಅಲ್ಲವ್ರೋ! ಹ್ರಂಡಸೂಳೇಮಗನೇ ! ನೀನು ಆಳುತನ ಮಾಡೋದಕ್ಕೆ ಬಂದಿದೀಯೋ, ಇಲ್ಲ ನನಗೆ ಪಾಠ ಹೇಳಿಕೊಡೋದಕ್ಕೆ ಬಂದಿದೀಯೋ? ನೀನೀ ಮನೇಲಿ ಜವಾನನೋ ಅಲ್ಲ ಮೇಷ್ಟ್ರೋ? ತಲೆ ಹರಟೆ ರ್ಯಾಸ್ಕಲ್! ಫಾರಂನ್ನ ಯಾಕೋ ನೋಡಿದೇ? (ಸಿಂಗ್ರಿ ಸುಮ್ಮನಿರುವನು. ನಂಜುಂಡಯ್ಯನು ಕೈ ಎತ್ತಿ) ಬೊಗಳೋ ತಿರುಬೋಕೀ! (ತಲೆಯ ಮೇಲೆ ಬಲವಾಗಿ ಹೊಡೆಯುವನು. ಸಿಂಗ್ರಿ 'ಅಯ್ಯೋ' ಎಂದು ಕೂಗಿಕೊಳ್ಳುವನು. ಸಾವಿತ್ರಮ್ಮನು ಒಳಗಿನಿಂದ ಓಡಿಬರುವಳು) ಮಾತನಾಡೋ! ನಾನು ಬರಕೊಟ್ಟ ಫಾರಂನ್ನ ಯಾತಕ್ಕೆ ನೋಡಿದೆಯೋ ತೆಗೆದು? ಬೊಗಳೋ! ಕತ್ತೇ!!

ಸಿಂಗ್ರಿ:—(ತಲೆಯನ್ನು ಮುಟ್ಟಿ ನೋಡಿಕೊಂಡು) ನೀವು ಬಯ್ಯಬೇಡಿ ಸ್ವಾಮೀ! ಬೇಕಾದರೆ ಇನ್ನೂ ಎರಡೇಟು ಹೊಡೀರಿ.

ನಂಜು:—ಎಲಾ ಚಂಡಾಲಾ! (ಮತ್ತೊಂದೇಟು ಹೊಡೆಯುವನು)

ಸಾವಿ:— (ಅಡ್ಡಬಂದು) ಅಯ್ಯೋ! ಪಾಪ ಅವನನ್ನ ಯಾಕೆ ಹೊಡೀತೀರೀ ಅಂದರೇ!

ನಂಜು:— ಮತ್ತೆ ಬಂದೆಯಾ ಅಂದರೇ ನೀನು ನನಗೆ ಬುದ್ಧಿ ಕಲಿಸೋದಕ್ಕೇ? ನಿಮಗೆಲ್ಲಾ ನಾನು ಮಗ ಅಂತ ತಿಳಿದುಕೊಂಡಿದೀರಾ? ಏನೇ! ಅಪರಾಧ ಮಾಡಿದ ಆಳನ್ನ ದಂಡಿಸಿದರೆ, ನೀನು ಬಂದು ನನಗೆ ಉಪದೇಶ ಮಾಡುತೀಯಾ? ಹೊರಡೆ ಒಳಕ್ಕೆ ಮರ್ಯಾದೆಯಾಗೀ!

ಸಾವಿ:—ಹೋಗುತೇನೇ ಅಂದರೆ. ಆದರೆ ಪಾಪ ಆ ಹುಡುಗನನ್ನ ಹೊಡೀಬೇಡೀಂದರೆ!

ನಂಜು:—(ಕಿಡಿಯಾಗಿ ಕೈ ಎತ್ತಿ) ಎಲಾ ಚಂಡಾಲೀ! ಮತ್ತುಪದೇಶ!! (ಕೆನ್ನೆಗೆ ಬಲವಾಗಿ ಒಂದೇಟು ಕೊಡುವನು. ಸಾವಿತ್ರಮ್ಮನು, ಕಿಟಾರನೆ ಕಿರಿಚಿಕೊಳ್ಳುವಳು. ಹೊರಬಾಗಿಲಿನಿಂದ ಲಿಂಗಪ್ಪಯ್ಯನು ಓಡಿಬರುವನು. ಬಂದು ಸಾವಿತ್ರಮ್ಮನನ್ನು ಒರಗಿಸಿಕೊಂಡು ಸಮಾಧಾನ ಮಾಡುವನು. ಸಾವಿತ್ರಮ್ಮನು ಬಿಕ್ಕುತ್ತಾ ಒಳಕ್ಕೆ ಹೊರಟು ಹೋಗುವಳು)

ಲಿಂಗ:—ಏನೋ ನಂಜೂ ಈ ಅವಾಂತರ?

ನಂಜು:— ಪ್ರಶ್ನೆ ಕೇಳುತಾ ಇದ್ದೀರಾ? ಇಲ್ಲ ಆಕ್ಷೇಪಣೆ ಮಾಡುತಾ ಇದ್ದೀರಾ?

ಲಿಂಗ:—ಯಾಕೆ ಮತ್ತೆ ಹೀಗೆ ರೇಗಿದೀ?

ನಂಜು:— ಉತ್ತರ ಹೇಳಬೇಕೇನೂ?

ಲಿಂಗ:—ಹೇಳು.

ನಂಜು:—ನಾನು ಹೋದ ವಾರವೇ ಮನೆ ಬಿಟ್ಟು ಓಡಿಸಿದ್ದ ಈ ತಲೆ ಹರಟೆ ತಿರುಬೋಕೀನ ಮತ್ತೆ ಮನೆಗೆ ಯಾಕೆ ತಂದು ಸೇರಿಸಿದಿರಿ?

ಲಿಂಗ:—ನಾನವರಪ್ಪನಿಗೆ ವಾಗ್ದಾನ ಮಾಡಿದ್ದೆ; ಅದರಂತೆ ಅವನಿನ್ನೂ ಒಂದೆರಡು ತಿಂಗಳಿರಬೇಕು ಇಲ್ಲಿ.

ನಂಜು:— ಇವನನ್ನ ಇಲ್ಲಿ ಆಳಾಗಿಟ್ಟಿದೀರೋ? ಇಲ್ಲ ನೀವಿಲ್ಲದಿರೋವಾಗ ನನ್ನ ಮೇಲೆ ಉಸ್ತುವಾರಿ ಮಾಡಲೀಂತ ಇಟ್ಟಿದೀರೋ?

ಲಿಂಗ: — ಏನೋ ಸಿಂಗ್ರೀ ಸಮಾಚಾರ?

(ಸಿಂಗ್ರಿಯು ಉಕ್ಕಿಬರುವ ಅಳುವನ್ನು ತಡೆಯಲಾರದೆ, ಕಣ್ಣುಗಳನ್ನು ಒರಸಿಕೊಂಡು, ಲಿಂಗಪ್ಪಯ್ಯನ ಕಾಲಿಗೆ ನಮಸ್ಕಾರ ಮಾಡಿ, ಬಿಕ್ಕುತ್ತಾ ಹೊರಬಾಗಿಲಿನಿಂದ ಹೊರಟು ಹೋಗುವನು.)

ಲಿಂಗ:— (ಎರಡು ಹೆಜ್ಜೆ ಮುಂದೆ ಹೋಗಿ) ಸಿಂಗ್ರೀ! ಸಿಂಗ್ರೀ! ಎಲ್ಲಿಗೆ ಹೋಗುತೀಯೋ?

ಸಿಂಗ್ರಿ: —(ಬಾಗಿಲಾಚೆಯಿಂದ) ನಮ್ಮ ಚಿಕ್ಕಪ್ಪನ ಮನೆಗೆ.. ನನ್ನ ತಪ್ಪನ್ನ ಮನ್ನಿಸಬೇಕು ಸ್ವಾಮೀ!

ಲಿಂಗ:— ಚಿನ್ನದಂಥಾ ಹುಡುಗ!

ನಂಜು: —ಹೌದು ಹೌದು!! ನಿಮ್ಮ ಮಾತುಗಳನ್ನೆಲ್ಲಾ ಕೇಳಿದಷ್ಟೂ ನೀವೆಲ್ಲಾ ನನ್ನ ಹಿಂದಿನ ಜನ್ಮದ ಶತ್ರುಗಳೂ ಅನ್ನೋ ಜಾತಕದ ಫಲ ಸತ್ಯವಾಗಿ ಕಾಣುತ್ತೆ. ಮನೇಲಿದ್ದ ಮಗನನ್ನ ಮುದ್ದು ಮಾಡಿ, ತಲೇ ಮೇಲೆ ಹತ್ತಿಸಿಕೊಂಡು, ಕಡೇಗೆ ಅವನು ಅಪ್ಪನ ಮಾತು ಕೇಳದಿರೋ ಅಪಾಪೋಲಿಯಾಗೋ ಹಾಗೆ ಮಾಡಿ, ಕಡೆಗೆ ಅವನು ಮನೇ ಬಿಟ್ಟು ಹೋಗೋ ಅಷ್ಟು ಕೆಚ್ಚು ಬಂತು ಅವನಿಗೆ. ಈ ಪುಂಡ ಸೂಳೇಮಗನನ್ನ, ಆಳೂಂತ ತಂದು ಮನೇಲಿಟ್ಟರೆ, ಅವನನ್ನ ಬೃಹಸ್ಪತಿ ಮಾಡುತೀನಿ ಅಂತ ಹೇಳಿ, ಹೊತ್ತು ಹೋಗದ ಫಜೀತೀಗೆ ಅವನಿಗೆ ಕನ್ನಡ ಕಲಿಸಿ, ಇಂಗ್ಲೀಷ್ ಓದೋ ಹಾಗೆ ಮಾಡಿ ಹಾಳುಮಾಡಿದಿರಿ. ಈಗ ಅವನು ನನಗೇ ಗುರುವಾದ.

ಲಿಂಗ:—ಏನು ಅಂಥಾ ಅಪರಾಧವಾಯಿತು?

ನಂಜು: —ಏನು ಅಪರಾಧವೇ! ಆಳು ಅನ್ನಿಸಿಕೊಂಡವನು ಹೇಳಿದಷ್ಟು ಕೆಲಸ ಮಾಡಿಕೊಂಡು, ಬಾಯಿ ಮುಚ್ಚಿಕೊಂಡು ಬಿದ್ದಿರೋದು ಬಿಟ್ಟು ಬಿಟ್ಟು, ನಮ್ಮ ಕಾಗದಪತ್ರಗಳನ್ನ ಬಿಚ್ಚಿ ನೋಡೋದು; ನಮಗೇ ಉಪದೇಶ ಮಾಡೋದು.

ಲಿಂಗ:—ಸಿಂಗ್ರೀ ಅಂಥವನಲ್ಲ ನಂಜೂ!

ನಂಜು:—ಪಾಪ! ಎಲ್ಲಾ ನಿಮ್ಮ ತಯಾರಿ ಅಲ್ಲವೇ? ನನ್ನ ಮನೆ ಹಾಳು ಮಾಡೋದಕ್ಕೆ ನೀವೇ ಸೊಂಟ ಕಟ್ಟಿ ನಿಂತಿರೋವಾಗ ಇನ್ನು ಅವನನ್ನ ಅಂದೇನು ಪ್ರಯೋಜನ?

ಲಿಂಗ:—ಛೀ! ಛೀ!! ಬಾಯಿಗೆ ಬಂದ ಹಾಗೆ ಮಾತನಾಡುತಾ ಇದ್ದೀಯಾ! ಪೂರ್ವಾಪರ ವಿಚಾರ ಮಾಡದೆ ನುಡಿದರೆ ಏನು ಬಂದಿತು! ನನ್ನನ್ನ ನೀನು ಏನೇ ಅನ್ನು ಚಿಂತೆಯಿಲ್ಲ. ನೀನು ಮಗ—ನನ್ನನ್ನ ಅನ್ನೋದಕ್ಕೂ ಹಕ್ಕಿದೆ— ಹೊಡೆಯೋದಕ್ಕೂ ಹಕ್ಕಿದೆ.

ನಂಜು:—ಮನೇಲಿರೋ ಸೊಳ್ಳೆಗಳಿಗೆಲ್ಲಾ ಹೆದರಿಕೊಂಡು ಸುಮ್ಮ ನಿದ್ದರೂ, ನನ್ನನ್ನು ಬಾಳಿಸುತಾ ಇಲ್ಲ. ಇನ್ನು ನಿಮ್ಮನ್ನಂದರೇ ನೀವೆಲ್ಲಾ ಸೇರಿ ನನ್ನನ್ನ ಏನು ಮಾಡೋದಕ್ಕೂ ಹೇಸುವುದಿಲ್ಲ.

ಲಿಂಗ: (ಎರಡು ಹೆಜ್ಜೆ ಇಟ್ಟು ಹಿಂದಿರುಗಿ) ಈ ಬಗೆಯ ಮಾತುಗಳಿಂದ ನಿನ್ನ ಮನಸ್ಸು ಇನ್ನೂ ಕೆಡುತ್ತೆ; ಅದಕ್ಕೆ ಅವಕಾಶ ಕೊಡಬೇಡ ಸಿಂಗ್ರಿ ಏನು ಮಾಡಿದ ಹೇಳು? ಯಾವ ಕಾಗದ ಒಡೆದು ನೋಡಿದ? ಹಾಗೆ ಮಾಡಿದ್ದರೆ ಅವನಿಗೆ ಬುದ್ಧಿ ಹೇಳಿ ತಿದ್ದಬೇಕಾದದ್ದೇ.

ನಂಜು:—ಅಷ್ಟಾದರೂ ಅಭಯಪ್ರದಾನವಾಯಿತಲ್ಲ. (ಮನಿ ಆರ್ಡರ್ ಫಾರಂನ್ನು ಮುಂದೆ ಹಿಡಿದು) ದೇವರಯ್ಯನ ಅಡ್ರೆಸ್ ಬರೆಯೋವಾಗ ಎಲ್ಲೋ ಯೋಚನೇಲಿ 'ಚಿಕ್ಕಬಳ್ಳಾಪುರ' ಅಂತ ಬರೆಯೋದಕ್ಕೆ ಮತ್ತೆ 'ಬೆಂಗಳೂರು' ಅಂತಾನೇ ಬರೆದುಬಿಟ್ಟಿರಬಹುದು.—ನಾನು ಅಷ್ಟಕ್ಕೇನೇ—ಈ ಬೃಹಸ್ಪತಿ ನನ್ನ ಬರೆವಣಿಗೇನೆಲ್ಲಾ ಚೆಕ್ ಮಾಡಿ, ಅವನು ಕಲಿತಿರೋ ವಿದ್ಯಾನಾ ನನ್ನೆದುರಿಗೆ ಪ್ರದರ್ಶಿಸೋದಕ್ಕೇ ಅಂತ, ಫಾರಂ ಹಿಂದಕ್ಕೆ ತಂದು, ನನ್ನ ಮುಖಕ್ಕೆ ಹಿಡಿದು 'ಸ್ವಾಮೀ! ಇಲ್ಲಿ ನೋಡಿದಿರಾ—ನೀವು ಮಾಡಿರೋ ತಪ್ಪನಾ?' ಅಂತ ಹೇಳಿದರೇ, ಮನೇಗೆ ಯಜಮಾನಾಂತ ಅನ್ನಿಸಿಕೊಂಡಿರೋ ನಿರ್ಭಾಗ್ಯ ಏನು ಮಾಡಬೇಕು? ಬಾಯಿ ಮುಚ್ಚಿಕೊಂಡು ತಗೊಂಡು ಹೋಗಿ ಪೋಸ್ಟ್ ಆಫೀಸಿಗೆ ಕೊಟ್ಟಿದ್ದರೆ, ಆ ಪೋಸ್ಟ್‌ಮೇಷ್ಟ್ರು ತಿದ್ದಿಕೊಳ್ಳುತ್ತಿದ್ದ—ದೇವರಯ್ಯ ಅವನಿಗೆ ಫ್ರೆಂಡೂ....ಅದು ಬಿಟ್ಟುಬಿಟ್ಟು ಈ ಚಂಡಾಲಾ....

ಲಿಂಗ:—(ನಿಟ್ಟುಸಿರು ಬಿಟ್ಟು) ಇಷ್ಟೇ ತಾನೆ! ನಾನು, 'ಯಾವ ಕಾಗದ ಒಡೆದು ಬಿಟ್ಟನೋ?' ಏನು ಓದಿಕೊಂಡು ಬಿಟ್ಟನೋ? ಅಂತ ವಿಪರೀತ ಯೋಚನೇಲಿದ್ದೆ. ಇದೇನು ಅಪರಾಧ ನಂಜೂ? ಹೊಸದಾಗಿ ಓದು ಕಲಿತವರಿಗೆ ಏನು ಸಿಕ್ಕಿದರೂ ಓದಬೇಕೂಂಬೋದು ಒಂದು ಪ್ರಬಲವಾದ ಚಪಲ. ಅದೂ ಒಳ್ಳೇದಕ್ಕೇ. ಅವನೂ ಹುಡುಗ. ಫಾರಂನ ಅಂಟಿಸೇನೂ ಕೊಟ್ಟಿರಲಿಲ್ಲ. ಓದುತಾ ಹೋಗಿದಾನೆ. ಸರಿ, ಅವನಿಗೇ ಅನುಮಾನ ಬಂದು, ಪೋಸ್ಟ ಆಫೀಸ್‌ಗೆ ಹೋಗಿ ಅವರ ಕೈಲಿ ಅನ್ನಿಸಿಕೊಂಡು ಹಿಂದಿರುಗುವದಕ್ಕೆ ಬದಲಾಗಿ, ಅಷ್ಟರಲ್ಲೇ ಬಂದುಬಿಟ್ಟಿದಾನೆ —ನಿನ್ನ ಕೈಲೇ ತಿದ್ದಿಸೋಣಾಂತ. ಇಷ್ಟಕ್ಕೇ ನೀನು ಅವನನ್ನ ಹೊಡೆದು, ಸಾವಿತ್ರೀನ ಚಚ್ಚಿ, ಇಷ್ಟೊಂದು ಮೈ ಪರಚಿಕೊಳ್ಳೋ ಅಷ್ಟು ಸಿಟ್ಟಾಗೀ....ಇದೆಲ್ಲಾ ಈ ಅನಾವಶ್ಯಕವಾದ ವಿಪರೀತಗಳು ಜರುಗಲೇ ಬೇಕಾದ್ದಿರಲಿಲ್ಲ.

ನಂಜು:—(ರೇಗಿ) ನಾನು ಹೇಳಿದೆನೆಲ್ಲಾ! ನಾನು ಪಾಪಿ, ಅಜ್ಞಾನಿ, ಪಾಷಂಡಿ; ನೀವು ನನ್ನ ಸಂಸಾರಸುಖಾನ ಹಾಳುಮಾಡೋದಕ್ಕೋಸ್ಕರ ಬಂದಿರೋ ನನ್ನ ಹಿಂದಿನ ಜನ್ಮದ ಶತ್ರುಗಳು. ನೀವು ಆ ಸುಂದರನನ್ನ ಅಷ್ಟು ಕೊಬ್ಬಿಸದೆ ಹೋಗಿದ್ದಿದ್ದರೇ, ಅಥವ ಅವನು ಬಾಲ್ಯದಿಂದ ನಿಮ್ಮ ಕೈಗೆ ಸಿಕ್ಕದೆ ಹೋಗಿದ್ದಿದ್ದರೇ, ನಮ್ಮ ಗಂಡ ಹೆಂಡತಿ ಮಕ್ಕಳ ಸಂಸಾರ ಎಷ್ಟೋ ಚೆನ್ನಾಗಿರುತ್ತಿತ್ತು. ಇನ್ನು ಈ ಹಾಳು ಸಂಸಾರದಲ್ಲಿ ನಾಸಿರೋದಕ್ಕೆ ಒದಲು ನಿಮಗೇ ಎಲ್ಲ ಒಪ್ಪಿಸಿ ಹೊರಟುಹೋಗೋದು ಮೇಲು (ಸಿಟ್ಟಿನಿಂದ ಒಳಗೆ ಹೋಗಲಿರುವನು.)

ಲಿಂಗ:—(ಅವನನ್ನ ತಡೆದು) ಬೇಡ ನಂಜು! ನಿನ್ನ ಸಂಸಾರ ಬಿಟ್ಟು ಬಿಟ್ಟು ನೀನು ಹೋಗೋದು ಸಮಂಜಸವಾಗಿಲ್ಲ; ಅಲ್ಲದೆ ನ್ಯಾಯವೂ ಅಲ್ಲ. ನನ್ನಿಂದ ನಿನ್ನ ಸಂಸಾರ ಹಾಳಾಗುತಾ ಇದೆ ಅಂಬೋದು ಸತ್ಯವೋ —ಮಿಥ್ಯವೋ; ಅದು ಹೇಗಾದರೂ ಇರಲಿ. ಆದರೆ ನಿನ್ನ ಮನಸ್ಸಿನಲ್ಲಿ ಈ ಬಗೆಯ ಅಭಿಪ್ರಾಯವಿದೇ ಅಂಬೋದು ನನಗೆ ಮೊದಲೇ ಗೊತ್ತಾಗಿದ್ದಿದ್ದರೆ ಚೆನ್ನಾಗಿರುತಿತ್ತು. ಆಗಲೀ! ಈಗಲೂ ಕೂಡ ಏನೂ ತಡವಾಗಿಲ್ಲ. ಸುಂದರನ ಪತ್ತೇಮಾಡಿ ಕರೆತರೋ ಹಾಗೆ ಸೂರಪ್ಪನಿಗೆ ಹೇಳಿದೀನಿ.

ಅವನೂ ಇನ್ನೂ ಆರೇಳು ದಿವಸದಲ್ಲಿ ಮನೆಗೆ ಬರಬಹುದು. ನೀವು ಗಂಡ ಹೆಂಡತಿ ಮಗ ಸುಖವಾಗಿರಿ—ನಾನು ಹೊರಡುತೇನೆ.

ನಂಜು:—ನೀವು ಹೊರಡೋದೇನೂ ಅಷ್ಟು ಕಷ್ಟವಾಗುವದಿಲ್ಲ. ನಿಮ್ಮಿಂದ ಇದುವರೆಗೂ ನನಗೆ ಎಷ್ಟು ಶಾಸ್ತಿ ಆಗಬೇಕಾಗಿದ್ದಿತೋ ಅಷ್ಟೂ ಆದಹಾಗಾಯಿತು. ಆದರೆ ಹೋಗುವದಕ್ಕೆ ಮುಂಚೆ ನನ್ನ ಸಂಸಾರ ಕೂಡಿಸಿಬಿಟ್ಟು ಹೋಗೋದು ನಿಮಗೆ ಧರ್ಮಾಂತ ಕಾಣಿಸಲಿಲ್ಲ ವೇನೊ?

ಲಿಂಗ:—ನೋಡೂ ನಂಜೂ! ನನ್ನಿಂದ ನಿನಗೆ ಇದುವರೆಗೂ ಎಷ್ಟು ತೊಂದರೆ ಆಗಿದ್ದರೂನೂ, ಮನ್ನಿಸಿಬಿಡು. ಸುಂದರೂನ ಕರೆಸಿ ನಿನಗೆ ಒಪ್ಪಿಸೋ ಭಾರ ನನ್ನದು; ಸತ್ಯವಾಗಿಯೂ ಅದನ್ನು ಆದಷ್ಟು ಜಾಗ್ರತೆ ಮಾಡುತೇನೆ. ಆದರೆ ಈಗ ನಾನು ಹೊರಡೋದಕ್ಕೆ ಅಪ್ಪಣೆ ಕೊಡು. ನಾನು ಹೊರಡುತೇನೇ ಅಂತ ಸಾವಿತ್ರೀಗೆ ಕೂಡ ಹೇಳೋದಿಲ್ಲ; ಅದರಿಂದ ಇನ್ನಷ್ಟು ಅವಾಂತರವಾಗಬಹುದು.

ನಂಜು:—ಸುಂದರ ಬರೋವರೆಗೂ ಇಲ್ಲೇ ಇದ್ದು, ಮಗನಾದ ಪುಂಡ ಅಪ್ಪನ ಮಾತನ ಕೇಳಿಕೊಂಡು ಬಿದ್ದಿರಬೇಕೂಂತನ್ನೋ ಮಾತನೂ ಅವನಿಗೆ ಮನದಟ್ಟು ಮಾಡಿಸಿಬಿಟ್ಟು ಹೋದರೆ, ನಿಮ್ಮಿಂದ ಬಹಳ ಉಪಕಾರ ವಾಗುತ್ತೆ.

ಲಿಂಗ--ಇಲ್ಲಾ ನಂಜು! ಸಾಧ್ಯವಿಲ್ಲ. ಇಂದಲ್ಲ ನಾಳೆ ನಿನಗೆ ಮನಸ್ಸು ಸ್ಥಿಮಿತಕ್ಕೆ ಬಂದು ನೀನು ಶಾಂತವಾಗಿ ವಿಚಾರಮಾಡುವ ಹಾಗೆ ಆದಾಗ, ನಾನು ನಿನ್ನ ಮನೇಲಿ ಇಷ್ಟು ದಿವಸ ಇದ್ದದ್ದರಿಂದ ನಿನಗೆ ತೊಂದರೆ ಆಗಿದೆ ಅನ್ನೋದೇ ಸತ್ಯವಾಗಿ ಕಂಡುಬಂದರೆ, ಆಗ ನಿನಗೆ ನಾನು ಬೇಕಾದ ದಂಡ ಕಟ್ಟಿಕೊಡುತೇನೆ. ನಿನ್ನ ಮನಸ್ಸಿನ ಅಭಿಪ್ರಾಯ ಪ್ರತಿಯಾಗಿರೋ ವಾಗ ನಾನು ಒಂದು ಕ್ಷಣಾ ಇಲ್ಲಿರುವದೂ ಸೂಕ್ತವಲ್ಲ.

ನಂಜು:—ಹಾಗಾದರೆ ಈಗಲೇ ಹೊರಟುಬಿಡುತೀರೇನು?

ಲಿಂಗ:—ಹೌದು ನಂಜೂ!

ನಂಜು; ಹಾಗೂ ನನಗೆ ಹಿಂಸೆ ತಪ್ಪಿದ್ದೇ ಅಲ್ಲ.

ಲಿಂಗ;-- ಅದು ಯಾಕೆ ಹಾಗೆ ಹೇಳುತೀ?

ನಂಜು;— ಊರಿನವರೆಲ್ಲಾ ನಿಮಗೆ ಗುರುತು. ನಿಮ್ಮನ್ನ ಧರ್ಮಾತ್ಮಾ ಅಂತ ಹೊಗಳುತಾರೆ. ನೀವು ಮನೇಲಿ ಕೂತು ಮಾಡೋ ಧರ್ಮ ಅವರಿಗೆ ಗೊತ್ತಿಲ್ಲ. ನೀವು ಇಲ್ಲಿಂದ ಹೊರಬಿದ್ದರೆ ಸಾಕು, ನಾಳೆ ಯಿಂದ ನಾನು ಎಲ್ಲಿ ಹೋಗಲೀ—ಎಲ್ಲಿ ಬರಲೀ "ಅಂಥಾ ಧರ್ಮರಾ ಯನಂಥ ತಂದೇನ ಮನೆ ಬಿಟ್ಟು ಓಡಿಸಿದ ಪಾಪೀ" ಅಂತ ಎಲ್ಲರೂ ಅಂದೇ ಅಂತಾರೆ; ದೂರೇ ದೂರುತ್ತಾರೆ. ಅದನ್ನ ಕೇಳಿ ನಿಮ್ಮ ಮನ ಸ್ಸಿಗೂ ಸ್ವಲ್ಪ ಸಮಾಧಾನವಾಗೇ ಆಗುತ್ತೆ.

ಲಿಂಗ;—ತಂದೆ ಅನ್ನವನು ಅಂಥಾ ಪುತ್ರ ದ್ರೋಹಿಯಾಗಲಾರ ಕಾಣೋ ನಂಜೂ! ನಾನು ಈ ಊರಿನಲ್ಲಿದ್ದರಲ್ಲವೇ ನೀನು ನನ್ನ ಮನೆ ಬಿಟ್ಟು ಕಳಿಸಿದ್ದೀಯಾ ಅನ್ನೋ ವಿಚಾರ ಎಲ್ಲರಿಗೂ ಗೊತ್ತಾಗೋದು?

ನಂಜು;—ಹಾಗಾದರೆ ಗೌರೀ ಮನೆಗೆ ಹೋಗುತೀರ? ಮೊದಲೇ ಅವಳೂ ದೇವರಯ್ಯ ನನ್ನ ವಿಚಾರದಲ್ಲಿ ಈ ಪುಂಡನಿಂದ ರೇಗಿದಾರೆ; ನೀವೂ ಹೋಗಿ ಸ್ವಲ್ಪ ಸೇರಿದರೆ ನನ್ನ ಕೀರ್ತಿ ಮತ್ತೆ ಬೇಕಾದ ಹಾಗೆ ಅಲ್ಲೂ ಬೆಳಗೇ ಬೆಳಗುತ್ತೆ.

ಲಿಂಗ;—ಮಗನ ಮನೇಲೇ ಇಷ್ಟೊಂದು ಅಪಾರ್ಥ ಅಪನಂಬಿಕೆ ಗಳಾಗಿರೋವಾಗ, ಇನ್ನು ಮಗಳ ಮನೆಗೆ ಹೋಗಿ ಹ್ಯಾಗಿರಲಿ!—ನಾನು ಸಿಂಗ್ರೀ ಹಳ್ಳಿಗೆ ಹೋಗಿ ಅಲ್ಲೇ ಇದ್ದು ಬಿಡುತೇನೆ.

ನಂಜು;—ಒಳ್ಳೇ ಜಾಗ—ನಿಮ್ಮ ಉಪದೇಶಕ್ಕೆ ಸರಿಯಾದ ಶಿಷ್ಯ ಮಂಡಳಿ ಕೂಡೋ ಸ್ಥಳ.

ಲಿಂಗ;—ಈ ಮಾತು ಬಿಡು. ನಾನು ಹೋದಮೇಲೆ ನನ್ನನ್ನು ಮರೆತು ಬಿಡು.

ನಂಜು;—ಅಷ್ಟು ಸುಲಭವೇ? ನಾನು ನೀವೆಲ್ಲಿದ್ದರೂ ಸರಿ— ತಮಗೆ ಮಗನಾದ್ದಕ್ಕೆ ತಿಂಗಳು ತಿಂಗಳಿಗೆ ಕಾಣಿಕೆ ಸಲ್ಲಿಸಬೇಕಲ್ಲ—ಇಲ್ಲ ದಿದ್ದರೆ ಊರೆಲ್ಲಾ ನನ್ನ 'ಪಿತೃದ್ರೋಹೀ' ಅಂತ....

ಲಿಂಗ;—(ನಕ್ಕು) ಎಷ್ಟಾದರೂ ನೀನು ನನ್ನ ಕಣ್ಣಮುಂದಿನ ಹುಡುಗ. ನಿನ್ನ ಬಾಯಲ್ಲಿ ಈ ಮಾತುಗಳು ಸಹಜವಾಗಿಯೇ ಬರತಾ ಇವೆ. ನೋಡೂ ನಂಜು! ಈ ಘಟ ಇರೋ ವರೆಗೂ ಮಹಾರಾಜರ ಸರ್ಕಾರದಿಂದ ಕೊತ ಕಡೇಗೆ ತಿಂಗಳಿಗೆ ಮೂವತ್ತೇಳೂವರೆ ರೂಪಾಯಿ ಪೆನ್‌ಷನ್ ಬಂದು ಹೋಗುತ್ತೆ. ಇಷ್ಟು ವರ್ಷಗಳು ಬಂದ ದುಡ್ಡನ್ನೆಲ್ಲಾ ಕೂಡಿಟ್ಟು, ಆ ಹಣವಲ್ಲಿ ಈ ಮನೇನ ಕೊಂಡುಕೊಂಡು ಸುಂದರೂ ಹೆಸರಿಗೆ ಮಾಡಿದ್ದೇನೆ. ಇದಾಗಿ ನಾಲ್ಕು ತಿಂಗಳಾಯಿತು- ಈ ವಿಚಾರ ನಿನಗೆ ತಿಳಿಸದೆ, ನನ್ನ ಹಳೆಯ ಸಾಲ ಮೂರು ಸಾವಿರ ರೂಪಾಯಿ ಇದೇಂತಲೂ, ಈ ಮನೆ ಇನ್ನೂ ಆ ವೆಂಕಟಸಾಮಯ್ಯನಿಗೇ ಸೇರಿದ್ದೂಂತಲೂ ಹೇಳಿ, ಬಾಡಿಗೇಗೆಂತ ತಗೊಂಡ ದುಡ್ಡನ್ನ ಸುಂದರೂಖರ್ಚಿಗೆ ಕೊಟ್ಟುಬಿಡುತಾ ಇದ್ದೆ.

ನಂಜು;—(ಆಶ್ಚರ್ಯದಿಂದ ನಿಸ್ತೇಜನಾಗಿ ಬೊಂಬೆಯಂತೆ ಬಾಯಿ ತೆರೆದು) ಅಪ್ಪಾ!

ಲಿಂಗ:—ಹೌದು ನಂಜೂ! ಈ ಮನೆ ನಿನ್ನದು. ಮುಂದೆ ನನ್ನ ಪೆನ್‌ಷನ್‌ನಲ್ಲಿ ತಿಂಗಳಿಗೆ ಹದಿನೈದು ರೂಪಾಯಿನಂತೆ ಸಾವಿತ್ರೀಗೆ ಕಳಿಸೋದೂಂತ ತೀರ್ಮಾನ ಮಾಡಿದ್ದೇನೆ—ಅವಳ ಪೂಜೆ ಪುನಸ್ಕಾರದ ಖರ್ಚೂಂತ. ಇನ್ನು ನೀನು ನಿನ್ನ ಸಂಸಾರ ನೋಡಿಕೊಂಡು ಸುಖವಾಗಿರು. ದೇವರು ನಿನಗೆ ಒಳ್ಳೆಯದು ಮಾಡಲಿ.

ನಂಜು:—(ಹಿಂದಿನ ಧ್ವನಿಯಲ್ಲೇ) ಅಪ್ಪಾ !!

ಲಿಂಗ:—ಹೋಗಿ ಬರುತೇನೆ ನಂಜೂ! ನನ್ನಿಂದ ನಿನಗೆ ಹೆಚ್ಚಿನ ಸೇವೆ ಬೇಕಾದಾಗ ಒಂದು ಸಾರಿ ಜ್ಞಾಪಿಸಿಕೋ—ಸೂರಪ್ಪನ ಕಿವೀಲಿ ಒಂದು ಪಿಸುಮಾತು ಹಾಕು. ನಾನು ನಿನ್ನ ಪಾದದಲ್ಲಿ ಸಿದ್ಧವಾಗಿರುತೇನೆ. ದೇವರು ನಿನಗೆ ಸದ್ಬುದ್ಧಿ ಕೊಡಲಿ.

[ಲಿಂಗಪ್ಪಯ್ಯನು ಕಣ್ಣೊರಸಿಕೊಂಡು ಥಟಾರನೆ ಹೊರಬಾಗಿಲಿನಿಂದ ಹೊರಟು ಹೋಗುವನು. ಬಾಗಿಲು ಮುಚ್ಚಿಕೊಳ್ಳುವುದು ನಂಜುಂಡಯ್ಯನು ಹುಚ್ಚನಂತೆ ‘ಅಪ್ಪಾ ಅಪ್ಪಾ!!’ ಎಂದು ನಾಲ್ಕು ಹೆಜ್ಜೆ ಮುಂದೆ ಹೋಗುವನು. ದಿಕ್ಕು ತೋರದೆ ‘ಸಾವಿತ್ರೀ!’ ಎಂದು ಚೀರುವನು. ಸಾವಿತ್ರಮ್ಮನು ಒಳಗಿನಿಂದ ಓಡಿ ಬರುವಳು ನಂಜುಂಡಯ್ಯನು ಬಾಗಿಲು ಕಡೆ ಬೆರಳು ತೋರಿಸುತ್ತಾ ‘ಅಪ್ಪಾ! ಹೊರಟು ಹೋದರು!’ ಎಂದು ಹೇಳಿ, ಅಲ್ಲಿಯೇ ಕುಕ್ಕರಿಸುವನು; ಸಾವಿತ್ರಮ್ಮನು ಕಂಬನಿದುಂಬಿ ಗಾಳಿ ಹಾಕುತ್ತಿರುವಳು.]

ಪ್ರವೇಶ ನಾಲ್ಕು

[ದೇವಸ್ಥಾನದ ಮಗ್ಗುಲಿನ ಕೈದೋಟ. ಸಂಜೆ ಆರು ಗಂಟೆಯ ಸಮಯ. ಸೂರಪ್ಪ, ಲಿಂಗಪ್ಪಯ್ಯ ಮಾತನಾಡುತ್ತಿರುವರು]

ಸೂರ:— ನೀವು ಹಳ್ಳಿಯಿಂದ ಬೆಳಗ್ಗೇನೇ ಏಕೆ ಹೊರಟು ಬರಲಿಲ್ಲ.

ಲಿಂಗ:—ಹಗಲು ಹೊತ್ತು ಬರೋದಕ್ಕೆ ತೊಂದರೆ ಅಂದರೆ—ಈ ಊರಿನಲ್ಲಿ ಯಾರಿಗೂ ಕಾಣಿಸಿಕೊಳ್ಳೋದಿಲ್ಲಾಂತ ನಂಜೂಗೆ ವಾಗ್ದಾನ ಮಾಡಿದ್ದೇನೆ—ಸೂರಪ್ಪಾ!

ಸೂರ:—ಅದು ಯಾಕೆ?

ಲಿಂಗ:—ಕಂಡವರು ‘ಈಗೆಲ್ಲಿದ್ದೀರೀ’ ಅಂತ ಕೇಳೀಕೇಳುತಾರೆ. ಮುಂದಕ್ಕೆ ನಂಜೂ ಬಳಿ ಇಲ್ಲಾಂತ ಕೇಳಿ ತಿಳಿದರೆ ಅವನನ್ನ ಪರಿಹಾಸ್ಯ ಮಾಡಬಹುದು. ಸಾಧಾರಣವಾಗಿ ಪ್ರಪಂಚದಲ್ಲಿ ಹಾಗೇನೇ ಮುದುಕರಾದ ತಾಯಿತಂದೆಗಳು ಮಕ್ಕಳ ಜೊತೆ ಬಿಟ್ಟು ಬಿಟ್ಟು. ಯಾವ ಕಾರಣ

ದಿಂದ ಬೇರೆ ಇದ್ದರೂವೇ, ಮಕ್ಕಳು ಅಪ್ಪಾಅಮ್ಮನ್ನ ಓಡಿಸಿಬಿಟ್ಟಿದ್ದಾರೆ ಅಂತಲೇ ಪ್ರಪಂಚ ಅನ್ನೋದು.

ಸೂರ:—ಸಿಂಗ್ರಿ, ಹಳ್ಳೀಲಿ ಏನು ಮಾಡಿಕೊಂಡಿದಾನೆ?

ಲಿಂಗ:—ನಾನು ಹೋಗಿ ಅವನನ್ನ ಅವನ ಚಿಕ್ಕಪ್ಪನಿಂದ ಬರ ಮಾಡಿಕೊಂಡು, ಒಂದು ಚಿಕ್ಕ 'ನೈಟ್ ಸ್ಕೂಲ್' ಷುರುಮಾಡಿಸಿದ್ದೇನೆ. ಅಲ್ಲಿಗೆ ನಾನೇ ಹೆಡ್ ಮೇಷ್ಟ್ರು—ಸಿಂಗ್ರೀನೇ........

ಸೂರ:—ದಡ್ಡ ಮೇಷ್ಟ್ರು—(ಇಬ್ಬರು ನಗುವರು.)

ಲಿಂಗ:—ಹಾಗೇನಿಲ್ಲ. ಅವನು ಬುದ್ಧಿವಂತ. ತಾನು ಕಲಿತದ್ದನ್ನ ಹಳ್ಳಿಯವರಿಗೆಲ್ಲಾ ತೋರಿಸಬೇಕು, ಕಲಿಸಬೇಕೂ ಅನ್ನೋ ಆಶೆ ಅವನಿಗಿದೆ.

ಸೂರ:—ಅಂತೂ ನೀವು ವಿಚಿತ್ರ ಮನುಷ್ಯರು ಸ್ವಾಮೀ. ಪೆನ್ಷನ್ ಆದವರು ಪಟ್ಟಣ ವಾಸಕ್ಕೆ ಬಂದು, ಈ ಹಾಳು ಕಾಷ್ಟಾವ್ಯಸನವನ್ನೆಲ್ಲಾ ಮರೆತು—ಬಂದ ದುಡ್ಡನ್ನ ಖರ್ಚು ಮಾಡಿಕೊಂಡು, ಕ್ಲಬ್ಬೋಗಿಬ್ಬೋ ಸೇರಿ, ಸಂತೋಷವಾಗಿ ಕಾಲ ಕಳೀಬೇಕೂಂತ ಒದ್ದಾಡುತಿದ್ದರೇ—ನೀವು ಹೋಗಿ ಈ ವಯಸ್ಸಿನಲ್ಲಿ ಆ ಕೊಳಕು ಹಳ್ಳೀಲಿ ಸೇರಿಕೊಂಡು, ಆ ಒರಟು ಜನಗಳ ಮಧ್ಯೆ ಓಡಾಡುತಾ, ಸರ್ಕಾರದವರು ಕೈಲಾಗೋದಿಲ್ಲಾಂತ ಬಿಟ್ಟಿರೋ ಸ್ಕೂಲನ ಮತ್ತೆ ನೈಟ್‌ಸ್ಕೂಲೂಂತ ಷುರುಮಾಡಿ, ಸಂಬಳಾ ಇಲ್ಲದೇ ಸಾರಿಗೇ ಇಲ್ಲದೇ—ತಲೇ ಮೇಲೆ ಹೊತ್ತುಕೊಂಡು—ಕಾರ್ಪಣ್ಯಾ ಪಡೋದನ್ನ ನೋಡಿದರೆ ನಿಮ್ಮ ನಕ್ಷತ್ರ ಯಾವುದೂಂತ ಆಶ್ಚರ್ಯವಾಗುತ್ತೆ.

ಲಿಂಗ:—ನೋಡೂ ಸೂರಪ್ಪ, ಮನುಷ್ಯಾಂತ ಹುಟ್ಟಿದ ಮೇಲೆ ಅವನ ಮನಸ್ಸು ವೈ ಏನಾದರೂ ಕೆಲಸ ಮಾಡುತಾನೇ ಇರುತ್ತೆ. ಸತ್ತ ಮೇಲೇನೇ ಈ ಪ್ರವೃತ್ತಿ ನಿಲ್ಲೋದು. ಇಪ್ಪತ್ತೈದು ವರುಷ ದುಡಿದ ಮೇಲೆ, ಅವನಿಗೆ ವಿಶ್ರಾಂತಿ ಕೊಡಬೇಕೂಂತ ದೊಡ್ಡ ಮನಸ್ಸು ಮಾಡಿ, ಸರ್ಕಾರದವರು ರಿಟೈರ್ ಮಾಡಿಸುತಾರೆ. ಅಂದಾಕ್ಷಣಕ್ಕೇ, ನಿತ್ಯಜೀವನದಿಂದಾಲೇ ರಿಟೈರ್ ಅಂತಾಲೇ? ಮುಂದೆ ಜೀವಂತವಾಗಿರೋ ವರೆಗೂ

ಊಟಕ್ಕೆ ಯೋಚನೆ ಇಲ್ಲದೇ ಇರಲಿ ಅಂತ ಪೆನ್‌ಷನ್ ಕೊಡುತಾರೆ. ಹೀಗೆ ನಿರ್ವೃತ್ತಿಯಾಗಿ ನಿರಾತಂಕವಾಗಿ ಜೀವನ ಜರುಗೋವಾಗ ನಮ್ಮ ಹಣ್ಣಾದ ಅನುಭವಾನ -ಜ್ಞಾನಾನ- ನಮ್ಮಷ್ಟು ಅಕ್ಷರಸ್ಥರಲ್ಲದವರ, ತಿಳಿವಳಿಕಸ್ಥರಲ್ಲದವರ ಮಧ್ಯೆ ಹರಡುತಾ ಬಂದರೆ, ನಮ್ಮಿಂದ—ನಮ್ಮ ನಿರ್ವೃತ್ತಿಯಿಂದ ಮನೆಯ ಒಳಗೇ ಹೊರಗೇ ಎಷ್ಟು ತೊಂದರೆಗಳಾಗ ಬಹುದೋ ಅಷ್ಟಕ್ಕೂ ಪ್ರತಿಯಾಗಿ,- -ಸೇವೆಯಾಗುತ್ತೇ; ಜ್ಞಾನಪ್ರಸಾರ ವಾಗುತ್ತೇ; ನಮ್ಮ ಜನ್ಮ ಸಾರ್ಥಕವಾಗುತ್ತೇ. ಇದಕ್ಕೆ ಸರಿಯಾದ ಕ್ಷೇತ್ರ ಅಂದರೆ ಹಳ್ಳೀ, ಹಳ್ಳೀಜನ....ಇನ್ನು ಕೊಳಕಿನ ವಿಚಾರ....ನೋಡು ಸೂರಪ್ಪಾ! ನಾನು ನೀನೂ ಪರಂಗಿಯವರ ಮಧ್ಯೆ ಹೋಗಿದ್ದರೆ ಅಮಾ ವಾಸ್ಯೆ, ಪೌರ್ಣಮಿ, ಅಪರಾಣ್ಯ ಕೂಡ ನೋಡದೇ ಕ್ಷೌರ ಮಾಡಿಸಿ ಕೊಳ್ಳುತೇವೋ ಏನೋ! ಎಂಟು ದಿವಸಕ್ಕೊಂದು ಸಲ ಟಬ್-ಬಾತ್ ಅಂತ ಎಂಜಲು ನೀರಿನಲ್ಲೇ ಮುಳುಗಿ ಹಾಕಿ ಬರುತೇವೋ ಏನೋ! ಇದೆಲ್ಲಾ ಸಹವಾಸದೋಷ. ಹಾಗೆಯೇ ನಾವು ಹೋಗಿ,ಹಳ್ಳಿಯವರ ಮಧ್ಯೆ ನಿಂತು, ಪ್ರೀತಿಯಿಂದ ಹೇಳುತಾ ಬಂದರೆ, ನಮ್ಮ ಮನಸ್ಸು ನಿಷ್ಕಳಂಕ ವಾಗಿ, ಉದ್ದೇಶ ಶುದ್ಧವಾಗಿದ್ದರೆ ಹಳ್ಳಿಯೂ ಪರಿಶುದ್ಧವಾಗುತಾ ಬರುತ್ತೆ.

ಸೂರ:—ನಿಮ್ಮ ಮಾತುಗಳು ಕೇಳುತಾ ಇದ್ದರೆ-- ನಿಜ ನಿಜ ಅನ್ನಿ ಸುತ್ತೆ. ಆದರೆ, ಮನೆಗೆ ಹೋಗುತಾಲೇ--'ಇದು ಎಂದಿಗೆ ಸಾಧ್ಯವಾಗೋ ಕೆಲಸ?' ಅಂತ ಅನ್ನಿಸುತ್ತೆ.

ಲಿಂಗ:—ಅದು ಹೋಗಲೀ. ಸಾವಿತ್ರಮ್ಮ ಎಷ್ಟು ಹೊತ್ತಿಗೆ ಬರು ತೇನೆ ಅಂದಳು ದೇವಸ್ಥಾನಕ್ಕೆ? ಇನ್ನೂ ಬಹಳ ಹೊತ್ತಾಗುತ್ತೇನು? ಆಗಲೇ ಏಳು ಘಂಟೆ ಆದ ಹಾಗಿದೆ!

ಸೂರ:—ಇಷ್ಟು ಹೊತ್ತಿಗೆ ಬಂದಿರಬೇಕಾಗಿತ್ತು. ಮನೇನಲ್ಲಿ ಏನು ಅವಿಚಾರವಾಗಿದೆಯೋ ಏನೋ?

ಲಿಂಗ:—(ಬಲಗಡೆಯೇ ತಿರುಗಿ ನೋಡುತ್ತಿದ್ದು) ಅಗೋ ನೋಡಪ್ಪಾ! ಬರುತಾ ಇದಾಳೆ.

ಸೂರ:—ಮುಖ ಬಹಳ ಬಾಡಿದ ಹಾಗಿದೆಯಲ್ಲ!

ಲಿಂಗ: ಯಾಕೆ ಹೀಗೆ ಕಣ್ಣು ಒರಿಸಿಕೊಳ್ಳುತಾ ಬರುತಾ ಇದಾಳೆ!

ಸೂರ: ಏನೋ....ಆಕೆ ಜನ್ಮದಲ್ಲಿ ಇದುವರೆವಿಗೂ ಗಂಡನ ಕೈಲಿ ಹೊಡಿಸಿಕೊಂಡು, ಬೈಸಿಕೊಂಡಿರೋದೇ ಆಯಿತು.

ಲಿಂಗ:—ಅಷ್ಟಾದರೂ ಅವಳಿಗೆ ಸಂಸಾರದಲ್ಲಿರೋ ಶಾಂತಿ ಕಂಡು ನನಗೆ ಬಹಳ ಗೌರವ ಅವಳ ವಿಷಯದಲ್ಲಿ....ಸಾವಿರ ವರುಷ ಆಯುಸ್ಸವಮ್ಮಾ ಸಾವಿತ್ರೀ.....

(ಸಾವಿತ್ರಿಯು ಪ್ರವೇಶಿಸುವಳು. ಬಂದು ಲಿಂಗಪ್ಪಯ್ಯನ ಪಾದಗಳಿಗೆ ನಮಸ್ಕರಿಸಿ ಕಣ್ಣಿಗೆ ಒತ್ತಿಕೊಳ್ಳುವಳು)

ಸೂರ:--ನನ್ನಮ್ಮಾ! ದೀರ್ಘಸುಮಂಗಲಿಯಾಗಿ ನೂರುವರುಷ ಸುಖವಾಗಿ ಬಾಳವಮ್ಮಾ. ಯಾಕೆ ತಾಯಿ ಬಹಳ ಬಳಲಿರೋ ಹಾಗಿದೆ?

ಸಾವಿ:—ನೀವೀವತ್ತು ಹಳ್ಳಿಯಿಂದ ಬರುತೇನೇಂತ ಸೂರಪ್ಪನ ಕೈಲಿ ಹೇಳಿಕಳಿಸದೆ ಹೋಗಿದ್ದಿದ್ದರೆ, ನಾನೇ ನಿಮ್ಮನ್ನ ಹುಡಿಕಿಕೊಂಡು ಬರ ಬೇಕಾಗುತಿತ್ತು.

ಲಿಂಗ:—
ಸೂರ:— } ಅದು ಯಾಕಮ್ಮಾ

ಸಾವಿ:--ಈ ದಿನ ಬೆಳಗಿನಿಂದ ತಮಗೆ ತಾವೇ ಮಾನಾಡಿಕೊಳ್ಳುತಾರೆ.

ಲಿಂಗ:--ಯಾರು? ನಂಜುನೇ?

ಸಾವಿ:— ಹೂಂ! (ತಲೆಯಾಡಿಸುವಳು)

ಸೂರ:--ನಿನ್ನೆ ನಾನು ಬಂದಾಗ ಹುಷಾರಾಗಿದ್ದರಲ್ಲ!

ಸಾವಿ:—ಎದ್ದು ಬಾಗಿಲ ಬಳಿಗೆ ಹೋಗೋದು—"ಅಪ್ಪ"!—ಎನ್ನುವುದು. ಹಲ್ಲು ಕಡಿದು, ಬಾಗಿಲು ಒದೆದು, ಹಿಂದಿರುಗಿ ಬರುವುದು, ನನ್ನ ಸಂಗಡ ಒಂದು ಮಾತು ಕೂಡ ಆಡುವುದಿಲ್ಲ. ಕಾಫಿ, ತಿಂಡಿ ಏನು ತಗೊಂಡು ಹೋಗಿ ಇಟ್ಟರೂ! ಅದನ್ನ ತಳ್ಳಿ "ಸುಂದರೂಗೆ ಕೊಡು

—ಸಿಂಗ್ರೀಗೆ ಕೊಡು—ನನ್ನ ಮುಂದೆ ಯಾಕೆ ತಂದು ಕುಕ್ಕುತೀ? ” ಅಂತ ರೇಗಿ ಹೊಡೆದು, ಕೊನೆಗೆ ಕಿರಿಚಿಕೊಂಡು ಹೋಗಿ ಮಲಗಿಬಿಡುತಾರೆ.

ಲಿಂಗ:—(ನೊಂದು) ನಂಜು, ಬಹಳ ಬೇಸತ್ತಿದಾನೆ.

ಸಾವಿ:—ಮಾವಯ್ಯಾ! ನೀವು ಅಲ್ಲಿಗೆ ಬರದಿದ್ದರೆ ನಾನು ಆ ಮನೇಲಿ ಇರೋದಕ್ಕೆ ಸಾಧ್ಯವಿಲ್ಲ. ಒಂದೊಂದು ಕ್ಷಣ ಕಳೆಯೋದು ಒಂದೊಂದು ಯುಗವಾಗಿದೆ.

ಸೂರ:—ಸಾವಿತ್ರಮ್ಮ ಹೇಳೋದು ನಿಜ ಲಿಂಗಪ್ಪಯ್ಯನವರೇ.

ಲಿಂಗ:—ನಾನಲ್ಲಿಗೆ ಹೋಗುವುದರಿಂದ ಅವನ ಸಿಟ್ಟೇನೂ ಕಡಿಮೆ ಆಗುವುದಿಲ್ಲ. ಅದೂ ಈ ಸ್ಥಿತೀಲಿ ಅವನು ಇನ್ನೂ ರೇಗಬಹುದು.

ಸಾವಿ:—ಏನಾದರೂ ಆಗಲಿ. ನೀವು ಬರಬೇಕು ಮಾವಯ್ಯಾ.

ಲಿಂಗ:—ಹ್ಯಾಗೆ ಬರಲಿ ಸಾವಿತ್ರೀ! ನಾನವನಿಗೆ ಹೇಳಿರೋ ಹಾಗೆ ಸುಂದರೂನ ಜೊತೇಲಿ ಕರಕೊಂಡು ಹೋಗಿ, ಸುಂದರೂ ಅವನ ಕಾಲಿಗೆ ಬೀಳೋ ಹಾಗೆ ಮಾಡಿದರೇನೇ ಅವನ ಮನಸ್ಸಿಗೆ ಸಮಾಧಾನ ವಾಗೋದು.

ಸಾವಿ:—ಸೂರಪ್ಪ, ಸುಂದರೂಸಮಾಚಾರ ಏನಾದರೂ ಗೊತ್ತಾಯಿತೇ?

ಸೂರ:—ಗೊತ್ತಾಯಿತಮ್ಮಾ.

ಸಾವಿ:—(ಕಾತರಳಾಗಿ) ಎಲ್ಲಿದಾನಂತೆ. ಹೇಗಿದಾನಂತೆ?

ಲಿಂಗ:—ಶಿವಮೊಗ್ಗಿನಲ್ಲಿ ಇದಾನಂತೆ. ಅವನ ಮೇಷ್ಟ್ರು ಅವನಿಗೆ ನಾಟಕ ಬರೆಯೋದನ್ನ ಹೇಳಿಕೊಟ್ಟ ಆ ಪಂಡಿತರು, ಅಲ್ಲೀ ಹೈಸ್ಕೂಲಿಗೆ ವರ್ಗವಾಗಿ ಅಲ್ಲೇ ಇದಾರಂತೆ. ಇವನು ಅಲ್ಲಿಗೆ ಹೋಗಿದಾನಂತೆ. ಅವರು ನನಗೆ ಗುರುತು. ಚಕ್ರವರ್ತೀ ಅಂತ ಆತನ ಹೆಸರು. ಶ್ರೀ ವೈಷ್ಣವ, ಒಳ್ಳೆಯ ನಿಷ್ಠ ಮನುಷ್ಯ. ಆತನ ವಿಚಾರದಲ್ಲಿ ಸುಂದರೂಗೆ ಬಹಳ ಗೌರವ. ಸೂರಪ್ಪ ಮಧ್ಯಾನ್ಹ ಈ ವಿಚಾರ ಹೇಳುತಲೇ, ಇಲ್ಲಿನ ಸಂಗತಿ ಎಲ್ಲಾ ತಿಳಿಸಿ, ಸುಂದರೂಗೆ ಈ ವಿಚಾರದಲ್ಲಿ ಸ್ವಲ್ಪ ಬುದ್ಧಿ ಹೇಳುವ ಹಾಗೆ ಆ ಚಕ್ರವರ್ತಿಗೂ ಒಂದು ಕಾಗದ ಬರೆದೆ.

ಸಾವಿ:— (ಉತ್ಸುಕತೆಯಿಂದ) ಹಾಗಾದರೆ ಸುಂದರೂ ಯಾವಾಗ ಬರುತಾನೇ?

ಲಿಂಗ:—ಈಗ ತಾನೇ ಸೂರಪ್ಪ ಕಾಗದಗಳನ್ನ ಪೋಸ್ಟ್‌ಮಾಡಿ ಬಂದಿದಾನೆ. ಎಷ್ಟೇ ತಡ ಅಂದರೂ ಇನ್ನೊ ಐದಾರು ದಿವಸಗಳಲ್ಲೇ ಬಂದು ಬಿಡಬೇಕು.

ಸಾವಿ:—ನನ್ನ ಗತಿ ಏನು ಮಾವಯ್ಯಾ?

ಲಿಂಗ:—ಯಾಕೆ ತಾಯೀ ?

ಸಾವಿ;—ಇನ್ನು ಐದಾರು ದಿವಸಗಳನ್ನ ಆ ಮನೆಯಲ್ಲಿ ಹೇಗೆ ಕಳೆಯಲಿ ಮಾವಯ್ಯಾ?

ಲಿಂಗ:— ಏನು ಮಾಡುವುದು ತಾಯಿ; ಎಷ್ಟು ವರುಷಗಳನ್ನು ಕಳೆದಿದ್ದಿ; ಇನ್ನು ಐದಾರು ದಿವಸಗಳು ತಡೆದುಕೋ. ಸುಂದರು ಬಂದ ಕೂಡಲೇ ಕರಕೊಂಡು ಬಂದು ಬಿಡುತೇನೆ.

ಸಾವಿ: ನಿಮ್ಮ ದಮ್ಮಯ್ಯ ಮಾವಯ್ಯಾ! ನೀವು ಮನೆಗೆ ಬರದಿದ್ದರೆ ನನಗೆ ಒಂದು ಘಳಿಗೆ ಕಳೆಯುವುದೇ ಕಷ್ಟವಾಗುತ್ತೆ. ಇತ್ತಕಡೆ ಔಷಧಿ ತರಲೇ, ಅಡಿಗೆ ಮಾಡುತಾ ಕೂಡಲೇ, ಅವರನ್ನು ಸುಧಾರಿಸಲೇ, ತರಕಾರಿ ಕೊಂಡುಕೊಂಡು ಬರಲೇ, ಬಟ್ಟೆ ಒಗೆದು ಹಾಕಲೇ, ಯಾವದೂಂತ ನೋಡಿಕೊಳ್ಳಲಿ ಮಾವಯ್ಯಾ! (ಕಂಬನಿದುಂಬಿ ಕಣ್ಣೊರಸಿಕೊಳ್ಳುವಳು)

ಸೂರ:—ಲಿಂಗಪ್ಪಯ್ಯನವರೇ! ನೀವು ಹೇಗಾದರೂ ಮಾಡಿ ಹೋಗಲೇಬೇಕು. ಪಾಪ! ಸಾವಿತ್ರಮ್ಮನ ಕಷ್ಟ ಸಾಧಾರಣ ಹೆಂಗಸು ಅನುಭವಿಸುವುದಕ್ಕೆ ಅಸಾಧ್ಯವಾದುದು.

ಲಿಂಗ:— ಹೌದು! ಹೋಗಲೇಬೇಕು. ಆದರೆ ಹ್ಯಾಗೆ ಹೋಗುವುದು! (ಯೋಚಿಸುವನು)

ಸೂರ:—ಹೋಗಲೇಬೇಕಾಗಿರುವಾಗ, ಹೋಗುವುದು ಹೇಗೆ ಅಂತ ಯೋಚಿಸಿ ಏನು ಪ್ರಯೋಜನ!

ಸಾವಿ:— ನಿಮ್ಮನ್ನ ಬಿಟ್ಟು ನಾನು ಈವತ್ತು ಮನೆಗೆ ಹೋಗೊಲ್ಲ.

ಲಿಂಗ;— (ಇಷ್ಟಕ್ಕಿದ್ದಂತೆಯೇ ಮುಖವರಳುವದು ಸಂತೋಷದಿಂದ) ಸೂರಪ್ಪಾ ! ಈ ಪ್ಲ್ಯಾನ್ ನೋಡು ಹೇಗಿದೆ?

ಸೂರ;—ಅದೇನು ಪ್ಲಾನ್ ಲಿಂಗಪ್ಪಯ್ಯನವರೇ?

ಲಿಂಗ;- ಈಗ ನಂಜು ಮನೇಲಿ ಓಡಾಡಿಕೊಂಡು ಅವರ ಸೇವೆ ಶುಶ್ರೂಷೆಗೆ ತಿಳಿದಂಥಾ ಒಬ್ಬ ಆಳು—ಸಾಧು ಮನುಷ್ಯ ಬೇಕು.

ಸೂರ; -ಹೌದು ಅಂಥ ಮನುಷ್ಯನನ್ನ ಎಲ್ಲಿಂದ ತರೋದು?

ಲಿಂಗ:—ಮನುಷ್ಯನನ್ನ ನಾನು ಕೊಡುತೇನೆ.

ಸೂರ:—ನೀವು ಕೊಟ್ಟರೇ ?

ಲಿಂಗ:—ನೀನಾ ಮನುಷ್ಯನನ್ನ ಕರೆದುಕೊಂಡು ಹೋಗಿ "ಇವನು ಹಿಂದೆ ನನ್ನ ಕೈಕೆಳಗೆ ಹುಲಿಯೂರುದುರ್ಗದಲ್ಲಿ ಕಾನ್ಸ್ಟೇಬಲ್ ಆಗಿದ್ದ, ಬಹಳ ಒಳ್ಳೆಯ ಮನುಷ್ಯ—ನಂಬಿಗಸ್ಥ—ದೊಡ್ಡ ಶಿಕಾರೀಲಿ ಆಕಸ್ಮಾತ್ತಾಗಿ ಕಾಲಿಗೆ ಪೆಟ್ಟಾದ್ದರಿಂದ ರಿಟೈರು ಮಾಡಿಸಿಬಿಟ್ಟರು. ಇವನನ್ನ ನಿಮ್ಮ ಮನೇಲಿಟ್ಟುಕೊಳ್ಳಿ. ದೊಡ್ಡ ಸಂಸಾರವಂದಿಗನಾದರೂ ಸರಕಾರದಿಂದ ಪೆನ್ಷನ್ನೂ ಬರುತ್ತಿರೋದರಿಂದ ನೀವು ಕೊಡೋ ಸಂಬಳಕ್ಕೆ ಕೆಲಸ ಮಾಡುತ್ತಾನೆ." ಅಂತ ಹೇಳಿ ಸೇರಿಸಿಬಿಟ್ಟು ಬಾ.

ಸೂರ:—ಅಂದರಾಮನುಷ್ಯ ಕುಂಟೇ?

ಲಿಂಗ:—ಸ್ವಲ್ಪ ಕುಂಟು; ಬಲಗಾಲನ್ನ ಎಳೆದು ಹಾಕುತ್ತಾನೆ.

ಸಾವಿ:—ಅವನು ಬಂದರೆ ನೀವು ಬಂದ ಹಾಗೆ ಹಾಗುತೆ ಮಾವಯ್ಯಾ?

ಲಿಂಗ:—ಆಗತ್ತಮ್ಮ ಸಾವಿತ್ರೀ. ನೀನೇನೂ ಚಿಂತೆ ಮಾಡಬೇಡ.

ಸಾವಿ:—ಅದು ಹೇಗೆ ಮಾವಯ್ಯಾ ?

ಸೂರ:— ಮಾತನಾಡತಾ ಮಾತನಾಡತಾ ಸಮಸ್ಯೇನೇ ತಂದ ಒಡ್ಡು ತೀರಲ್ಲ ಲಿಂಗಪ್ಪಯ್ಯನವರೇ! ನೀವು ಕಳಿಸೋ ಆ ಆಳು ಮನೇಲಿ ನೀವಿದ್ದಷ್ಟು ಸಹಾಯಕನಾಗಿರುತ್ತಾನೆಯೇ?

- **ಲಿಂಗ**:—ಅಡ್ಡಿಯಿಲ್ಲದೆ

ಸೂರ:—ಅಂಥ ಆಳು ಯಾರು ಸ್ವಾಮೀ ?

ಲಿಂಗ:—ನಿನ್ನೆದುರಿಗೇ ನಿಂತಿದಾನೆ ನೋಡು.

ಸೂರ:—(ಸುತ್ತಲೂ ನೋಡಿ ಆಶ್ಚರ್ಯಚಕಿತನಾಗಿ) ಯಾರು ಲಿಂಗಪ್ಪಯ್ಯನವರೇ?

ಲಿಂಗ:—ಸಾವಿತ್ರಮ್ಮನ ಮಾವಯ್ಯ.

ಸಾವಿ:—ಮಾವಯ್ಯಾ !!

ಸೂರ:—ಸ್ವಾಮೀ !!

ಲಿಂಗ:—ಹೌದು ಸೂರಪ್ಪ ನಾನು ಆಳಿನ ವೇಷ ಹಾಕುತ್ತೇನೆ.

ಸೂರ:—ಅಂತೂ ಈ ವಯಸ್ಸಿನಲ್ಲೂವೇ ನಿಮ್ಮ ವಂಶಕ್ಕೆ ಬಂದ ನಾಟಕದ ಗೀಳು ಹೋಗಿಲ್ಲವಲ್ಲ!

ಸಾವಿ:—ನೀವೇ ಆಳಿನ ವೇಷ ಹಾಕುತ್ತೀರಾ ಮಾವಯ್ಯಾ? ಅದು ಅವರಿಗೆ ಗೊತ್ತಾಗುವದಿಲ್ಲವೇ?

ಲಿಂಗ:—ಗೊತ್ತಾಗದ ಹಾಗೆ, ಸ್ವಲ್ಪವೂ ಐಬು ತಿಳಿಯದ ಹಾಗೆ ಹಾಕುತ್ತೇನೆ.

ಸೂರ:—ಇಷ್ಟೊಂದು ಅವಸ್ಥೆ ಏಕೆ ಸ್ವಾಮಿ ?

ಲಿಂಗ:—ನಂಜೂನ ಮನಸ್ಸಿಗೆ ಸಮಾಧಾನವಿರಲಿ ಅಂತ. ನಾನೂ ಅವನ ಹತ್ತಿರ ಇದ್ದ ಹಾಗಾಯ್ತು; ಸಾವಿತ್ರಮ್ಮನಿಗೂ ಧೈರ್ಯ ಆಯ್ತು; ನಂಜೂನೂ ನಿಃಸಂಕೋಚವಾಗಿ ನನ್ನಿಂದ ಬೇಕಾದ ಸೇವೆ ಶುಶ್ರೂಷೆ ಮಾಡಿಸಿಕೊಳ್ಳಬಹುದು.

ಸೂರ:—ಒಳ್ಳೆಯ ಪುಣ್ಯಾತ್ಮರು ಸ್ವಾಮಿ ನೀವು. ನಿಮ್ಮ ತಲೆ ಅದುಹೇಗೆ ಅಷ್ಟು ತಂಪಾಗಿದೆಯೋ! ನಿಮ್ಮ ಮನಸ್ಸು ಹೇಗೆ ಶಾಂತವಾಗಿದೆಯೋ! ಮನೆ ಬಿಟ್ಟು ಹೋಗು ಅಂದ ಮಗನ ಬಳಿ ಆಳಾಗಿ ಸೇವೆ ಮಾಡುತೇನೇ ಅಂತ ಹೇಳುತೀರಲ್ಲ!

ಲಿಂಗ: ಮಕ್ಕಳೇ ದೇವರು ಸೂರಪ್ಪ. ನಮ್ಮ ಸುತ್ತಮುತ್ತ, ನಮ್ಮ ಜೊತೇಲಿ ಬೆಳೆದು ಬಂದವರ ಸೇವೇನೇ ದೇವರ ಸೇವೆ. ಇದು ಮನಧ

ಟ್ಟಾದ ಹೊರತು—ನಮ್ಮ ಹುಡುಕಾಟ ಮುಗಿಯುವುದಿಲ್ಲ. (ಇತ್ತ ತಿರುಗಿ) ಅಮ್ಮಾ ಸಾವಿತ್ರೀ! ನೀನು ದೇವಸ್ಥಾನಕ್ಕೆ ನಡಿ. ನಾವಿಬ್ಬರೂ ಒಂಬತ್ತು ಘಂಟೆ ಹೊತ್ತಿಗೆ ಮನೆಯ ಹತ್ತಿರಕ್ಕೆ ಬರುತ್ತೇವೆ. ನೀನೇನೂ ಯೋಚನೆ ಮಾಡಬೇಡ.

ಸಾವಿ:—ದೇವಸ್ಥಾನಕ್ಕೆ ಹೋಗಿ ಮನೆಗೆ ಹೋಲೇ ಮಾವಯ್ಯಾ? ನೀವು ಖಂಡಿತ ಬರತೀರಿ ತಾನೇ?

ಲಿಂಗ:—ಖಂಡಿತ ಬರುತೇವೆ; ನಡಿ ನನ್ನಮ್ಮಾ.

(ಎಡಗಡೆಯಿಂದ ಸಾವಿತ್ರಮ್ಮ ಸಂತೋಷಭರಿತಳಾಗಿ ನಿಷ್ಕ್ರಮಿಸುವಳು.)

ಸೂರ:—ಚಿನ್ನದಂಥಾ ಸೊಸೆ ಸ್ವಾಮೀ!

ಲಿಂಗ:—ನಡಿ ಇನ್ನು. ನಿಮ್ಮ ಮನೆಗೆ ಹೋಗಿ ನನ್ನ ವೇಷ ಸರಿ ಮಾಡಿಕೊಳ್ಳಬೇಕು. (ಬಲಗಡೆಗೆ ಇಬ್ಬರ ನಿಷ್ಕ್ರಮಣ.)

ಪ್ರವೇಶ ಐದು

[ನಂಜುಂಡಯ್ಯನ ಮನೆಯ ಪಜಾರ; ಮೊದಲನೆಯ ಪ್ರವೇಶದಲ್ಲಿದ್ದಂತೆಯೇ ಆರಾಮದ ಕುರ್ಚಿಯ ಮೇಲೆ ಗಡ್ಡಮೀಸೆಗಳು ಬೆಳೆದು, ಬತ್ತಿದ ಮುಖದಿಂದ ಕೂಡಿದ ನಂಜುಂಡಯ್ಯನು ಶಾಲು ಹೊದೆದು ಮಲಗಿದ್ದಾನೆ. ಒಂದುಕಡೆ ಮೇಜಿನ ಮೇಲೆ ಗಂಜಿಯ ಪಾತ್ರೆಯನ್ನು ಹಿಡಿದು ಲೋಟಕ್ಕೆ ಬಗ್ಗಿಸುತ್ತಾ ಸಾವಿತ್ರಮ್ಮನು ನಿಂತಿದ್ದಾಳೆ. ರಾತ್ರೆ ಒಂಭತ್ತು ಗಂಟೆಯ ಸಮಯ]

ಸಾವಿ:—ಬೆಳಗಿನಿಂದ ಹೊಟ್ಟೆಗಿಲ್ಲವಲ್ಲ! ಹೀಗೆ ಹಟಮಾಡಿದರೆ ಹೇಗೇ? ಸ್ವಲ್ಪ ಗಂಜಿ ಕುಡೀರೀಂದರೇ!

ನಂಜು:—ಎಂಥ ದರಿದ್ರ ನಕ್ಷತ್ರದಲ್ಲಿ ಹುಟ್ಟಿದೆಯೋ ನೀನೂ! ನಿನ್ನ ಬಾಯಲ್ಲಿ ಅವಕ್ಕೆ ಸರಿಯಾಗಿ ಮಾತು ಹೊರಡುತ್ತೆ. ಅಲ್ಲವೇ ಸಾವಿತ್ರಿ! ಮನೇಲಿ ಕೇಸರೀ, ಯಾಲಕ್ಕೀ, ಗೋಡಂಬೀಗೆ ಗತಿಯಿಲ್ಲವೇನೇ? ದ್ರಾಕ್ಷಿ ಸೀಸೇ ತುಂಬ ತುರುಕಿಟ್ಟಿಲ್ಲವೇ?

ಸಾವಿ: ಇದೇಂದರೆ! ಇದಕ್ಕೆ ಕೇಸರಿ, ಯಾಲಕ್ಕಿ, ದ್ರಾಕ್ಷಿ, ಗೋಡಂಬಿ ಎಲ್ಲ ಹಾಕಿ ಮಾಡಿ ತಂದಿದೀನೀ ಅಂದರೆ.

ನಂಜು:—ಅಯ್ಯೋ ಅಂದ್ರೆಯೇ! ಇಷ್ಟೆಲ್ಲಾ ಹಾಕಿ ಮಾಡಿರೋ ಆ ರವೇ ಪಾಯಿಸಾನ ಗಂಜೀಂತ ಕರೆಯೋ ನಿನ್ನ ದರಿದ್ರಬುದ್ಧಿಯೋ! ಇಲ್ಲಾ ಇಷ್ಟೆಲ್ಲಾ ಹಾಕಿಯೂ ನೀನು ಆದನ್ನ ನಿನ್ನ ಹುಟ್ಟಿಗೆ ತಕ್ಕಹಾಗೆ ತಿರುಪೆಯವರ ಗಂಜೀನೇ ಮಾಡಿ ಕೂಡಿಸಿದೀಯೋ ಏನೋ! ಕೇಳೇ! ನಿನ್ನೀ ಗಂಜಿ ಕುಡಿಯೋ ಅಂಥ ದರಿದ್ರ ನನಗೆ ಬಂದಿಲ್ಲ. ದಿನಕ್ಕೆ ಹದಿನಾಲ್ಕಾಣೆ ಕೊಟ್ಟು ತರುತಿರೋ ಈ ಔಷಧಿ ಇದೆ.

ಸಾವಿ: —ಔಷಧೀಲಿ ಹೊಟ್ಟೆ ತುಂಬುತ್ತೆಯೇ ಅಂದರೆ?

ನಂಜೂ:—ನಿನ್ನನ್ನ ಯಾವ ಹೊತ್ತು ಮದವೆಯಾದೆನೋ ಆ ಹೊತ್ತೇ ನನ್ನ ಹೊಟ್ಟೆ ತುಂಬಿತೇ!

ಸಾವಿ:—ಸ್ವಲ್ಪ ಗಂಜೀ ...ಅಲ್ಲ ಈ ಪಾಯಸ ಕುಡೀರೀ ಅಂದರೆ?

ನಂಜು:—ನಿನ್ನ ಮಗ ಈ ಮನೆಗೆ ಬಂದು, ತನ್ನ ತಪ್ಪನ್ನ ಒಪ್ಪಿಕೊಂಡು, ನನ್ನ ಕಾಲಿಗೆಬಿದ್ದು, ಮುಂದೆ ಯೋಗ್ಯನಾಗಿರುತೇನೇಂತ ವಾಗ್ದಾನ ಮಾಡಿದ ದಿವಸ ನಿನ್ನ ಕೈಯಿಂದ ಪಾಯಸ ಕುಡಿಯೋದು ತಿಳೀತೆ!

ಸಾವಿ:—ಅದುವರೆಗೂ ಹೊಟ್ಟೆಗಿಲ್ಲದಿದ್ದರೆ ಹೇಗೆಂದರೇ!

ನಂಜು:—ಹೊಟ್ಟೆಗೇನೆ ಕಡಿಮೇ? ನಿಮ್ಮ ಮಾವಯ್ಯ ಈ ಮನೇಲಿ ಮಾಡಿಟ್ಟುಬಿಟ್ಟು ಹೋಗಿರೋ ಊಟವೇನೆ ನಾನು ಎರಡು ಜನ್ಮ ಉಂಡರೂ ಮುಗೀದು....ಕೇಳೇ! ಈ ಮನೇನ ಕೂಡ ಕೊಂಡನಂತೆ, ನಾನು ಬದುಕಿರೋವಾಗ ನನ್ನ ಕಣ್ಣೆದುರಿಗೇನೆ ಆ ಪುಂಡನ ಹೆಸರಿಗೆ ಅದನ್ನ ಮಾಡಿ. ನನಗವಮಾನಮಾಡಿ ಹೊಟ್ಟೆ ಉರಿಸಬೇಕೂಂತ........

[ಹೊರಗಡೆ ಬಾಗಿಲು ಬಡಿದ ಸದ್ದಾಗುವುದು. ಸಾವಿತ್ರಮ್ಮನು ತೆರೆಯಲು ಹೊರಡು ವಳು] (ತಟ್ಟನೆ ಸಾವಿತ್ರಮ್ಮನನ್ನು ತಡೆದು) ಹಾಂ! ಹಾಂ! ರಾತ್ರಿಹೊತ್ತು; ಅಷ್ಟು ಸರಾಗವಾಗಿ ಬಾಗಿಲು ಕಡೆ ನುಗ್ಗಬೇಡ. ನಾನಿನ್ನೂ ಎದ್ದು ಓಡಾಡಬಲ್ಲೆ. ನನ್ನ ಕೈಕಾಲಾಡುತಿರೋವರೆಗೂ ನೀನು ಹೆಂಗಸಾ ಗಿಯೇ ಇರು.

ಸಾವಿ:—(ಬೆಚ್ಚಿಪೆಚ್ಚಾಗಿ) ಯಾರೂಂತ ಕೇಳೋಣಾಂತಿದ್ದೇಂದರೇ!

ನಂಜು:—ಬೇಡ—ಬೇಡಾಂದರೇ! ಅದನ್ನೂ ನಾನೇ ಮಾಡು ತೇನೆ; ನೀನು ಒಳಗೆ ಹೋಗು. ನೀನು ಕಾಯಿಸಿರೋ ಆ ಗಂಜೀನೂ ತಗೊಂಡು ಒಳಗೆ ಹೋಗಿ, ಒಂದು ಲೋಟ ನೀರು ಕಾಯಿಸಿ, ಆರಿಸಿ ತಗೊಂಡು ಬಾ. ಮಾತ್ರೆ ತಗೊಳ್ಳಬೇಕು.

(ಹೊರಗಡೆ "ನಂಜುಂಡಯ್ಯನವರೇ! ನಂಜುಂಡಯ್ಯನವರೇ!" ಎಂಬ ಕೂಗು)

ಸಾವಿ:—(ಉತ್ಸುಕತೆಯಿಂದ) ಸೂರಪ್ಪನವರ ಧ್ವನಿ ಇದ್ದ ಹಾಗೆ ಇದೆ.

ನಂಜು:—ಇರಲಿ ಹೊರಡೇ ಒಳಕ್ಕೆ. ಸೂರಪ್ಪ ನಿಮ್ಮ ಚಿಕ್ಕಪ್ಪ ನೇನೇ? ಅವನಿಗೇನು ಬೇಕೋ ನಾನೇ ಕೊಟ್ಟು ಕಳುಹಿಸುತೇನೆ. ನಾಳೆ ಯಿಂದ ಇವನ ಹೆಜ್ಜೇನೂ ನನ್ನ ಹೊಸಿಲು ದಾಟಕೂಡದು—ಹಾಗೇ....

ಸಾವಿ:—ದುಡುಕಬೇಡೀಂದರೆ ...ಯಾತಕ್ಕೆ ಬಂದಿದಾರೋ ಏನೋ ಪಾಪ!

ನಂಜು:—ಒಳಕ್ಕೆ ಹೊರಡೇ! ಆಮೇಲೆ ಬಂದು ನಿನ್ನ ಪಾದಕ್ಕೆ ನಮಸ್ಕಾರ ಮಾಡಿ ಕೂಡುತೇನೆ. ನೀನು--ಮಹಾದೇವಿ, ನನಗೆ ಉಪ ದೇಶ ಮಾಡಿ ತೃಪ್ತಳಾಗುವಿಯಂತೆ.

(ಸಾವಿತ್ರಮ್ಮನು ಗಂಜಿ ಪಾತ್ರೆ ಲೋಟವನ್ನು ತೆಗೆದುಕೊಂಡು ಒಳಕ್ಕೆ ಹೋಗುವಳು. ನಂಜುಂಡಯ್ಯನು ಮೆಲ್ಲಗೆ ಹೋಗಿ ಬಾಗಿಲು ತೆರೆದು ಬಗ್ಗಿ ನೋಡು ವನು. ಸೂರಪ್ಪನು ಪ್ರವೇಶಿಸುವನು.)

ನಂಜು:—(ಬಂದು, ಆರಾಮದ ಕುರ್ಚಿಯ ಮೇಲೆ ಕೂತು) ಬನ್ನಿ ಸೂರ ಪ್ಪನವರೇ! ಬನ್ನಿ! ಕುರ್ಚಿಯ ಮೇಲೆ ಕೂಡಿ. ನಿಮ್ಮ ಜೊತೇಲಿ ಬಂದಿರೋ ಆತ ಯಾರು? ಹೊರಗೇ ನಿಂತುಬಿಟ್ಟನಲ್ಲಾ! ನಿಮ್ಮ ಮನೆಯ ಆಳೋ?

ಸೂರ:—ನಮ್ಮ ಮನೆಯ ಆಳಲ್ಲ. ಇಲ್ಲಿ ನಿಮ್ಮ ಮನೇಗೇಂತಲೇ ಕರೆ ತಂದೆ. ಈಗ ನಿಮ್ಮ ಮನೇಲಿ ಸಿಂಗ್ರಿ ಹೊರಟು ಹೋದಾರಭ್ಯ, ಪಾಪ! ನಿಮಗೆ ಕೆಲಸಗಳಿಗೆ ಎಷ್ಟು ತೊಂದರೆಯಾಗಿದೆಯೋ ಅಂತ....ಹೇಳೀ....

ನಂಜು:—ಏನೂ ತೊಂದರೆಯಾಗಿಲ್ಲ ನಿಮ್ಮ ದಯದಿಂದ. ಎಲ್ಲಾ ಕೆಲಸಗಳೂ ಸರಾಗವಾಗಿ ನಿರಾತಂಕವಾಗಿ ನಡೀತಾ ಇವೆ. ನನ್ನ ಮನೆ ಬಿಟ್ಟು ಹೋದವರಿಂದೆಲ್ಲಾ ನನಗೆ ಆಗುತಿದ್ದ ತೊಂದರೆಗಳೆಲ್ಲಾ ತಪ್ಪಿವೆ. ನಿಮ್ಮ ಆಶೀರ್ವಾದದಿಂದ ಈಗ ನೆಮ್ಮದಿಯಾಗಿದೇನೆ.

ಸೂರ:—ಹಾಗಲ್ಲ ನಂಜುಂಡಯ್ಯನವರೇ! ಮನೇಲಿ ಆಳೂಂತ ಇದ್ದರೆ ಅದರಲ್ಲೂ ನಿಮ್ಮೀ ಸ್ಥಿತೀಲಿ....

ನಂಜು:—ಸ್ವಲ್ಪ ತಡೀರಿ; ಬಾಗಿಲು ಹಾಕಿ ಬರುತೇನೆ. (ಏಳಲು ಹೋಗುವನು)

ಸೂರ:—ನೀವು ಕೂಡಿ; ನಾನೇ ಹಾಕುತೇನೆ.

ನಂಜು:—ಹಾಗೇ ಆತನಿಗೆ ನಮ್ಮ ಮಾತು ಮುಗಿಯುವ ವರೆಗೂ ಸ್ವಲ್ಪ ದಯಮಾಡಿ ಅಲ್ಲೇ ವರಂಡಾದಲ್ಲಿ ಕುಳಿತಿರೋ ಹಾಗೆ ಹೇಳಿಬಿಡುತೀರಾ? (ಸೂರಪ್ಪನು ಹೊರಗೆ ಹೋಗಿ ಕ್ಷಣಕಾಲಾನಂತರ ಬಾಗಲು ಹಾಕಿಕೊಂಡು ಬಂದು ಕೂಡುವನು) ಮನುಷ್ಯ ಸಭ್ಯಾಂತ ಕಾಣುತ್ತೆ.

ಸೂರ:—ಹೌದು ನಂಜುಂಡಯ್ಯನವರೇ! ಈಗ ನೋಡಿ, ಏನೂ ಅರಿಯದ ಹುಡುಗರನ್ನ ಮನೇಲಿಟ್ಟುಕೊಂಡರೆ ಅವರು ಹೆಚ್ಚಿ ತಲೆಹರಟೆಗಳಾಗುತಾರೆ. ಆದರೆ ಕಷ್ಟ-ಸುಖ ಅನುಭವಿಸಿರೋರನ್ನ ಕೆಲಸಕ್ಕಿಟ್ಟುಗೊಂಡರೆ ಎಷ್ಟೋ ಮರ್ಯಾದೆಯಾಗಿ ನಡೆಕೊಳ್ಳುತಾರೆ.

ನಂಜು:—ಆಹಾಂ!

ಸೂರ:—ಈತ, ನಾನು ಮಲೆನಾಡು ಸರ್ವಿಸ್‌ನಲ್ಲಿದ್ದಾಗ ಶಿವನಿಯಲ್ಲಿ ಕಾನ್‌ಸ್ಟೇಬಲ್ ಆಗಿದ್ದ. ಆಗ ಮಹಾಸ್ವಾಮಿಯವರು ದಯಮಾಸಿದ್ದಾಗ ಡ್ಯೂಟೀಗೆ ಹೋಗುತಿರೋವಾಗ ಬಲಗಾಲು ಪೆಟ್ಟಾಗಿ ಕುಂಟಾದ. ಅಂದಿನಿಂದಲೇ ಪೆನ್‌ಷನ್ ಆಗಿಹೋಯಿತು. ಮನೇಲಿ ನಾಲ್ಕಾರು ಮಕ್ಕಳು; ಅದಕ್ಕಾಗಿ "ಜೊತೇಗೆ ಎಲ್ಲಾದರೂ ತಿಂಗಳಿಗೆ ಒಂದು ಆರೇಳು

ರೂಪಾಯಿ, ಕಡೆಗೆ ಮೂರು ನಾಲ್ಕು ರೂಪಾಯಿ ಬಂದರೂ ಸರಿಯೇ, ಒಳ್ಳೇ ಸ್ಥಳ ತೋರಿಸಿ--ಕೆಲಸ ಮಾಡಿಕೊಂಡಿರುತೇನೇ" ಅಂತ ಬಂದು ಅತ್ತುಕೊಂಡ. ನಾನೂ ಬಹಳ ಯೋಚಿಸಿದೆ. ಕಡೇಗೆ, ಅವನ ಗುಣ ಕಂಡು ಮೆಚ್ಚ್ಕೊೀಅಂಥ ದೊಡ್ಡ ಮನುಷ್ಯರು ನೀವೇಂತ ತಿಳಿದು ಇಲ್ಲಿಗೆ ಕರೆತಂದೆ.

ನಂಜು:--ಅಲ್ಲಾ! ಇಷ್ಟು ದೊಡ್ಡ ಆಳು ತಿಂಗಳಿಗೆ ಮೂರು ನಾಲ್ಕು ರೂಪಾಯಿ ಸಂಬಳಕ್ಕೆ ಕೆಲಸ ಮಾಡೋದಕ್ಕೆ ಒಪ್ತಾನೇ ಅಂದರೆ ನಾನು ನಂಬೊಲ್ಲ.

ಸೂರ:--ಆತನನ್ನೇ ಕರೆಸಿ ಕೇಳಿಬಿಡೋಣ.

ನಂಜು:—(ಯೋಚಿಸಿ) ಬಹುಶಃ ನಮ್ಮಪ್ಪನೇನಾದರೂ ತನ್ನ ಶಿಷ್ಯ ಮಂಡಲೀಪೈಕಿ ಒಬ್ಬನನ್ನ ಗೊತ್ತುಮಾಡಿ ನನ್ನ ಮೇಲಿನ ಉಸ್ತುವಾರಿ ಗೇಂತ ಹೀಗೆ ಸಿ.ಐ.ಡಿ. ಛೂಬಿಟ್ಟಿದಾನೋ?

ಸೂರ:—ನೀವು ವೃಥಾ ಬಹುದೂರ ಯೋಚಿಸುತೀರಾ ನಂಜುಂಡಯ್ಯನವರೆ! ನಿಮ್ಮ ತಂದೆಯವರು ಅವರ ಪಾಡಿಗವರು ಸ್ವಸ್ಥವಾಗಿ ಹಳ್ಳೀಲಿದಾರೆ.

ನಂಜು:—ಅವರು ಹಳ್ಳೀಲಿದ್ದರೂ ಅವರ ಕಣ್ಣೆಲ್ಲಾ ಇಲ್ಲೇ ಇರುತ್ತೆ ಸೂರಪ್ಪನವರೇ! ನೀವೇನು ಬಲ್ಲಿರಿ ಅವರನ್ನ! ಕಂಡಹಾಗೆ ನನಗೆ ಮಾಡಿರೊ ಅವಮಾನಗಳೂ, ಉಂಟುಮಾಡಿರೋ ಸಂಕಟಗಳೂ ಹಾಗಿರಲೀ; ಕಾಣದ ಹಾಗೆ ಎಂಥ ಹೊಟ್ಟೆ ಉರಿಯೋ ಕೆಲಸ ಮಾಡಿ ಹೋಗಿದಾರೆ ಗೊತ್ತೇ? ಅದನ್ನ ನೆನಸಿಕೊಂಡರೆ ಈ ಮನೇಲಿ ಇನ್ನೊಂದು ಕ್ಷಣ ಇರಬಾರದು--ನಾನು ಸಾಯುವ ಹಾಗಿದ್ದರೆ, ಹೋಗಿ ಯಾವದಾದರೂ ಛತ್ರದಲ್ಲಿ ಪ್ರಾಣ ಬಿಡಬೇಕೂಂತ ಅನ್ನಿಸುತ್ತೆ.

ಸೂರ:—ಅಂಥ ದ್ರೋಹಾನ ಲಿಂಗಪ್ಪಯ್ಯನವರು ತಮ್ಮ ಶತ್ರುಗಳಿಗೂ ಮಾಡಲಾರರು. ಅವರ ಬೆಲೆ ಕಾಣೋ ಯೋಗ್ಯತೆ ನನಗೆ ನಿಮಗೇ ಈ ಜನ್ಮದಲ್ಲಿ ಸಾಧ್ಯವಿಲ್ಲ.

ನಂಜು:—ಇದಕ್ಕೇನೇ ನಿಮ್ಮನ್ನಾಗಲೀ ನಿಮ್ಮ ಕಡೆಯುವರನ್ನಾಗಲೀ ಹತ್ತಿರ ಸೇರಿಸುವದಕ್ಕೆ ನನಗೆ ಅನುಮಾನ; ಎಲ್ಲಾ ಅವರ ಪರಿವಾರವೇ.

ಸೂರ:— ಅದು ಹೋಗಲಿ ಬಿಡೀ; ಈಗ ಅವರು ನಿಮಗೆ ಕಾಣದ ಹಾಗೆ ಮಾಡಿ ಹೋಗಿರೋ ದ್ರೋಹ ಏನು ಹೇಳಿ ?

ನಂಜು:—ಸಂಸಾರದ ವಿಚಾರ ನಿಮ್ಮ ಹತ್ತಿರ ಬಾಯಿಬಿಡಬಾರದು. ಆದರೆ ನಮ್ಮ ತಂದೆ ನಿಮಗೆ ತಿಳಿಸದೆ, ನಿಮ್ಮ ಸಲಹೆ ಇಲ್ಲದೇ ಆ ಕೆಲಸ ಮಾಡಿರಲಾರರು ಅನ್ನೀ. ಹಾಗೆ ಮನೆಯ ಗುಟ್ಟನ್ನು ಬಿಚ್ಚಿಡೋ ಅಪ್ಪನಾಗಿದ್ದಿದ್ದರೇ....

ಸೂರ:— ಯಾವ ಗುಟ್ಟು ಸ್ವಲ್ಪ ಸೂಕ್ಷ್ಮ ಹೇಳಿ....

ನಂಜು: — ಈ ಮನೆಯ ವಿಚಾರ.

ಸೂರ: — ಓಹೋ! ಈಗ ತಿಳೀತು. ಈ ಮನೇನ ವೆಂಕಟಸಾಮಿಯಿಂದ ಕೊಂಡು ಕೊಂಡು, ಸುಂದರೂ ಹೆಸರಿಗೆ ಮಾಡಿರೋದು ಅಲ್ಲವೇ?

ನಂಜು:— ನಾನು ಹೆಳಲಿಲ್ಲವೇ. ನನ್ನ ಸಂಸಾರದ ಗುಟ್ಟನ್ನ ಹೇಗೆ ರಟ್ಟು ಮಾಡಿದಾರೇಂತ?—ಅದೇ ನೋಡೀ.

ಸೂರ: —ಯಾಕೆ ಹಾಗೆ ಮಾಡಿದರೂ ಅನ್ನೋದನ್ನ ತಿಳಿಕೊಳ್ಳೋ ಅಷ್ಟು ಸಮಾಧಾನ ಸಹಾ ಇಲ್ಲದೆ ಮಾತಾಡಿದರೆ ಪ್ರಯೋಜನವೇನು ಸ್ವಾಮೀ ?

ನಂಜು:—ಯಾಕೆ ಮಾಡಿದರೂ? ನನ್ನ ಹೊಟ್ಟೆ ಉರಿಸೋದಕ್ಕೆ.

ಸೂರ:—(ಸಿಟ್ಟಾಗಿ) ಹೊಟ್ಟೆ ಉರಿಸೋದಕ್ಕಲ್ಲ; ಹೊಟ್ಟೆ ಉರಿ ಕಡಿಮೆ ಮಾಡಿ, ನಿಮ್ಮ ಮನೆ ನೆಟ್ಟಗೆ ಮಾಡಿ, ನಿಮ್ಮನ್ನ ಉದ್ಧಾರ ಮಾಡೋದಕ್ಕೆ....ನೀವು ಆ ಕೋ-ಆಪರೇಟಿವ್ ಬ್ಯಾಂಕ್ ಸೆಕ್ರೆಟರಿಗಳಾಗಿದ್ದಾಗ, ಗೋಲಸ್ ಮಾಡಿ ಎಂಟು ನೂರು ರೂಪಾಯಿ ಸಾಲ ತಗೊಂಡಿರಲಿಲ್ಲವೇ ವಾಸುದೇವಸೆಟ್ಟಿ ಹತ್ತಿರ?

ನಂಜು:—(ಆಶ್ಚರ್ಯ ಸಂತಾಪಗಳಿಂದ) ಇದೂ ನಿಮಗೆ ಗೊತ್ತೇ?

ಸೂರ: --ಗೊತ್ತಾಗದೇ !....

ನಂಜು;—ಇದನ್ನೂ ಆ ನೀಚನೇ ನಿಮ್ಮ ಕೈಲಿ ಹೇಳಿರಬೇಕು.

ಸೂರ:—ಆ ದೇವರನ್ನ ವೃಥಾ ಬೈದು ಯಾತಕ್ಕೆ ನಾಲಿಗೇನ ನರಕಕ್ಕೆ ನೂಕತೀರೀ !....ಆ ಪತ್ರ ಈಗ ನನ್ನ ಹೆಸರಿನಲ್ಲಿದೇ !

ನಂಜು;—ಸೂರಪ್ಪಾ !!

ಸೂರ:—ಹೌದು ಸ್ವಾಮೀ ನಂಜುಂಡಯ್ಯನವರೇ ! ಸ್ವಲ್ಪ ನಿಧಾನವಾಗಿ ಕೇಳಿ. ನಿಮ್ಮ ತಂದೆ ಲಿಂಗಪ್ಪಯ್ಯನವರು ಈ ಮನೇನ ವೆಂಕಟಸಾಮಿಯಿಂದ ಖರೀದಿ ಮಾಡಿದಾಗ ನಾನೂ ಅವರೂ ಕೂತು ಬಹಳ ಯೋಚಿಸಿ, ಆ ನಿಮ್ಮ ಸಾಲ, ಜೊತೇಗೆ ನಿಮ್ಮ ಸೊಸೈಟಿ ಸಾಲ ನೀವು ಇನ್‌ಷೂರನ್‌ಸ್ ಪಾಲಿಸೀ ಮೇಲೆ ತಗೊಂಡಿರೋ ಸಾಲ, ಎಲ್ಲಾ ತೀರೋ ವರೆಗೆ ಮನೆ ಸುಂದರೂ ಹೆಸರಿನಲ್ಲಿದ್ದರೇ ಕ್ಷೇಮಾಂತ ಮಾಡಿದ್ದೇ ಹೊರತು ನಿಮಗೆ ಅಪಮಾನ ಮಾಡಬೇಕೂಂತಲ್ಲ.

ನಂಜು:—ಸೂರಪ್ಪಾ !

ಸೂರ:—ಹೌದು ಸ್ವಾಮೀ ! ಅಲ್ಲದೆ ಮುಂದಿನ ತಿಂಗಳೀನೇ ಈ ಸಮಾಚಾರ ತಿಳಿದು ವಾಸುದೇವಸೆಟ್ಟಿ ಈ ಮನೇ ಮೇಲೆ ದಾವಾ ಹಾಕ ಬೇಕೂಂತಿದ್ದ. ಇದನ್ನ ಕೇಳಿ ನಾವಿಬ್ಬರೂ ಮತ್ತೆ ಅವನಲ್ಲಿಗೆ ಹೋಗಿ, ಆ ಪತ್ರಾನ ನನ್ನ ಹೆಸರಿಗೆ ಮಾಡಿಸಿಕೊಂಡೆ....

ನಂಜು:—ಹೇಗೆ ?

ಸೂರ:—ನಾನು ವಾಸುದೇವಸೆಟ್ಟಿಗೆ ಎಂಟುನೂರು ರೂಪಾಯಿ ಕೊಟ್ಟೆ, ಲಿಂಗಪ್ಪಯ್ಯನಿಗೋಸ್ಕರ....ನಿಮ್ಮ ಮನಸ್ಸಿಗೆ ನೆಮ್ಮದಿ ಆಗಲೀ ಅಂತ.

ನಂಜು:—ಸೂರಪ್ಪನವರೇ ! ನನಗೊಂದೂ ಅರ್ಥವಾಗೊಲ್ಲ. ಒಂದೊಂದು ಸಲ ನನ್ನ ತಪ್ಪಿನಿಂದಲೇ ನನ್ನ ಸುತ್ತಣ ಜನ ನನಗೆ ಶತ್ರುಗಳಾಗಿ ಕಾಣಿಸುತಾರೆ ಅಂತ ಅನ್ನಿಸುತ್ತೆ. ಒಂದೊಂದು ಸಲ....ಇವರೆಲ್ಲಾ ನನಗೆ ದ್ರೋಹಮಾಡೋದಕ್ಕೇನೇ ಸೇರಿಕೊಂಡಿದಾರೆ ಅಂತ ಅನ್ನಿಸುತ್ತೆ. ಅಂತೂ ಈಗ ನಾನು ನಿಮಗೆ ಎಂಟುನೂರು ರೂಪಾಯಿ ಸಾಲಗಾರನಾದೆ ....ಇನ್ನು ನೀವು ಏನು ಹೇಳಿದರೂ ಕೇಳುತೇನೆ ...ಕೇಳಬೇಕು

ಸೂರ:—(ಸಮಾಧಾನಪಡಿಸುವ ಧ್ವನಿಯಲ್ಲಿ) ಹಾಗಲ್ಲ ನಂಜುಂಡಯ್ಯ ನವರೇ! ನಿಮ್ಮನ್ನ ಕೈಲಿ ಹಾಕಿಕೊಳ್ಳಬೇಕೂಂತ ಈ ವ್ಯಾಪಾರ ಮಾಡ ಲಿಲ್ಲ. ಅಲ್ಲದೆ ನನ್ನ ಹತ್ತಿರ ರೂಪಾಯಿ ಹುಳಿತು ಹೋಗುತಾನೂ ಇರಲಿಲ್ಲ. ನಾನೂ ಬಡವ; ಮಕ್ಕಳೊಂದಿಗ. ಆದರೆ ಆ ಸೆಟ್ಟಿ ನಿಮ್ಮನ್ನ ಬೈತಿದ್ದ ಮಾತುಗಳನ್ನ ಕೇಳಲಾರದೆ ಈ ಕೆಲಸ ಮಾಡಿದುದು. ನಾನು ಅಂಥ ನೀಚನಾಗಲಾರೆ. ಅಥವಾ ದುಡ್ಡಿಗೋಸ್ಕರ ಜನಗಳ ಮನಸ್ಸಿನ ಶಾಂತೀನ ನುಂಗಲಾರೆ. ಹಾಗೆ ಇದ್ದಿದ್ದರೆ ನನ್ನ ಜೊತೆಯೋರ ಹಾಗೆ ಸರ್ವಿಸ್ ಮುಗಿಯೋದರ ಒಳಗೆ ಒಂದಷ್ಟು ಜಮೀನು, ಮನೆ, ಮಠ ಮಾಡಿಕೊಳ್ಳುತಾ ಇದ್ದೆ. ನಾನು ಲಿಂಗಪ್ಪಯ್ಯನವರಷ್ಟು ಸಾಧುವಲ್ಲ ದಿದ್ದರೂ, ಇನ್ನೊಬ್ಬರ ಮನಸ್ಸನ್ನ ಹಿಂಡಿಲ್ಲ.

ನಂಜು:—ನೀವು ಮಾತನಾಡುತ್ತಿದ್ದರೆ ನಮ್ಮ ತಂದೆ ಮಾಡನಾಡ ತಿರೋ ಹಾಗೆ ಇರುತ್ತೆ.

ಸೂರ:—ನೀವು ಅವರನ್ನ ನೋಡಬೇಕೇನೂ?

ನಂಜು:—ಯಾಕೇ?

ಸೂರ:—ಬೇಕಾದರೆ ಹೋಗಿ ಕರೆಕೊಂಡು ಬರುತೇನೆ.

ನಂಜು:—ಬೇಡ ಬೇಡ! ನಾನೇ ಹುಷಾರಾದ ಮೇಲೆ ಹೋಗಿ ನೋಡಿಕೊಂಡು ಬರುತೇನೆ.

ಸೂರ:—ಅದುವರೆಗೂ ಯಾಕೆ ಕಾಯಬೇಕು?

ನಂಜು:—ಅದಿರಲಿ ಮುಂದೆ ಹೇಳಿ.

ಸೂರ:—ಏನು ಹೇಳಲಿ?....ಹಂ ...ನೀವು ನನ್ನ ಸಾಲಗಾರಾಗಿ ದ್ದೀರಿ ಅನ್ನೋ ಭಾವನೆ ಇದ್ದರೆ ಹೇಳಿ; ಆ ಪತ್ರಾನೇ ತಂದು ನಿಮಗೆ ಕೊಟ್ಟುಬಿಡುತೇನೆ. ನೀವೇ ಧರ್ಮ ಕರ್ಮ ತಿಳಿದು, ನನ್ನ ಕುಟುಂಬ ಕ್ಕಿರೋ ಅದೊಂದೇ ಆಸ್ತೀನ ನಿಮಗೆ ಅನುಕೂಲವಾದಾಗ ಮುಡುಪಾಗಿ ಒಪ್ಪಿಸಿಬಿಡಿ. ತಿಳಿಯಿತೇ?

ನಂಜು:—ಅಂತೂ ನಾನು ಪ್ರಪಂಚದಲ್ಲಿ ಎಷ್ಟೆಷ್ಟು ಇತರರ ಹಂಗು ಬಿಡಿಸಿಕೊಳ್ಳಬೇಕೂಂತ ಒದ್ದಾಡುತೇನೋ, ಅಷ್ಟೂ ಅಷ್ಟೂ ಅದು ಸುತ್ತಿ ಹಾಕಿಕೊಳ್ಳುತಾನೇ ಹೋಗುತ್ತೆ.

ಸೂರ:—ಆ ದೇವರಿಗೆ ಕೂಡ ಭಕ್ತರ ಹಂಗಿರುತ್ತೇ; ಅಂದ ಮೇಲೆ ಪ್ರಪಂಚದಲ್ಲಿ ಹಂಗಿಗೆ ಸಿಕ್ಕದ ಮನುಷ್ಯ ಯಾರು? ಈ ದೇಹವೇ ತಂದೆ ತಾಯಿಗಳ ಹಂಗಿಗೆ ಸೇರಿದ್ದು; ಇನ್ನು ಮುಂದೇನು?....ಇದನ್ನೆಲ್ಲಾ ನಿಕೃಷ್ಟಭಾವನೆಯಿಂದ ನೋಡಿದರೆ, ನಿಮಗೆ ಹಾಗೆ 'ಹಂಗೂ' ಅಂತ ಕಾಣುತ್ತೇ; ಎಲ್ಲಾನೂ ಪ್ರೇಮದೃಷ್ಟಿಯಿಂದ ನೋಡಿದರೆ ಆಗ ಎಲ್ಲಾ ಸಹಜವಾಗಿ ಕಾಣುತ್ತೇ. ಒಂದಕ್ಕೊಂದು ಆಧಾರ—ಒಂದಕ್ಕೊಂದು ಅವಲಂಬನ; ಒಂದನ್ನು ಬಿಟ್ಟು ಒಂದಿರಲಾರದು.

ನಂಜು:—ನನಗೆ ವೇದಾಂತ ಅರ್ಥವಾಗೊಲ್ಲ.

ಸೂರ:—ನನಗೆ ವೇದಾಂತ ಹೇಳೋದಕ್ಕೂ ಬಾರದು. ನೀವು ಮನಸ್ಸನ್ನ ನೆಮ್ಮದಿಯಾಗಿಟ್ಟುಕೊಳ್ಳಿ. ನಿಮ್ಮ ಮಗ, ನಿಮ್ಮ ತಂದೆ ಎಲ್ಲರೂ ನಿಮ್ಮ ವಿಚಾರದಲ್ಲಿ ಎಷ್ಟು ಪ್ರೇಮದಿಂದಿದಾರೆ ಅನ್ನೋದನ್ನ ಕಾಣೋದಕ್ಕೆ ನಿಮಗೆ ನಿಮ್ಮ ಮನಸ್ಸೇ ಅಡ್ಡಿಯಾಗಿದೆ. ನಿಜವಾಗಿಯೂ ಆ ವಿಚಾರದಲ್ಲಿ ನೀವು ಪುಣ್ಯವಂತರು. ಅದರಲ್ಲೂ ಅಂಥ ನಿಷ್ಕಳಂಕ ಹೃದಯದ ತಂದೆ—ಎಲ್ಲರಲ್ಲೂ ಒಂದೇ ವಿಶ್ವಾಸ....ನಿರ್ವಂಚನೆಯಾದ ಪ್ರೀತಿ....

ನಂಜು:—ಅವರ ಮಾತು ಬಿಡಿ....ಈಗ ಈ ಆಳಿನ ವಿಚಾರ?

ಸೂರ:—ಹೌದು. ಅದೇ ಹೇಳಬೇಕೂಂತ ಬಂದೆ. ಆತನನ್ನು ನೀವು ನಿಮ್ಮ ಮನೇಲಿ ಇಟ್ಟುಕೊಳ್ಳಿ. ನಿಮಗೆ ಎಷ್ಟು ಸಂಬಳ ಕೊಡ ಬೇಕೂಂತ ಅನ್ನಿಸುತ್ತೊ ಅಷ್ಟು ಕೊಡಿ. ನೀವು ಹೇಳಿದ ಕೆಲಸಾನ ಅಚ್ಚುಕಟ್ಟಾಗಿ ಮಾಡದೇ ಅವಿಧೇಯನಾದರೆ ಕಳುಹಿಸಿಬಿಡಿ; ಅದಕ್ಕೇನೂ ಅಡ್ಡಿಯಿಲ್ಲ. ಆದರೆ ಒಂದು ವಿಚಾರ.

ನಂಜು:—ಏನದು?

ಸೂರ:—ಆತ ಸ್ವಲ್ಪ ಮರ್ಯಾದಸ್ಥ.

ನಂಜು:—ಏನು ಹಾಗಂದರೇ?

ಸೂರ:—ಏನೂ ಇಲ್ಲ. ನೀವು ಸಿಂಗ್ರೀನ ಬೈಯುತಿದ್ದರಲ್ಲ ಅದು ಜ್ಞಾಪಕಕ್ಕೆ ಬಂದು ಹೇಳಿದೆ. ಒಂದು ವೇಳೆ ನೀವು ಬೈದರೂ ಈತ

ಸುಮ್ಮನಿರಬಹುದು—ತನ್ನ ಹೊಟ್ಟೆಗೋಸ್ಕರ. ಆದರೆ ನನ್ನ ಬೇಡಿಕೇ—ನೀವು ಆತನನ್ನ ಬೈಬಾರದು, ಒಳ್ಳೇ ಮಾತಿನಿಂದ ಹೇಳಿ ಬೇಕಾದ ಕೆಲಸ ಮಾಡಿಸಿಕೊಳ್ಳಬಹುದೂಂತ.

ನಂಜು:—ಪೋಲೀಸ್ ಡಿಪಾರ್ಟ್ಮೆಂಟ್‌ನಲ್ಲೂ ನೀವು ಹೇಳೋ ಅಂಥ ಸಾಧುಗಳಿರುತಾರೇಂದರೆ, ಆಶ್ಚರ್ಯವೇ!

ಸೂರ:—ಇರುತಾರೆ....ಆದರೆ ಅವರು ಇತರರ ಹಾಗೆ ಮುಂದಕ್ಕೆ ಬರೋದಿಲ್ಲ....ಅಷ್ಟೇ....ಆತನನ್ನ ಕರೀಲೇ?

ನಂಜು:—ಹೂಂ. ಕರೀರಿ; ಪಾಪ! ಹೊರಗೆ ಚಳೀಲೇ ನಿಂತಿದಾನೆ. (ಸೂರಪ್ಪನು ಮೇಲೇಳುವನು) ಇಲ್ಲಿಂದಲೇ ಕೂಗಬಾರದೇ?

ಸೂರ:—(ಬಾಗಿಲ ಕಡೆಗೆ ಹೋಗುತ್ತಾ) ನೋಡುತೇನೆ....ಹೊರಗಡೆ ಇದಾನೋ ಇಲ್ಲ ಹೊರಟು ಹೋದನೋಂತ....(ಬಾಗಿಲು ತೆರೆದು) ಚನ್ನಪ್ಪಾ! ಚನ್ನಪಾ!! ಬಾಪ್ಪಾ ಒಳಕ್ಕೆ! (ವೇಷದಲ್ಲಿರುವ ಲಿಂಗಪ್ಪಯ್ಯನು ಬಂದು ಬಾಗಿಲು ಮುಚ್ಚುವನು)

ನಂಜು:—ನಿನ್ನ ಹೆಸರು ಚನ್ನಪ್ಪ ಅಂತಲೋ?

ಚನ್ನ:—ಔದೂ ಬುದ್ಧೀ.

ನಂಜು:—ನಿನ್ನ ವಯಸ್ಸೆಷ್ಟೊ?

ಚನ್ನ:—ನಲವತ್ತೈದು-ನಲವತ್ತೆಂಟು ವರುಸ ಇರಬೌದು ಬುದ್ಧೀ. (ನಂಜುಂಡಯ್ಯನನ್ನೇ ದಿಟ್ಟಿಸಿ ನೋಡುತ್ತಾ ಕಂಬಳಿಯ ಕತ್ತನ್ನು ತಗ್ಗಿಸುವನು.)

ನಂಜು:—ಓದೋದಕ್ಕೆ ಬರೆಯೋದಕ್ಕೆ ಬರುತ್ತೋ? (ಚನ್ನಯ್ಯ ಅನುಮಾನಿಸುವನು.) ಹೇಳು-ಹೇಳು. ಬರದಿದ್ದರೆ ಸಂಕೋಚಪಡಬೇಕಾದ್ದೇನೂ ಇಲ್ಲ. ನಮಗೆ ಬೇಕಾಗಿರೋನು ಹೇಳಿದಷ್ಟು ಕೆಲಸ ಮಾಡೋಳೇ ಹೊರತು ಓದೋದಕ್ಕೆ ಬರೆಯೋದಕ್ಕೆ ಬರೋ ಮೇಷ್ಟ್ರಲ್ಲ.

ಚನ್ನ:—ಓದಾಕೆ ಬರೆಯಾಕೆ ಬರದೂ ಬುದ್ದೀ; ಆದರೆ ಎಬ್ಬೆಟ್ಟಿನಾಗೆ ರುಜು ಮಾಡಾಕೆ ಬರ್ತೈತ್ರೀ.

ನಂಜು:—ಸಂತೋಷ....ನಿನಗೆಷ್ಟು ಮಕ್ಕಳು?

ಚನ್ನ:—(ಸಂಕೋಚದಿಂದ) ಮನೇ ತುಂಬಾ ಅವೆ ಬುದ್ದೀ.

ನಂಜು:—ನೋಡು; ನಾನು ಸ್ವಲ್ಪ ದುಡುಕು ಸ್ವಭಾವದವನು. ಸರ್‍ರನೆ ರೇಗಿ ಉಚಾಯಿಸಿ ಮಾತನಾಡಬಹುದು. ಜೊತೇಗೆ ನೀನೂ ರೇಗಿಬಿಟ್ಟರೆ....ಕಷ್ಟ.

ಚನ್ನ:—ಇಲ್ಲ ಬುದ್ದೀ; ತಾವು ಏನು ಮಾತಾಡಿದರೂ ಪರ್ವಾ ಇಲ್ಲ. ಒಟ್ಟೇಗೆ ಇಟ್ಟಕ್ಕೊಳ್ಳೋ ದಣಿಗಳು ಅಂದರೆ ಕೇಳದಿರೋ ಆಳು ಆಳಾ ಬುದ್ದೀ?

ನಂಜು:—ಭೇಷ್! ಭೇಷ್! ಒಳ್ಳೇ ಮನುಷ್ಯನ ಹಾಗೆ ಕಾಣು ತಾನೆ ಸೂರಪ್ಪನವರೇ! ಚನ್ನಪ್ಪಾ! ನೀನು ನಮ್ಮ ಮನೇಲಿ ಕೇವಲ ಆಳಿನಂತಿದ್ದರೆ ಸಾಲದು. ನಂಬಿಕೆಯಿಂದ, ವಿಶ್ವಾಸದಿಂದ, ಹೇಳಿಸಿ ಕೊಳ್ಳದೆ, ಮನೆಯ ಕೆಲಸಗಳನೆಲ್ಲಾ ನೋಡಿಕೊಂಡು ಅಚ್ಚುಕಟ್ಟಾಗಿ ಮಾಡುತಾ ಮನೇನ ನನ್ನ ಮನಸ್ಸಿಗೆ ಸಂತೋಷವಾಗೋ ಹಾಗೆ ಇಟ್ಟಿರ ಬೇಕು.

ಚನ್ನ;— ದಣಿಗಳಪ್ಪಣೆ.

ನಂಜು:—ಎಷ್ಟು ಸಂಬಳ ಕೊಡಬೇಕು?

ಚನ್ನ:— ಸ್ವಾಮಿಾ ಚಿತ್ತ; ನಾನು ತಮ್ಮ ಮಗ. ತಾವು ಬಡಿಸಿದ್ದು —ನಾನು ಉಂಡದ್ದು.

ನಂಜು:—ಏನು ಸೂರಪ್ಪನೋರೇ! ನೀವು ಹೇಳಿದ ಹಾಗೇ ತುಂಬಾ ಒಳ್ಳೆಯ ಮನುಷ್ಯನ ಹಾಗೆ ಕಾಣುತಾನೆ...ಪಾಪ! ಶಾನೆ ಕಷ್ಟದಲ್ಲಿರಬಹುದು.

ಸೂರ:—ನಾನದನ್ನ ಆಗಲೇ ಹೇಳಿದೆನಲ್ಲ.

ನಂಜು:— ಮೊದಲನೇ ಮೂರು ತಿಂಗಳು ಆರು ರೂಪಾಯಿನಂತೆ ಸಂಬಳ ಕೊಡುತೇನೆ; ಆ ಮೇಲೆ ನಿನ್ನ ಕೆಲಸ ಸಮರ್ಪಕವಾಗಿ ಕಂಡು ಬಂದರೆ ಇನ್ನೊಂದೆರಡು ರೂಪಾಯಿ ಹೆಚ್ಚು ಮಾಡೋಣಂತೆ.

ಚನ್ನ:— ತಮ್ಮ ಪಾದ ಬುದ್ಧೀ.

ನಂಜು:—ಸಂತೋಷ. ನೀನು ಬೆಳಿಗ್ಗೆ ಆರು ಘಂಟೆಗೆ ನಮ್ಮ ಮನೇಲಿ ಇರಬೇಕು. ಬಂದ ಕೂಡಲೆ ನೀರೊಲೇ ಹಚ್ಚಿ, ಬಟ್ಟೆಗಳೊಗೆದು,

ಹಾಸಿಗೆಗಳನ್ನ ಸುತ್ತಿ, ಕಸಗುಡಿಸಿ, ನಂತರ ತರ್ಕಾರಿ, ಪೋಸ್ಟ್ ಆಫೀಸ್, ಡಾಕ್ಟರ್ ಷಾಪು ಅಲ್ಲಿಗೆಲ್ಲಾ ಒಂದು ಕಡೆಯಿಂದ ಹೋಗಿಬಿಟ್ಟು ಬಂದು ಆಮೇಲೆ ಮನೆಯ ಕೆಲಸ ಪ್ರಾರಂಭಿಸಿ, ಮಧ್ಯಾಹ್ನದ ಊಟ ಇಲ್ಲೇ ಮಾಡಿ, ರಾತ್ರಿ ಒಂಭತ್ತು ಘಂಟೆವರೆಗೂ ಇದ್ದು, ನಂತರ ನಿನ್ನ ಮನೆಗೆ ಹೋಗಬೇಕು.

ಚನ್ನ:—ದಣಿಯೋರಪ್ಪಣೆ.

ನಂಜು:—ಹಾಗಾದರೆ ನಾಳೆ ಬೆಳಗಿನಿಂದ ಕೆಲಸಕ್ಕೆ ಬಂದುಬಿಡು.

ಚನ್ನ:—ಅಪ್ಪಣೆ ಬುದ್ಧೀ.

ನಂಜು:—ಸೂರಪ್ಪನವರೇ! ನಾಳೆಯಿಂದಲೇ ಬರಲಿ ಕೆಲಸಕ್ಕೇ!

ಸೂರ:—ಆಗಬಹುದು. ಇನ್ನು ನಾನು ಹೊರಡುತ್ತೇನೆ.

ನಂಜು:—(ಮೇಲೇಳಲು ಯತ್ನಿಸುತ್ತಾ) ಆ ನೀವು ಹೇಳಿದ ವಿಚಾರ ನಿಮ್ಮ ನಮ್ಮಲ್ಲೀ ಇರಲೀಂತ....

ಸೂರ:—ಯಾವುದು?....ನಾನು ನಿಮಗೆ ಕೊಡಬೇಕಾದ ಎಂಟು ನೂರು ರೂಪಾಯಿ ವಿಚಾರವೇ?

ನಂಜು:—(ಬೆಪ್ಪಾಗಿ) ಹೂಂ! ಹೂಂ!

ಸೂರ:—ನೀವು ಹೇಳಬೇಕಾದ್ದೇ ಇಲ್ಲ..........ನಾನು ಬರುತೇನೆ. ನಮಸ್ಕಾರ.

ನಂಜು:—ನಮಸ್ಕಾರ.

ಚನ್ನ:—(ಬಗ್ಗಿ ನಮಸ್ಕರಿಸಿ) ಪಾದಕ್ಕೆ ಬಿದ್ದೆ ಬುದ್ದೀ?

ನಂಜು:—ಹೋಗಿ ಬಾಪ್ಪಾ.

(ಸೂರಪ್ಪನೂ, ಹಿಂದೆ ಕುಂಟುತ್ತಾ ಚನ್ನಯ್ಯನೂ ನಿಷ್ಕ್ರಮಿಸುವರು. ಬಾಗಿಲು ಹಾಕಿಕೊಂಡು ನಂಜುಂಡಯ್ಯನು ಹಿಂದಿರುಗುವನು. ಒಳಬಾಗಿಲು ಬಳಿ ಸಾವಿತ್ರಮ್ಮನು ಹಸನ್ಮುಖಿಯಾಗಿ ನಿಂತಿರುವಳು.)

ನಂಜು:—ಏನೇ? ನಡೆದದ್ದನ್ನೆಲ್ಲಾ ಕೇಳುತಾ ನಿಂತಿದ್ದೀಯೋನೇ?

ಸಾವಿ:—ಇಲ್ಲಾಂದ್ರೆ. ಈಗ ಒಂದು ನಿಮಿಷದ ಕೆಳಗೆ ಬಿಸಿ ನೀರು ತರೋಣೇಂತ ಕೇಳೋಣಾಂತ ಬಾಗಿಲು ಹತ್ತಿರ ಬಂದೆ.. ನೀವು ಆ.... ಆಳನ್ನ ಬರಹೇಳುತ್ತಿದ್ದಿರಲ್ಲಾ....

ನಂಜು:—ಅವನು ಬಂದರೆ ನಿನಗೆ ಸಂತೋಷ ಅಲ್ಲವೇ ?

ಸಾವಿ:—(ಬೆದರಿ) ಏನೂಂದ್ರೇ ?

ನಂಜು:—ಆಳು ಬಂದರೆ—ನಿನಗೆ ಕೆಲಸ ಕಡಿಮೆಯಾಗುತ್ತೇಂತ —ಸಂತೋಷ ನಿನಗೇ—ಸೋಮಾರೀಗೇ - ಅಲ್ಲವೇನೇ ?

ಸಾವಿ:—(ಕತ್ತನ್ನು ತಗ್ಗಿಸಿ) ಹೂಂ !

ನಂಜು:—ಹೋಗಿ ನೀರು ತಗೊಂಡು ಬಾ ! ಆಮೇಲೆ ನಿಂತು ಕೊಂಡು ಹೂಂಗುಟ್ಟುವೇ. (ಸಾವಿತ್ರಮ್ಮನು ಒಳಕ್ಕೆ ಹೋಗುವಳು. ನಂಜುಂಡಯ್ಯನು ಕುರ್ಚಿಯ ಮೇಲೆ ಕೂಡುವನು) ಎಂಟು ನೂರು ರೂಪಾಯಿ ! ಸೂರಪ್ಪ....ಹೂಂ !! (ಸೂರನ್ನು ನೋಡುತ್ತಾ ಇರುವನು)

ಪ್ರವೇಶ ಆರು

(ದೇವಸ್ಥಾನದ ಮುಗ್ಗಲು ಕೈದೋಟ. ಸಂಜೆ ಆರು ಗಂಟೆಯ ಸಮಯ. ಸೂರಪ್ಪ, ಚನ್ನಯ್ಯನ ವೇಷದಲ್ಲಿ ಲಿಂಗಪ್ಪಯ್ಯ ಮತ್ತು ಸಾವಿತ್ರಮ್ಮನು ಮಾತನಾಡುತ್ತಾ ನಿಂತಿರುವರು.)

ಸಾವಿ:—ನಿಮ್ಮ ವೇಷದಿಂದ ನಿಮಗೇನೂ ತೊಂದರೆಯಾಗಲಾರದೂಂತ ತಿಳಕೊಂಡು ಆ ದಿನ 'ಹೂಂ' ಅಂದೆ ಮಾವಯ್ಯಾ ! ಆದರೆ ಈಗ ನೀವು ಇದನ್ನ ದಯವಿಟ್ಟು ತೆಗೆದುಬಿಡಬೇಕು.

ಸೂರ:—ಹಾಗೇ ಮಾಡಿಬಿಡಿ ಲಿಂಗಪ್ಪಯ್ಯನವರೇ.

ಲಿಂಗ:— ಇಲ್ಲಾ ಸೂರಪ್ಪಾ; ಸುಂದರೂ ಬರೋವರೆಗೆ ಈ ವೇಷ ತೆಗೀಲಾರೆ, ಆದರಿಂದ ನನಗೆ ಬೇಕಾದ್ದು ಕಷ್ಟವಾಗಲಿ.

ಸೂರ:— ಸುಂದರೂ ನಾಳಿದ್ದಾದರೂ ಬಂದೇಬರಬೇಕು.

ಲಿಂಗ:— ಇನ್ನು ಅಷ್ಟರಲ್ಲಿ ಆಗುವ ಕಷ್ಟವೇನು?

ಸಾವಿ:— ನಿಮ್ಮನ್ನ ಹೀನಾಮಾನ ಬೈಯುವದಕ್ಕೆ ಷುರುಮಾಡಿದಾಗ ನಾನು ಈ ಕಿವಿಗಳಿಂದ ಆ ಮಾತುಗಳನ್ನು ಹ್ಯಾಗೆ ಕೇಳಲಿ ಮಾವಯ್ಯಾ!

ಲಿಂಗ:— ನೋಡು ಸಾವಿತ್ರಮ್ಮಾ! ನಂಜು ಬೈಯುವದು ಅವನ ಮನೆ ಆಳು ಚನ್ನಯ್ಯನ್ನೇ ಹೊರತೂ, ಅವರಪ್ಪ ಲಿಂಗಪ್ಪಯ್ಯನ್ನಲ್ಲ. ಈಚೆಗೆ ಸೂರಪ್ಪಾ, ನಾನು ಅಲ್ಲಿ ಆಳುತನಕ್ಕೆ ಸೇರಿದ ಈ ನಾಲ್ಕಾರು ದಿನಗಳಲ್ಲಿ ನಂಜು ಎಷ್ಟು ಬದಲಾಯಿಸಿದಾನೇ ಅಂತೀಯಾ!!

ಸೂರ:— ಬದಲಾಯಿಸಿದಾನೆ, ನಿಮ್ಮ ಮಗ ಒಳ್ಳೇ ಸಾಧುವಾಗಿ ಬಿಟ್ಟಿದಾನೆ ಅಂತ ನೀವು ಹೊಗಳಿಕೊಳ್ಳುತೀರ. ಹೀನಾಮಾನಾ ಬೈತಾರೇಂತ ಸಾವಿತ್ರಮ್ಮ ಹೇಳುತಾಳೆ. ನಾನು ಯಾವದನ್ನ ನಂಬಲಿ?

ಲಿಂಗ:— ಎರಡನ್ನೂ ನಂಬು; ನಾನು ಹೇಳೋದು ಸುಂದರೂ ವಿಚಾರದಲ್ಲಿ, ಸಾವಿತ್ರಿಯ ವಿಚಾರದಲ್ಲಿ, ನನ್ನ ವಿಚಾರದಲ್ಲಿ— ಅಂದರೇ ಲಿಂಗಪ್ಪಯ್ಯನ ವಿಚಾರದಲ್ಲಿ ಮಮತೆ ಕಾಣುತಾ ಇದೆ. ಅದನ್ನ ತೋರ್ಪಡಿಸೋಲ್ಲ— ಅಷ್ಟೇ. ಆದರೇ, ನನ್ನ ಈ ವೇಷದ, ಅಂದರೆ ಚನ್ನಯ್ಯನ ವಿಚಾರದಲ್ಲಿ ಅವನಿಗೆ ಬಹಳ ರೇಗಿದೆ.

ಸೂರ:— ಅದು ಯಾಕೇ?

ಲಿಂಗ:— ಯಾಕೇನು? ಸ್ವಭಾವಿಕವಾಗಿಯೇ. ಆದುಗೆಯ ಮನೆ ಒಂದು ಬಿಟ್ಟು, ಮಿಕ್ಕ ಕೋಣೆ, ಹಜಾರ, ಕೈಸಾಲೆ, ಪಡಸಾಲೇಲೆಲ್ಲಾ ಸರಾಗವಾಗಿ ಓಡಾಡಿಕೊಂಡು, ಎಲ್ಲಾ ಸಾಮಾನು ಸರಂಜಾಮುನ ಮುಟ್ಟಿ, ಮಾಡಿ, ಅವನ ಹಾಸಿಗೆ ಹಾಸಿ, ಕೈಕಾಲು ಒತ್ತಿ, ಔಷಧಿ ಪಥ್ಯ ನೋಡಿಕೊಂಡು, ಎಲ್ಲಾ ಮಾಡುತೇನೆ. ಅದಕ್ಕೆ ಪ್ರಸನ್ನವಾಗೇನೊ ಇದಾನೆ....

ಸೂರ:—ಮತ್ತೇ ?

ಲಿಂಗ: ನಾನು ಒಂದು ದಿನ ಸಾವಿತ್ರಮ್ಮನ ಸಂಗಡ. ಮರೆತು ಪಿಸುಗುಟ್ಟುತಾ ಇದ್ದೆ. ಇದನ್ನ ಬಾಗಿಲ ಹಿಂದಿನಿಂದ ನೋಡಿಬಿಟ್ಟ. ಅದರಿಂದ ಸಿಟ್ಟಾಗಿ ಸ್ವಲ್ಪ ಬೈದು ಕೂಗಾಡಿದ. ಅದಕ್ಕೂ ನಾನೇನೋ ಸರಿಯಾಗಿರೋ ಹಾಗೆ ಕಾರಣ ವಿವರಿಸಿ ಹೇಳಿದೆ. ಒಪ್ಪಿಕೊಂಡು ಸುಮ್ಮನಾದಾ ಅಂತ ಅನ್ನೂ.

ಸೂರ:—ಏನು ಹೇಳಿದಿರಿ?

ಲಿಂಗ:—ಅವನು ಹೊರಗೆ ಬಂದು ರೇಗಿ, ಬಾಯಿಗೆ ಬಂದ ಹಾಗೆ ಬೈದು 'ಏನೋ ಅದು ನಿನ್ನ ಪಿತೂರಿ?' ಅಂತ ಗರ್ಜಿಸಿದ. ನಾನು ಶಾಂತವಾಗಿದ್ದರೂ ಸ್ವಲ್ಪ ಬೆದರಿದವನಂತೆ ನಟಿಸಿ, 'ಬುದ್ಧೀ! ನಮ್ಮ ಮನ್ಯಾಗೆ ನೆನ್ನೆಯಿಂದ ಒಂದು ಕಾಳು ಕೂಡ ರಾಗಿ ಇರಲಿಲ್ಲ; ಮಕ್ಕಳು ಮರಿ ಉಪಾಸ; ಅದಕೋಸ್ಕರ ದಯಮಾಡಿ ಒಂದು ಅರ್ದ ಸೇರು ನುಚ್ಚು ಕೊಡಿಸಬೇಕೂಂತ ಬೇಡಿಕೋತಾ ಇದ್ದೆ' ಅಂದೆ.

ಸೂರ:—ಆಮೇಲೆ ?

ಲಿಂಗ:—'ಅದಕ್ಕೆ ಅಮ್ಮಾ ಅವರೇನಂದರೂ?' ಅಂದ. 'ತಮ್ಮ ಪಾದದಲ್ಲೇ ಕೇಳಿಕೋಪ್ಪ; ಮನೇಲಿ ನುಚ್ಚೇನೂ ಇಲ್ಲ ಅಂದರೂ' ಅಂದೆ ಅಷ್ಟು ಹೊತ್ತಿಗೆ ಕಣ್ಣಲ್ಲಿ ಒಂದು ತೊಟ್ಟು ನೀರು ಬಂದಿತು ನನಗೆ. ಅದನ್ನ ನೋಡಿ ಅವನಿಗೆ ಮರುಕ ಹುಟ್ಟಿತು.

ಸೂರ:—ಆಮೇಲೆ?

ಲಿಂಗ:—ಸಾವಿತ್ರಮ್ಮನಿಗೆ ಹೇಳಿ ಒಂದು ಸೇರು ಅಕ್ಕೀನೇ ಕೊಡಿಸಿದ.

ಸೂರ: —ಆಮೇಲೆ?

ಲಿಂಗ:— ಒಳ್ಳೆ ಆಮೇಲಾಯಿತಲ್ಲಾ !....ಆಮೇಲೆ ಸಾವಿತ್ರಮ್ಮ ಕಟ್ಟಿಕೊಟ್ಟ ಅಕ್ಕಿ ತಗೊಂಡು ಹೋಗಿ, ಸೂರಪ್ಪನ ಹೆಂಡತಿಯ ಕೈಗೆ ಕೊಟ್ಟೆ.

ಸೂರ:—ಅದು ಯಾಕೇ?

ಲಿಂಗ:—ಮತ್ತೇನು ಮಾಡಲಿ ಅದನ್ನ? ಸೂರಪ್ಪನ ಮನೆ ತಾನೆ ನನ್ನ ಮನೆ?

ಸೂರ:—(ನಕ್ಕು) ಚೆನ್ನಾಗಿ ನಾಟಕ ಆಡುತೀರಿ ಲಿಂಗಪ್ಪಯ್ಯ ನವರೇ! ಆಮೇಲೆ ಮತ್ತೆ ನಂಜುಂಡಯ್ಯ ರೇಗಿಲ್ಲವೋ ನಿಮ್ಮ ಮೇಲೆ?

ಲಿಂಗ:—ಅವನ ಸ್ವಭಾವಾನೇ ರೇಗೋದು; ಅಂದಮೇಲೆ ಅವನ ರೇಗಾಟಕ್ಕೆ ಹೆಚ್ಚು ಬೆಲೆ ಕೊಡಬಾರದು.

ಸಾವಿ:—ಅದು ಹ್ಯಾಗಾಗುತ್ತೆ ಮಾವಯ್ಯಾ? ನಿಮ್ಮನ್ನ ಕತ್ತೆ, ಮೂರ್ಖ, ಮುಟ್ಠಾಳ ಇಂದ ಮೊದಲು ಮಾಡಿಕೊಂಡು ಅಪ್ಪ ತಾತ ನ್ನೆಲ್ಲಾ ಸೇರಿಸಿ ಬೈಯುತಾ ಇದ್ದರೆ ಹ್ಯಾಗೆ ಕೇಳುತಿರೋದಿಕ್ಕಾಗತ್ತೆ ಮಾವಯ್ಯಾ?

ಲಿಂಗ:—ನಾನು ಲಿಂಗಪ್ಪಯ್ಯ—ಅವರ ಅಪ್ಪ—ಅಂಬೋದನ್ನ ತಿಳಿದು ಬೈದರೆ ನಿನ್ನ ಮನಸ್ಸಿಗೆ ವ್ಯಥೆಯಾಗಬೇಕು. ಅವನು ಬೈಯ್ಯು ವದು ಆಳನ್ನ—ಚನ್ನಯ್ಯನ್ನ ತಾನೇ!

ಸಾವಿ:—ಅದೇನೋ ಮಾವಯ್ಯಾ! ನನಗೆ ಹಾಗೆ ತಿಳಕೊಳ್ಳೋಕೆ ಆಗೊಲ್ಲ. ಇನ್ನೊಂದು ಸಲ ಅವರು ರೇಗಿ ಏನಾದರೂ ನನ್ನೆದುರಿಗೆ ನಿಮ್ಮನ್ನ ಬೈದರೆ ನಾನು "ನೀವು ಮಾವಯ್ಯಾ" ಅಂತ ಅನ್ನೋದನ್ನ ಹೇಳಿಬಿಡುತೇನೆ.

ಲಿಂಗ:—ಹಾಗೆ ಮಾತ್ರ ಮಾಡಬೇಡ ತಾಯಿ. ಇನ್ನೆರಡು ದಿನ ಸುಮ್ಮನಿರು—ನನಗೋಸ್ಕರ. ಸುಂದರೂ ಬಂದ ಕೂಡಲೇ ನಾನೇ ಹೇಳಿ ಬಿಡತೇನೆ.

ಸಾವಿ:—ಸೂರಪ್ಪನವರೇ! ಸುಂದರು ನಾಳಿದ್ದು ಬರೋದು ಖಂಡಿ ತವೇ?

ಸೂರ:—ನಾಳಿದ್ದು ಬೆಳಗಿನ ರೈಲಿನಲ್ಲಿ ಹೊರಟು ಬರತೇನೇಂತ ಅವನೇ ಹೇಳಿ ಕಳುಹಿಸಿದಾನಲ್ಲಮ್ಮಾ!

ಸಾವಿ:—ಸುದ್ದಿ ತಿಳಿಸಿದವರು ಸರಿಯಾಗಿ ಹೇಳಿದರೋ ಇಲ್ಲವೋ ಅಂತ ..

ಸೂರ:—ರೈಲ್ವೆ ಗಾರ್ಡ್ ರಮಣಐಯ್ಯರ ಕೈಲೇ ಹೇಳಿಕಳುಹಿಸಿದಾನೆ. ಅವರು ಸರಿಯಾಗಿ ಹೇಳದಿರುತಾರೆಯೇ?

ಸಾವಿ:—ಏನೋ ನಿಮ್ಮೆಲ್ಲರ ಆಶೀರ್ವಾದದಿಂದ ಹುಡುಗ ಬಂದು ಮನೆ ಸೇರಿಕೊಂಡರೆ, ನಂಜುಂಡೇಶ್ವರನಿಗೆ ಪಂಚಾಮೃತ ಅಭಿಷೇಕ ಮಾಡಿಸುತೇನೆ ಸೂರಪ್ಪನವರೇ!

ಸೂರ:—ಖಂಡಿತ ಬರುತಾನಮ್ಮ; ಚಿಂತಿಸಬೇಡ.

ಸಾವಿ:—ಮಾವಯ್ಯನ ಅಜ್ಞಾತವಾಸ ಒಂದು ನಾನು ನೋಡಲಾರೆ ಸೂರಪ್ಪನವರೇ! ಮಧ್ಯಾನ್ಹದ ಹೊತ್ತು ಹಜಾರದ ಬಾಗಿಲ ಬಳಿ ಎಲೆ ಹಾಕಿ, ಮಣೆ ಕೂಡ ಇಲ್ಲದೆ ಅಲ್ಲಿ ಅವರನ್ನ ನೆಲದ ಮೇಲೆ ಕೂಡಿಸಿ, ಬಡಿಸೋದಕ್ಕೆ ಹೋದಾಗ ನನ್ನ ಕರಳು ಹಿಂಡಿದ ಹಾಗಾಗುತ್ತೆ. ನನ್ನ ಕೈಗಳು ಸೇದಿ ಹೋಗಬಾರದೇ ಅಂತ ಅನ್ನಿಸುತ್ತೆ ಸೂರಪ್ಪ. ಯಾವ ಜನ್ಮದಲ್ಲಿ ಏನು ಪಾಪ ಮಾಡಿಯೋ ಈ ಜನ್ಮದಲ್ಲಿ ಇಷ್ಟು ಕಾರ್ಪಣ್ಯ ಕೊಟ್ಟ ದೇವರು: ತವರು ಮನೇಲಿ ಹುಟ್ಟಿದ ವರುಷ ತಾಯೀ ನುಂಗಿ, ಮಾವನ ಮನೆಗೆ ಬಂದರೆ ಕಣ್ಣೊರಸಿ ಸಾಕೋ ಅತ್ತೇನ ಪಡೀದ ದೌರ್ಭಾಗ್ಯ ನನ್ನ ಹಣೇಲಿ ಬರೀತು. ಇರೋ ಈ ಒಂದು ಪುಣ್ಯ-ಮಾವಯ್ಯನವರ ಸೇವೆ-ಅದಕ್ಕೂ ಈ ಭಂಗ. ಅಡುಗೆಯ ಮನೇಲಿ ದೇವರ ಜಗಲಿ ಮುಂದೆ ಮಣೆ ಹಾಕಿ, ಮಾಧ್ಯಾನ್ಹಿಕಕ್ಕೆ ತಂಬಿಗೆ ಪಂಚಪಾತ್ರೆ ಉದ್ಧರಣೆ ಅರ್ಘ್ಯಪಾತ್ರೆ ಇಟ್ಟು, ಮುಗುಟ ಮಡಿಸಿ ಮಣೇ ಮೇಲಿಟ್ಟು, ಇತ್ತಕಡೆ ಎಲೆ ಹಾಕಿ. ಮಾಧ್ಯಾನ್ಹಿಕವಾಗುತಿದ್ದ ಹಾಗೆ ಬಡಿಸಿ. ಊಟವಾದ ಮೇಲೆ ಅಡಿಕೆಲೇ ತಟ್ಟೆ, ಹುರಿಗಾಳು ತಟ್ಟೆ, ಕೊಬ್ಬರಿ ಬೆಲ್ಲ ಮೇಜಿನ ಮೇಲಿ ತಂದಿಟ್ಟು ಸೇವೆ ಮಾಡುತಿದ್ದ ಈ ಕೈಗಳಲ್ಲಿ ಈಗ ಬೀದಿ ಬಾಗಿಲಿನಲ್ಲಿ ಎಲೆ ಹಾಕಿ, ಆ ನೆಲದ ಮೇಲೆ ಕೂಡಿಸಿ ಬಡಿಸೋದೂಂದರೆ....ನನ್ನ ಕೈಲಿ....(ಗದ್ಗದಿತಳಾಗಿ ಬಿಕ್ಕುವಳು)

ಸೂರ:—ಸಾವಿತ್ರಮ್ಮ ಹೇಳೋದು ನ್ಯಾಯ ಲಿಂಗಪ್ಪಯ್ಯನವರೇ! ಆಕೆಯ ಸಂಕಟದ ಇಕ್ಕಟ್ಟಿನ ಕಡೆಗೆ ನೀವು ಸ್ವಲ್ಪ ಗಮನ ಕೊಡಬೇಕು—ಪಾಪ!

ಲಿಂಗ: —ನೋಡು ತಾಯಿ ಸಾವಿತ್ರವ್ಮ್ಮಾ! ನೀನು ಹೊರಗಡೆ ವರಾಂಡಾದಲ್ಲಿ ಎಲೆ ಹಾಕಿ ಕೂಡಿಸಿ ಎಡಗೈಲಿ ಬಡಿಸಿದರೂ ನನಗೆ ಸಮ್ಮತವೇ. ನೀನು ವಿಶ್ವಾಸದಿಂದ ಎಲ್ಲಿ ಬಡಿಸಿದರೆ ತಾನೆ ಏನು? ನೀನು ಮನಸ್ಸಿಗೆ ಯಾವ ವಿಧವಾದ ಸಂಕೋಚಾನೂ—ವ್ಯಥೇನೂ ತಂದುಕೋಬೇಡ. ಇನ್ನೊಂದೆರಡುದಿನ ಸುಧಾರಿಸಿಬಿಡು ತಾಯೀ; ದೇವರು ಎಲ್ಲಾ ಒಳ್ಳೇದು ಮಾಡುತಾನೆ.

ಸಾವಿ:—(ಕಣ್ಣೊರಸಿಕೊಂಡು ಕತ್ತೆತ್ತಿ) ನನಗೋಸ್ಕರ ನಿಮ್ಮ ವೇಷ ಬಿಟ್ಟುಬಿಡಿ ಮಾವಯ್ಯಾ! ಹೇಗೂ ನಾಳಿದ್ದು ಸುಂದರೂ ಬಂದುಬಿಡುತಾನೆ.

ಸೂರ:—ಹೌದು ಸ್ವಾಮೀ! ಈಗೇ "ತಂದೇಗೆ ತಾನು ಮಾಡಿದ್ದು ತಪ್ಪು"ಂತ ನಂಜುಂಡಯ್ಯನಿಗೂ ಮನವರಿಕೆಯಾಗಿದೆ. ನೀವು ಮನೇಲಿ ಇದ್ದೀರಿ ಅನ್ನೋದನ್ನ ತಿಳಿದು ನಿಜವಾಗಿಯೂ ಸಂತೋಷವಾಗುತ್ತೆ ಆತನಿಗೆ. ಸಾವಿತ್ರಮ್ಮನ ಮನಸ್ಸಿಗೂ ನೆಮ್ಮದಿಯಾಗುತ್ತೆ.

ಲಿಂಗ:—ನೋಡು ಸೂರಪ್ಪ! ವಿಚಾರ ಹೀಗಿದೆ—ಸುಂದರೂನ ಕರಕೊಂಡು ಬಂದು ನಿನಗೊಪ್ಪಿಸಿದ ಹೊರತೂ ನಾನು ಬರೊದಿಲ್ಲಾಂತ ಅವನಿಗೆ ಹೇಳಿದೀನಿ. ಅಲ್ಲದೇ ಈಗಾಗಲೇ ನಾಲ್ಕಾರು ದಿನಗಳು ಕಳೆದಾಯಿತು. ಇನ್ನೊಂದೆರಡು ದಿನ ಕಳೆದರೆ ಎಲ್ಲಾ ಸರಿಹೋಗುತ್ತೆ.

ಸೂರ:—ಹಾಗಾದರೆ ಇನ್ನೊಂದು ಕೆಲಸಮಾಡೀ!

ಲಿಂಗ:—ಏನದು?

ಸೂರ:—ಮಧ್ಯಾಹ್ನದ ಊಟಾನೂ ನಮ್ಮ ಮನೇಲೇ ಮಾಡಿಬಿಡಿ.

ಲಿಂಗ;—ಸರಿ! ನಾಳೆಯಿಂದ ಹಾಗೇ ಮಾಡುತೇನೆ.

ಸಾವಿ:—ಮಾವಯ್ಯಾ!

ಲಿಂಗ:—ಏನು ತಾಯೀ?

ಸಾವಿ:—ಬೇಡಿ. ನಾನು ನಿಮಗೆ ಅಲ್ಲೇ ಬಡಿಸುತೇನೆ. ನನ್ನ ಸಂಕಟಕ್ಕೋಸ್ಕರ ನಿಮ್ಮ ಸಂಕಲ್ಪಕ್ಕೆ ಭಂಗ ತರೋ ಪಾಪ ಯಾಕೆ ಮಾಡಬೇಕು. ನಿಮ್ಮ ಇಷ್ಟದಂತೆಯೇ ಆಗಲಿ.

ಸೂರ:—ಅಂತೂ, ಲಿಂಗಪ್ಪಯ್ಯನವರೇ! ನೀವೂ ಸ್ವಲ್ಪ ಹಟವಾದಿಗಳೇ!....

ಲಿಂಗ:—ಹಾಗಲ್ಲ ಸೂರಪ್ಪ....ಆಗಲೀತಾಯೀ! ಇನ್ನೆರಡು ದಿನ. ಆಚೆ ನಾಳಿದ್ದಿಂದ ಎಲ್ಲಾ ಸರಿಹೋಗುತ್ತೆ.

ಸಾವಿ:—ಆಗಲಿ ಮಾವಯ್ಯ!

ಲಿಂಗ:—ನೀನು ನಡೀ ಸಾವಿತ್ರಮ್ಮ ಮನೆಗೆ. ನಾನು ಅಪ್ಪಣ್ಣನ ಷಾಪ್‌ಗೆ ಹೋಗಿ ಔಷಧಿ ತರುತೇನೆ.

ಸೂರ:—ಅವನಿಗೆ ನಿಮ್ಮ ಗುರುತಾಗಲಿಲ್ಲವೇ—?

ಲಿಂಗ:—ಇಲ್ಲ; ಹೇಗಾಗಬೇಕು? ಕೇಳಿದ ಪ್ರಶ್ನೆಗಳಿಗೆ ಚನ್ನಯ್ಯನ ಭಾಷೇಲಿ ಒಂದು ಮಾತು ಜವಾಬು; ಹೊರಬಾಗಿಲಿನಲ್ಲೇ ನಿಂತಿರೋದು; ಕೊಡೋ ಔಷಧಿ ತರೋದು.

ಸೂರ:—ಒಳ್ಳೇ ನಾಟಕ ಕಟ್ಟಿದಿರಿ—ಬಿಡೀ....

ಲಿಂಗ:—ನೀನು ಸ್ವಲ್ಪ ಸಾವಿತ್ರಮ್ಮನ ಜೊತೇಲಿ ಮನೆಯವರೆಗೂ ಹೋಗಿಬರುತೀಯಾ?

ಸೂರ:—ಆಗಲೀ ಸ್ವಾಮೀ!

ಸಾವಿ:—ಬೇಗ ಬಂದುಬಿಡಿ ಮಾವಯ್ಯಾ!

ಲಿಂಗ:—ನೀವು ಹೋಗಿ ತಲುಪುವ ವೇಳೆಗೆ ಬಂದಿರುತೇನಮ್ಮ.

(ಸೂರಪ್ಪ—ಸಾವಿತ್ರಮ್ಮನು ಮನೆಯ ಕಡೆಗೂ, ಲಿಂಗಪ್ಪಯ್ಯನು ಷಾಪಿನ ಕಡೆಗೂ ಹೊರಡುವರು.)

ಪ್ರವೇಶ ಪಳು

.

[ನಂಜುಂಡಯ್ಯನ ವ ನೆಯ ಹಜಾರ. ಹಿಂದಿನಂತೆ ಆರಾಮು ಕುರ್ಚಿಯ ಮೇಲೆ ನಂಜುಂಡಯ್ಯನು ಷರ್ಟ್ ಸ್ವೆಟರ್‌ಗಳನ್ನು ಧರಿಸಿ, ಗೆಲುವುಖದಿಂದ ಕುಳಿತಿದ್ದಾನೆ. ಮಧ್ಯಾಹ್ನ ಎರಡು ಘಂಟೆ ಸಮಯ.]

ನಂಜು:—(ಹಿಂದಕ್ಕೆ ತಿರುಗಿ) ಸಾವಿತ್ರೀ ! ಸಾವಿತ್ರಿ ! ಲೇ ಸಾತೀ !

ಸಾವಿ: - (ಒಳಬಾಗಿಲಿನಿಂದ ಪ್ರವೇಶಿಸಿ) ಕೂಗಿದಿರಾಂದರೇ ?

ನಂಜು:—ಕೂಗಲಿಲ್ಲ ಕಿರಿಚಿದೆ. ಏನು ಮಾಡುತಿದ್ದೆ ಒಳಗೇ?

ಸಾವಿ:—ದೇವರಿಗೆ ದೀಪ ಹಚ್ಚುತಿದ್ದೆ.

ನಂಜು:—ಇನ್ನೂ ಊಟ ಮಾಡಲಿಲ್ಲವೇನೇ ?

ಸಾವಿ: — ಈಗ ಮಾಡುತೇನೆ.

ನಂಜು:—ಇಷ್ಟು ಹೊತ್ತು ಯಾಕೇ?

ಸಾವಿ:— ಲಲಿತಾ ಸಹಸ್ರನಾಮ, ಅಷ್ಟೋತ್ತರ ಹೇಳುತಾ ಇದ್ದೇ; ಸ್ವಲ್ಪ ತಡವಾಯಿತು.

ನಂಜು:—ಇದೇನು ಇವತ್ತು ಇಷ್ಟೊಂದು ಪುನಸ್ಕಾರ ದೇವರಿಗೇ?

ಸಾವಿ: —ಏನೂ ಇಲ್ಲ.

ನಂಜು:— ಏನು ಹೇಳೇ ?

ಸಾವಿ:—ನೀವು ಸ್ವಲ್ಪ ಹುಷಾರಾದರೆ ಸಹಸ್ರನಾಮ ಜಪ ಮಾಡುತೇನೆ ಅಂತ ಮೊನ್ನೆ ಹರಸಿಕೊಂಡಿದ್ದೆ. ಅದಕ್ಕೋಸ್ಕರ ..

ನಂಜು:— ಸ್ವಲ್ಪ ಹುಷಾರಾದರೆ ತಾನೇ ?

ಸಾವಿ: —ಅಲ್ಲಾಂದರೆ?....

ನಂಜು:— ಹಾಗಾದರೆ ನಾನೀಗ ಪೂರ್ತಿ ಹುಷಾರಾಗಿಲ್ಲವೇನು?

ಸಾವಿ:—ಪೂರ್ತಿ ಹುಷಾರಾಗಿದೀರೀಂದರೆ. ದೇವರು ಹೀಗೇ ಆರೋಗ್ಯವಾಗಿಟ್ಟುಬಿಟ್ಟಿದ್ದರೆ ಸಾಕು.

ನಂಜು:—ಯಾಕೇ? ನಿನ್ನ ಬೈದೂ ಅಂದೂ ಹೊಡೆಯೋದಕ್ಕೋ?

ಸಾವಿ:—ನೀವು ನನ್ನ ಎಷ್ಟು ಬೈದರೂ, ಎಷ್ಟು ಹೊಡೆದರೂ ಚಿಂತೆಯಿಲ್ಲ. ನಾನು ಬದುಕಿರೋ ವರೆಗೂ ನೀವು ಆರೋಗ್ಯವಾಗಿ ಓಡಾಡಿ ಕೊಂಡಿದ್ದರೆ ಸಾಕು.

ನಂಜು:—ಆಮೇಲೆ?

ಸಾವಿ:—ಆಮೇಲೂವೆ.

ನಂಜು:—ನೋಡಿದೆಯಾ ಪತಿಭಕ್ತಿಯ ಪರಮಾವಧೀನ....ಅಲ್ಲವೇ ಆ ಚನ್ನನಿಗೆ ಬಡಿಸಿಬಿಟ್ಟು ಒಳಗೆ ಹೋಗಿ ಪೂಜೆಗೆ ಷುರುಮಾಡಿದೆಯಾ?

ಸಾವಿ:—ಹೌದೂಂದರೆ.

ನಂಜು:—ಹಾಗಾದರೆ ಮೈಲಿಗೇಲೇ ನಿನ್ನ ಜಪ ನಡೀತಾ ಇದೆಯೊ?

ಸಾವಿ:—ಇಲ್ಲಾಂದರೇ. ಮತ್ತೆ ಮಡಿ ಉಟ್ಟು ಪೂಜೆಗೆ ಆರಂಭಿಸಿದೆ.

ನಂಜು:—ಚನ್ನಾಗಿದೆ. ಚನ್ನಾಗಿದೆ... ಅಂದ ಹಾಗೆ ಇಷ್ಟು ಹೊತ್ತಾದರೂ ಬರಲಿಲ್ಲವಲ್ಲ?

ಸಾವಿ:—(ಕಾತುರಳಾಗಿ) ಯಾರೂಂದರೇ?

ನಂಜು:—ಇನ್ನು ಯಾರೇ? ಆ ಚನ್ನ ಸೂಳೇಮಗ.

ಸಾವಿ:—(ಕಿವಿಯಮೇಲೆ ಕೈಯಿಟ್ಟುಕೊಂಡು) ಬೈಬೇಡೀಂದರೆ ಆತ ನನ್ನ . ನಿಮ್ಮ ದಮ್ಮಯ್ಯ.

ನಂಜು:—ಷುರುಮಾಡಿದೆ ನಿನ್ನ ದುರ್ವಿದ್ಯಾನ. ಈ ಪ್ರಪಂಚದಲ್ಲಿ ನಾನೊಬ್ಬನೇ ಅಂತ ಕಾಣುತ್ತೆ ಇನ್ನೊಬ್ಬರಿಗೆ ಉಪದೇಶ ಮಾಡದೇ ಇರುವವನು ...ಅಲ್ಲವೇ ! ನಾನು ಪೂರ್ತಿ ಹುಷಾರಾಗಿದೇನೇಂತ ತಿಳಿದೂ ನಿನಗೆ ಇಷ್ಟು ಧೈರ್ಯ ಬಂತೇ?

ಸಾವಿ:—ನಾನು ಏನು ಹೇಳಲೀ ಅಂದರೆ .

ನಂಜು:—ಇಲ್ಲಿ ಕೇಳೇ ಅಂದರೆ! ನಾನು ಮಾಡೋ ಕೆಲಸಗಳಲ್ಲಿ, ಆಡೋ ಮಾತುಗಳಲ್ಲಿ, ಏನು ತಪ್ಪಿದ್ದರೂ ಅದು ನನ್ನ ಜವಾಬ್ದಾರೀ. ನೀವು ಯಾರೂ ಬಂದು ನನ್ನನ್ನ ತಿದ್ದಬೇಕಾದ್ದಿಲ್ಲ. ತಿಳೀತೇನೇ ?

ಸಾವಿ:— ತಿಳೀತೂಂದರೇ ?

ನಂಜು: – ಸಂತೋಷ. ನೀನು ಹಾಗಿದ್ದರೆ ನಾನೂ ನಿನ್ನ ಗದರಿಸಬೇಕಾದ್ದಿರಲಿಲ್ಲ. ತಿಳೀತೇನೇ?

ಸಾವಿ: – ತಿಳೀತೂಂದರೇ.

ನಂಜು:—ಆಂ. ಈಗ ಹೇಳು. ಆ ಚನ್ನ ಬಡ್ಡೀಮಗ ಇಷ್ಟು ಹೊತ್ತಾದರೂ ಯಾಕೆ ಬರಲಿಲ್ಲ? ಎಲ್ಲಿ ಭಂಗೀ ಹೊಡೀತಾ ಕೂತುಬಿಟ್ಟಿದಾನೊ ಕತ್ತೆ

ಸಾವಿ: -(ಕೈಗಳನ್ನು ಮುಚ್ಚಿಕೊಂಡು) ರಾಮ ರಾಮ !

ನಂಜು: ಯಾಕೇ ?

ಸಾವಿ:—ಯಾಕೂ ಇಲ್ಲ.

ನಂಜು:- -ಅದೇನು ನಿಮುಗೆಲ್ಲಾ ಆಳು-ಕಾಳುಗಳ ಮೇಲೆ ಅಷ್ಟೊಂದು ದಯಾ? ಏನು ನಾನೇ ನಿರ್ದಯೀ ರಾಕ್ಷಸನೇ ? (ಹೊರಗಡೆ ಬಾಗಿಲು ಬಳಿ 'ಬುದ್ಧೀ!' ಎಂಬ ಧ್ವನಿ) ಓಹೋ! ಬಂದನೇನೋ ಹೋಗಿ ನೋಡು.

(ಸಾವಿತ್ರಮ್ಮನು ಹೋಗಿ ಬಾಗಿಲು ತೆರೆಯುವಳು. ಬಲಗೈಲಿ ಲಕೋಟೆಯನ್ನೂ, ಎಡಗೈಲಿ ಮಾತ್ರೆಗಳ ಪೊಟ್ಟಣವನ್ನೂ, ತಲೆಯಮೇಲೆ ಸೊಪ್ಪಿನ ಗಂಟನ್ನೂ ಹೊತ್ತುಕೊಂಡು ಚನ್ನಯ್ಯನ ವೇಷದ ಲಿಂಗಪ್ಪಯ್ಯನು ಪ್ರವೇಶಿಸುವನು. ಸಾವಿತ್ರಮ್ಮನು ಗಂಟನ್ನಿಳಿಸಲೆಂದು ಮುಂದೆ ಹೋಗುವಳು)

ಚನ್ನ:—(ಕೂಡಲೆ) ದೂರ ಸರೀರಿ ತಾಯೀ! (ಸಾವಿತ್ರಮ್ಮನು ನೆಟ್ಟಗೆ ಹಿಂದೆ ಬರುವಳು)

ನಂಜು: –ಬಾಗಿಲು ಹಾಕಿಕೋ ಸಾವಿತ್ರೀ! (ಸಾವಿತ್ರಮ್ಮನು ಹೊರ ಬಾಗಿಲು ಹಾಕಿಕೊಂಡು ಬರುವಳು) ಏನಯ್ಯ ನಿನ್ನ ಅವಸ್ಥೆ? ಎಲ್ಲಿ ತೊಲಗಿ ಹೋಗಿದ್ದೆ ಇಷ್ಟು ಹೊತ್ತೂ ?

ಚನ್ನ:—(ಗಂಟುಗಳನ್ನೆಲ್ಲಾ ಇಳಿಸುತ್ತಾ) ಡಾಕಟ್ರು ಏಳಿದ್ರು ಬುದ್ಧಿ ... ತಮಗೆ ಇಷ್ಟ್ನ ಕ್ರಾಂತಿ ಸೊಪ್ಪು ತಂದು, ಬಸ್ತೆಸರು ಮಾಡಿ ಆಕಬೇಕೂಂತ. ಮಾರ್ಕೆಟ್ಟೆಲ್ಲಾ ಉಡುಕಿದ್ರೂ ಸೊಪ್ಪು ಸಿಗಲಿಲ್ಲ. ಆದಕ್ಕೋಸ್ಕರ ಅಳ್ಳಿಕಡೆ ಓಗಿ, ಒಲದಾಗಿಂದ ಸೊಪ್ಪು ಕಿತ್ತುಕೊಂಡು, ಅಂಗೇ ಪೋಸ್ಟ್ ಆಫೀಸ್ ತಾಕೆ ಓಗಿ, ಒಂದು ಕಾಗದ ಇತ್ತು; ಇಸುಗೊಂಡು, ಡಾಕಟ್ರು ತಾವ ಮುದ್ದು ತಗೊಂಡು ಬಂದೇ.

ನಂಜು:—ಡಾಕಟ್ರು ಹೇಳಿಬಿಟ್ರೂಂತ ನೀನು ಸೊಪ್ಪು ತರೋದಕ್ಕೆ ಹೊರಟುಬಿಟ್ಟೆಯೋ ಶಿಷ್ಯ ? ತಿನ್ನೋನು ನಾನೋ—ನೀನೋ ?

ಚನ್ನ:—ತಾವೇ ಬುದ್ಧೀ !

ನಂಜು:—ನನಗೆ ಬಂದು ಹೇಳಿ, 'ತರಲೇ'ಂತ ಕೇಳಲ್ಲವೇನೋ ನೀನು ಹೋಗಬೇಕಾಗಿದ್ದದ್ದು ?

ಚನ್ನ:—ಅವ್ವಾ ಅವರ ಕೂಟ ಏಳಿದ್ದೆ ಬುದ್ದೀ.

ನಂಜು:—ಈ ಮನೇಗೆ ಅವ್ವಾ ಅವರೋ ಯಜಮಾನರೂ?—ಇಲ್ಲ ಅಪ್ಪಾ ಅವರೋ ?

ಚನ್ನ:—ಈ ಸೊಪ್ಪು ತಮಗಿಷ್ಟಾಂತ ನಂಗೆ ಗೊತ್ತೂ; ಅದಕೋಸ್ಕರಾನೇ ತಂದೆ ಬುದ್ಧೀ !

ನಂಜು:—(ರೇಗಿ) ಅಲ್ಲವೋ ತಲೆಹರಟೇ ! ಬಂದ ಒಂದು ವಾರದೊಳಗೆ ನನ್ನ ಬೇಕು ಬೇಡಗಳೂ, ಇಷ್ಟ ಅನಿಷ್ಟಗಳೆನ್ನೆಲ್ಲಾ ತಿಳಿದುಕೊಂಡುಬಿಟ್ಟೆಯೇನೋ ರ್‍ಯಾಸ್ಕಲ್ !!

ಚನ್ನ:—ಬುದ್ದೀ ?

ನಂಜು:—ನ್ಯಾಯುವೇ! ಏಕಾಗಬಾರದು ? ನನ್ನ ವರೂಂತ ಮನೇಲಿ ಯಾರಾದರೂ ಇದ್ದರೆ ತಾನೇ ಮನೆಯ ವಿಚಾರಗಳು ಹೊರಗೆ ಹೋಗದಿರೋದಕ್ಕೆ. (ಸಾವಿತ್ರಮ್ಮನ ಕಡೆಗೆ ದುರುಗುಟ್ಟಿ ನೋಡುವನು. ಚನ್ನಯ್ಯನು ಲಕೋಟೆ, ಔಷಧಿ ಸೀಸೆಯನ್ನು ತಂದು ಮೇಜಿನ ಮೇಲಿಟ್ಟು ಹಿಂದಕ್ಕೆ ಹೋಗುವನು)

ಚನ್ನ:—ಸೂರಪ್ಪನೋರು ಇಂದೆ ನಮ್ಮೂರಿಂದ ಇಷ್ಟ್ನ ಕ್ರಾಂತಿ ಸೊಪ್ಪನ, ಮೂಟೆಗಟ್ಟಲೆ ನನ್ನ ಕೈಲೇ ತರಿಸುತಾ ಇದ್ದರು ಬುದ್ದೀ;

ಅವರೇ ಏಳೋರು ಗುಬ್ಬೀಲಿದ್ದಾಗ— ತಮ್ಮಯ್ಯಾ ಅವರು ಲಿಂಗಪ್ಪಯ್ಯ ನೋರಿಗೂ, ತವುಗೂವೇ ಈ ಸೊಪ್ಪು. ಕೆಸವೇ ದಂಟೂ ಎರಡೂ ಬೋ ಇಷ್ಟಾಂತ.

ನಂಜು:—(ಆಶ್ಚರ್ಯ ಸಮಾಧಾನಗಳಿಂದ) **ಸೂರಪ್ಪ** ಹೇಳುತಾ ಇದ್ದರೋ ?

ಚನ್ನ:— ಔದೂ ಬುದ್ದೀ! (ಸ್ವಲ್ಪಹೊತ್ತು ನೀರವ)

ನಂಜು:— ನಮ್ಮ ಅಯ್ಯಾ ಅವರನ್ನ ನೋಡಿದ್ದೆಯೋ ನೀನೂ ?

ಚನ್ನ:— ನೊಡಿದ್ದೀ ಬುದ್ದೀ ಸೂರಪ್ಪನೋರ ಕೂಟ.... ತಮ್ಮಂಗೆ ಅವರೂ ಬೋ ಒಳ್ಳೇ ಮನಸರೂ ಬುದ್ದೀ....

ನಂಜು:—(ಬೆಚ್ಚಿ) ಆಂ?....ಹೂಂ. ಹೂಂ !....

ಚನ್ನ:—ಅವರು ಯಾವತ್ತು ಬತ್ತಾರೆ ಬುದ್ದಿ ಇಲ್ಲಿಗೇ ?

ನಂಜು:—ಯಾರೂ ?

ಚನ್ನ:—ತಮ್ಮ ಅಯ್ಯಾ ಅವರೂ.

ನಂಜು:— ಎಲ್ಲಿಂದ ?

ಚನ್ನ:—ಅಳ್ಳೀಯಿಂದ.

ನಂಜು:—ನಿನಗೆ ಹೇಗೆ ಗೊತ್ತು ಅವರು ಹಳ್ಳೀಲಿರೋದು?

ಚನ್ನ:— (ಕ್ಷಣಕಾಲ ಕತ್ತನ್ನು ತಗ್ಗಿಸಿದ್ದು ತಟ್ಟನೆ ಕತ್ತೆತ್ತಿ) **ಕೂಗಿದಿರಾ** ಬುದ್ದೀ !

ನಂಜು:—(ರೇಗಿ) ಅಲ್ಲವೋ ಕತ್ತೇ ! ನಮ್ಮಯ್ಯ **ಹಳ್ಳಿಲಿದಾರೇ** ಅನ್ನೋದು ನಿನಗೆ ಹೇಗೆ ಗೊತ್ತೂಂತ ಕೇಳಿದರೇ ...

ಚನ್ನ:—ನಾನು ಇಲ್ಲಿಗೆ ಚಾಕರೀಗೆ ಬಂದ ದಿನವೇ ಸೂರಪ್ಪ ನೋರು ಏಳಿ ಕರಕೊಂಡು ಬಂದು 'ನೊಡೂ! ಲಿಂಗಪ್ಪಯ್ಯನೋರಿದ್ದಿದ್ದರೆ....ಬುದ್ದಿಯೋರನ್ನ ಎಷ್ಟು ಪಿರೀತಿಯಿಂದ ನೋಡಿಕೋತಿದ್ದರೋ, ಅದಕಿಂತ ಎಚ್ಚಾಗಿ ಬಕ್ತಿಯಿಂದ ನೀನು ಅವರ ಸೇವೆ ಮಾಡಿಕೊಂಡಿರ ಬೇಕೂ'ಂತ.

ನಂಜು:—(ಪೆಚ್ಚಾಗಿ) ಸರೀ ಸರೀ !

ಚನ್ನ:—ಯಾವಾಗ ಬತ್ತಾರೆ ಬುದ್ಧೀ ಅಯ್ಯಾ ಅವರು ?

ನಂಜು:—ಇಷ್ಟರಲ್ಲೇ ಬರ್ತಾರೆ; ಯಾವುದೋ ಜಮೀನಿನ ಕೆಲಸಕ್ಕೇ ಅಂತ ಹೋದರು. ಅವರು ಅತ್ತಕಡೆ ಹೋದರು,—ನಾನು ಇತ್ತಕಡೆ ಖಾಯಿಲೆ ಮಲಗಿಬಿಟ್ಟೆ.

ಚನ್ನ:—ತಮಗೆ ಮೈಗೆ ಉಸಾರಿಲ್ಲಾಂತ ಸುದ್ದಿ ಮುಟ್ಟಿದ್ದರೆ ಓಡಿ ಬಂದಿರೋರಲ್ಲವಾ ಬುದ್ಧೀ ?

ನಂಜು:—ಬರದೇ ?

ಚನ್ನ:—ಈಗಲಾದರೂ ಏಳಿ ಕಳಿಸಬವುದಲ್ಲ ಬುದ್ಧೀ !....

ನಂಜು:—ಈಗೇನು ಪರ್ವಾ ಇಲ್ಲ. ನಾನು ಹುಷಾರಾಗಿದೇನೆ. ಅಲ್ಲದೆ ಈಗ ಅವರು ಅಲ್ಲಿಗೆ ಹೋಗಿರೋ ಕೆಲಸ ಸಾವಿರಾರು ರೂಪಾಯಿ ಜಮೀನಿನ ವಿಚಾರದ್ದು. ಅದು ಮುಖ್ಯ ಆಗಬೇಕು. ಅದಾದ ಕೂಡಲೇ ಬಂದು ಬಿಡುತಾರೆ.

ಚನ್ನ:—ಅವರೆ ಬರ್ತಾರಾ ಬುದ್ಧೀ ?

ನಂಜು:—ಇದೇನೋ ನೀನು ಕೇಳುತಿರೋ ಪ್ರಶ್ನೆ ? ಅಲ್ಲಪ್ಪೋ ! ಅವರೇ ಬರ್ತಾರೋ ಇಲ್ಲಪ್ಪೋಂತ ಕೇಳುತಿದೀಯಲ್ಲ—ಏನು ಸಮಾಚಾರಾ? ಸೂರಪ್ಪ ನಿನಗಿನ್ನೇನಾದರೂ ಸುಳ್ಳುಪಳ್ಳು ಹೇಳಿದನೋ?

ಚನ್ನ:—ಇಲ್ಲ ಬುದ್ಧೀ—ನಾನೇ ಕೇಳಿದೆ. ಅಯ್ಯಾ ಅವರು ತಾವೇ ಬರ್ತಾರೋ, ಇಲ್ಲ ನಾನು ಇಲ್ಲಿಂದ ಓಗಿ ಕರೆತರಬೇಕೋ ಅಂತ....

ನಂಜು:—ಅಷ್ಟೇ ತಾನೇ! ನೀನೇನೂ ಕರೆತರಬೇಕಾದ್ದಿಲ್ಲ. ಅವರೇ ಬರ್ತಾರೆ. ಅವರಿಗೆ ಅವರ ಮನೆ ಅಡ್ರೆಸ್ ಗೊತ್ತಿಲ್ಲವೇ ? ಇಲ್ಲ ದಾರಿ ತಿಳೀದೋ ?....ಆ ದಾರದ ಗಂಟಿನಲ್ಲಿ ಏನು ತಂದಿದೀಯಾ ? ಕೆಸವೇ ದಂಟೋ ?

ಚನ್ನ:—(ಗಂಟನ್ನು ಬಿಚ್ಚುತ್ತಾ) ಕೆಸವೇ ದಂಟು ನಾಳೆ ತರ್ತೀನ್ರೀ ಬುದ್ಧೀ; ಇವು ತಮ್ಮ ಅಳೆ ಕೆರ ಒಂದು ಜೊತೆ; ಬೂಟಿಸ್ ಒಂದು ಜೊತೆ--ಅರಿದು ಓಗಿದ್ದುವು; ಇದನ್ನು ಮೊನ್ನೇನೆ ಮೋಚೀ ತಾವು, ರಿಪೇ

ರಿಗೆ ಕೊಟ್ಟಿದ್ದೆ. ಅವಕೆ ಪಾಲಿಸ್ ಆಕಿಸಿ ಇವತ್ತು ತಂದೆ—ತಾವೆಲ್ಲಾದರೂ ಒರಗೆ ಒಂಡತೀರೇನೋ ಅಂತ.

(ಸಾವಿತ್ರಮ್ಮನು ಇದನ್ನು ನೋಡುತ್ತಾ ಕಣ್ಣೀರು ತುಂಬಿ ಅಳುವನ್ನು ತಡೆಯಲಾರದೆ ಒಳಕ್ಕೆ ಹೊರಟು ಹೋಗುವಳು.)

ನಂಜು:— ಭೇಷ್! ಭೇಷ್! ನೀನು ನಿಜವಾಗಿಯೂ ಸೂರಪ್ಪ ಹೇಳಿದ ಹಾಗೇ ಇದೀಯಾ?.......ಹೌದೂ! ನಿನಗಿದಕ್ಕೆ ದುಡ್ಡು ಕೊಟ್ಟೋರು ಯಾರು? ಅಮ್ಮಾ ಅವರ ಹತ್ತಿರ ಇಸಗೊಂಡೆಯೋ?

ಚನ್ನ:—ಇಲ್ಲ ಬುದ್ಧೀ.

ನಂಜು:—ಮತ್ತೇ?

ಚನ್ನ:—ತಮಗೆ ಮೈಗೆ ಚೆಂದಾಗಿರಲಿಲ್ಲ. ಅದಕೆ 'ಅವರನ್ನ ಕೇಳಬೇಡ. ಚಿಲ್ರೆಪಲ್ರೆ ಬೇಕಾದರೆ ಕರ್ಚು ಮಾಡಿಕೋ!' ಅಂತ ಏಳಿ....

ನಂಜು: ನಿನ್ನ ಖರ್ಚಿಗೇನೋ?

ಚನ್ನ:—ಇಲ್ಲ ಬುದ್ಧೀ....ಇಲ್ಲಿಗೇನಾದರೂ ಬೇಕಾದರೇ....

ನಂಜು:—ಹಾಗಾದರೆ ಇದುವರೆಗೂ ಎಷ್ಟು ಖರ್ಚು ಮಾಡಿದೀ?

ಚನ್ನ:—ಏನೂ ಕರ್ಚು ಮಾಡೇ ಇಲ್ಲ ಬುಡಿ ಬುದ್ಧೀ.

ನಂಜು:—ಮತ್ತೆ ಈ ಎಕ್ಕಡ ಷೂಸ್ ರಿಪೇರೀಗೆ?

ಚನ್ನ:—ಅದಕೆಷ್ಟೂಂತ ಮಾತಾಡಿಲ್ಲ ಬುದ್ಧೀ. ಆ ಮೋಚಿ ನಂಗೆ ಗುರುತು ...ಆಮೇಕೆ ಏನಾದರೂ ಕೊಟ್ಟರಾಯಿತು.

ನಂಜು:—ಭೇಷ್! ಇದೂ ಒಂದು ಯೋಗ! ಏನೇ ಸಾವಿತ್ರೀ!!
[ಸಾವಿತ್ರಮ್ಮನು ಕಣ್ಣೊರಸಿಕೊಂಡು ಬಂದು ಒಳಬಾಗಿಲ ಬಳಿ ನಿಲ್ಲುವಳು.]
ಇನ್ನುಮುಂದೆ ನನ್ನ ಮನೇಲಿ ಕಾಸು ಖರ್ಚು ಮಾಡಬೇಕಾದ್ದೇ ಇಲ್ಲ. ತರ್ಕಾರಿ ಬೇಕಾದರೆ ಚನ್ನ ಹಳ್ಳೀಯಿಂದ ತಂದು ಬಿಡುತಾನೆ; ಉಷ್ಣ ಕ್ರಾಂತಿ ಸೊಪ್ಪೋ—ಕೆಸವೇ ದಂಟೋ—ಯಾವುದು ಸಿಕ್ಕುತ್ತೋ ಅದು; ಜೋಡು ಹೊಲೆಯೋ ಮೋಚಿ ಬಿಟ್ಟ[illegible]ದು ಕೊಡುತಾನೆ. ಮಿಕ್ಕ ಚಿಲ್ರೆ ಖರ್ಚಿಗೇ. ಸೂರಪ್ಪ ಕೊಡುತಾನೆ....ಭೇಷಪ್ಪ! ಚನ್ನಾಗಿದೆ....

ಚನ್ನ:—ಬುದ್ಧೀ ! ಆ ಲಕೋಟಿ ತಂದಿವಿನಿ.

ನಂಜು:—ಹಾಂ! ಆ ಲಕೋಟಿ ಒಡೆಯೋದಕ್ಕೆ ನನಗಿಷ್ಟವಿಲ್ಲ. ಆ ಕಳ್ಳಬಡ್ಡೀಮಗನ ಮಾತು ಕೇಳಿ, ಇದುವರೆಗೂ ಮನೆಯಲ್ಲಿ ಇಲ್ಲದ ಕಾರ್ಪಣ್ಯ ಅನುಭವಿಸಿದ್ದಾಯಿತು. ಇನ್ನು ಅವನ ಲಕೋಟೀನ ಅವನಿಗೇ ವಿ. ಪಿ. ಮಾಡುತೇನೆ.

ಚನ್ನ:—ಯಾಕೆ ಬುದ್ಧೀ ? ಅದು ಅಯ್ಯಾ ಅವರಿಂದ ಬಂದಿರೋ ಕಾಗದ ಅಲ್ಲವರಾ ?

ನಂಜು:—ಅಯ್ಯಾ ಅವರು ಇಂಥ ಮನಸ್ಸು ಮುರಿಯೋ ಅಂಥ ಕಾಗದ ತರಿಸಬೇಡಾಂತ ಹೇಳಿತಿದ್ದರೇ ಹೊರತು, ಇಂಥ ಕಾಗದ ಅವರ ಜನ್ಮದಲ್ಲಿ ಮುಟ್ಟೋರಲ್ಲ.

ಚನ್ನ:—ಪೋಸ್ಟ್ ಮೇಷ್ಟ್ರು 'ಉಸಾರಾಗಿ ತಗೊಂಡೋಗಿ ಕೊಡು. ಬಲು ಮುಖ್ಯವಾದ ಕಾಗದ' ಅಂದರಲ್ಲ ಬುದ್ಧೀ ?

ನಂಜು:—ಅವನೊಬ್ಬ ಬೆಪ್ಪುಲಾಷ್ಟಕ. ಅವನ ಮಾತು ಕೇಳೇ ನನಗೆ ಇವನು ಗಂಟುಬಿದ್ದದ್ದು....ಸಾವಿತ್ರೀ! ತಗೊಂಡು ಹೋಗು ಈ ಸೊಪ್ಪನ ಒಳಕ್ಕೆ; ಹೇಗೂ ನನ್ನ ಗುಟ್ಟೆಲ್ಲಾ ಈ ಚನ್ನನಿಗೂ ಗೊತ್ತಾದ ಹಾಗಾಯಿತು. ಏನು ಚನ್ನಯ್ಯಾ! (ಸಾವಿತ್ರಮ್ಮನು ಸೊಪ್ಪನ್ನೆತ್ತಿಕೊಂಡು ಒಳಕ್ಕೆ ಹೋಗುವಳು) ಬಾ ! ಹೀಗೆ ಬಾ ! ಸ್ವಲ್ಪ ಕಾಲು ಒತ್ತು. ಮೊನ್ನೆ ನೀನು ಕಾಲು ಒತ್ತಿದ್ದಕ್ಕೆ ನಿನ್ನೆಯುಲ್ಲ ನೋವು ಬಹಳ ಕಡಿಮೆಯಾಗಿತ್ತು. ನಿನ್ನೇ "ನಾನೇ ಒತ್ತುತೇನೆ" ಅಂತ ಹಟಮಾಡಿ ಸಾವಿತ್ರೀನೆ ಒತ್ತಿದಳು. ಆದರೆ........

ಚನ್ನ:—ಪಾಪ! ಅವ್ವಾ ಅವರ ಕೈಯಾಗೆ ಈ ಕೆಲಸ ಆಗತೈತ್ರಾ ಬುದ್ಧೀ........

ನಂಜು:—ಹಾಂ! ನಾಲ್ಕು ದಿವಸದ ಕೆಳಗೆ ತೂಕಡಿಸುತಾ ಕಾಲ ಮೇಲೆ ಬಡಿದಿದ್ದೆಯಲ್ಲಾ [illegible]ಲೇನಾ—ಹಾಗೆ ಮಾಡಬೇಡ. ನಾಳೆ ಮತ್ತೆ ನಿನ್ನ ಆ ಹಳ್ಳೀ ಕಡೆಗೆ ಹೋದರೆ ಕೆಸವೇ ದಂಟು ತಗೊಂಡು

ಬಾ. (ಚನ್ನಯ್ಯನು ಬಂದು ನಂಜುಂಡಯ್ಯನ ಕಾಲುಗಳನ್ನು ಒತ್ತುತ್ತಾ ಕೂಡುವನು) ನಿನಗೆ ಕೆಸವೇ ದಂಟು ಇಷ್ಟವಿಲ್ಲವೋ?

ಚನ್ನ:—ತುಂಬಾ ಇಷ್ಟ ಬುದ್ಧೀ.... ನಮ್ಮ ಮನೇಯೋರಿಗೆಲ್ಲಾ ಇಷ್ಟ.

ನಂಜು:—ಹಾಗೇ ಮಾಡು—ನಾಳೆ ಕೂಟು ಮಾಡಿಸುತೇನೆ. ನಿಮ್ಮ ಮನೇಗೆ ಒಂದು ಹತ್ತು ಸೌಟು ತಗೊಂಡು ಹೋಗು.

ಚನ್ನ:—ದಣಿಯೋರ ದಯ ....

(ಇಬ್ಬರು ದೃಷ್ಟಿಸಿ ಮುಗುಳ್ನಗೆ ನಗುವರು)

ನಂಜು:—(ನಿಧಾನವಾಗಿ ಲಕೋಟೆಯನ್ನು ತೆಗೆದುಕೊಂಡು ಒಡೆದು, ಕಾಗದವನ್ನು ತೆಗೆದು ಓದುವನು).

"ಈ ವಾರದಲ್ಲಿ ನಿಮ್ಮ ಆರೋಗ್ಯದ ವಿಚಾರದಲ್ಲಿ ಎಚ್ಚರಿಕೆಯಿಂದ ಇರಬೇಕು. ಔಷಧಿಗಳು ಗುಣ ತೋರದೇ ಹೊದರೂ ಹೋಗಬಹುದು. ಆದರೂ ಪಥ್ಯದಿಂದಿರುವುದು ಒಳ್ಳೆಯದು. ನಿಮ್ಮ ಗೃಹಕೃತ್ಯದಲ್ಲಂತೂ ಎಂದಿಗಿಂತ ಹೆಚ್ಚು ಎಚ್ಚರಿಕೆಯಿಂದಿರಿ. ನಿಮಗೆ ನಿದ್ರಾಹಾರಗಳಲ್ಲಿ ಮನಸ್ಸು ಬಾರದಿರಬಹುದು; ಪಾಚನಶಕ್ತಿ ಕಡಿಮೆಯಾಗಬಹುದು. ಗೃಹಕೃತ್ಯ ಕೆಡಬಹುದು. ನಿಮಗೆ ಈ ಬಗ್ಗೆ ಸೂಚನೆ ಕಂಡುಬಂದ ಕೂಡಲೇ ಈ ಗ್ರಹಚಾರದ ಪ್ರಾಬಲ್ಯವನ್ನು ಹೋಗಲಾಡಿಸಲು, ನಮ್ಮ "ಸಕಲ ಕಷ್ಟ ನಿವಾರಿಣೀ" ಎಂಬ ರಕ್ಷಾಕವಚವನ್ನೂ ಅದನ್ನು ಉಪಯೋಗಿಸುವ ವಿಧಾನವನ್ನೂ ತರಿಸಿಕೊಂಡು ಆಯುರಾರೋಗ್ಯಭಾಗ್ಯವನ್ನು ಪಡೆದು ದೀರ್ಘ ಸುಖಿಗಳಾಗಿ. ಇದಕ್ಕಾಗಿ ನೀವು ಕೂಡಲೇ ಹನ್ನೆರಡು ರೂಪಾಯಿ ಕಳುಹಿಸಿರಿ." (ಸಿಟ್ಟಿನಿಂದ ಸಿಡಿದು) ಹನ್ನೆರಡು ರೂಪಾಯಿ ಕಳುಹಿಸೋದೇ ಏನೂ!.... ನಿನ್ನ ಎದುರಿಗೇ ಬಂದು ಮಾತನಾಡಿಸಿ ಕೊಡುತೇನೆ ಮನೆಹಾಳಾ! ನಿನ್ನ ಸುಳ್ಳು ಭವಿಷ್ಯ ನಂಬಿಕೊಂಡೇ ನಾನೀಗತಿಗೆ ಬಂದದ್ದು; ನೀನು ಕಾಸಿನಾಸೆಗೆ ಇಲ್ಲದ್ದು ಸಲ್ಲದ್ದು ಹೇಳೋದು; ನೀನೇ ಸಾಕ್ಷಾತ್ ಬ್ರಹ್ಮ—ನಮ್ಮ ಹಣೇಲಿ ಬರದವನೂಂತ ನಾವು ನಂಬಿ—ಅದರಂತೆ ಆಗಿಹೋಗದೇ ಇದ್ದರೂ ಆಗಸೋದಕ್ಕೆ ಪ್ರಯತ್ನ ಪಡೋದು—ಆಗುತ್ತೇಂತ

ಹೆದರಿ ತಸಿಸೋದು—ಇದೇ ಒಂದು ರೋಗವಾಗಿ ನಿನ್ನ ತಾಯಿತಗಳೂ, ವಜ್ರಕವಚಗಳೂ ನಮ್ಮ ಬೆನ್ನು ಹತ್ತೋದಕ್ಕೆ ದಾರಿಯಾಗೋದು—ನೀಚ! ಇನ್ನೂ ನೂರು ರೂಪಾಯಿ ಖರ್ಚಾದರೂ ಚಿಂತೆಯಿಲ್ಲ; ಎದುರಿಗೆ ಬಂದು ನಿನಗೆ ಸಂಜೀವಿನೀ ಕುಡಿಸುತ್ತೇನೆ—ದ್ರೋಹೀ! (ಕಾಗದವನ್ನು ಹರಿದು ಚೂರು ಚೂರು ಮಾಡಿ ಎಸೆಯುವನು)....ಈ ಪಾಪಿಯ ಮಾತಿನಿಂದ ಇಲ್ಲದ ಖಾಯಿಲೆ ಊಹಿಸಿಕೊಂಡು, ಎಷ್ಟೆತ್ತಾರು ಔಷಧಿ ಕುಡಿದು, ಪುಡಿ ನುಂಗಿ, ನಿಜವಾಗಿಯೂ ಖಾಯಿಲೆ ತಂದುಕೊಂಡೆ....ಮನೆಯವರನ್ನೆಲ್ಲಾ—ಇದಕ್ಕೆ ಪ್ರತಿ ಹೇಳಿದರೊಂದರೆ....ಶತ್ರುಗಳೊಂತ ತಿಳಿದು....(ತಲೆಯ ಮೇಲೆ ಕೈಯಿಟ್ಟುಕೊಂಡು ಕೂಡುವನು)

ಚನ್ನ:—ಬುದ್ಧೀ!

ನಂಜು: –ಹೌದೂ ಚನ್ನಯ್ಯಾ! ದೇವರಾಣೆಗೂ ಹೌದೂ! ನನ್ನ ಈ ಸ್ಥಿತೀಗೆ ಇವನೇ ಕಾರಣ.

ಚನ್ನ:—ಅಂಗಲ್ಲಾ ಬುದ್ಧೀ. ಆ ಗಳಿಗೆ ಬಂದು ಅಂಗಾಯಿತು. ಅದಕೆ ಯಾರೂ ಜವಾಬ್ದಾರರಲ್ಲ.

ನಂಜು:—(ಆಶ್ಚರ್ಯದಿಂದ) ಚನ್ನಾ!

ಚನ್ನ:—ಔದು ಬುದ್ಧೀ! ಸತ್ಯವಾದ ಇಚಾರ ಏಳುತೀನಿ. ತಾವು ಕೋಪಿಸಿಕೋಬಾರದು. ಸಂಸಾರದಾಗೆ ಇಂಗೆಲ್ಲಾ ಆಗೋದುಂಟು. ಆದರೆ ತಮ್ಮಂಗೆ ಜಾಗ್ರತೆ ಈ ವಿಚಾರಗಳನ್ನೆಲ್ಲಾ ತಿಳಿದು ಸರಿ ಓಗೋರು ಬೋ ಕಡಿಮೆ ಬುದ್ಧೀ.

ನಂಜು:—ಚನ್ನಾ!

ಚನ್ನ:—ಔದೂ ನನ್ನ ದಣಿಯೋ! ಸೂರಪ್ಪನೋರು ಅಯ್ಯಾ ಅವರನೇ ಎಂಥ ದೊಡ್ಡ ಮನಸರೂ ಅಂತ ಏಳಿ ಕೊಂಡಾಡುತಾ ಇದ್ದರು. ತಾವು ನಿಜವಾಗಿಯೂ ಅವರಿಗಿಂತ ದೊಡ್ಡ ಮನಸರೂ ಬುದ್ಧೀ.

ನಂಜು: ನೀನು ನನ್ನ ಸಂಸಾರಕ್ಕೆ ಹೊಸಬಾಂತ ತಿಳಿಕೊಂಡಿದ್ದೆ. ನಿನ್ನ ಮಾತು ಕೇಳುತಾ ಕೇಳುತಾ, ನೀನು ನಮ್ಮ ಮನೆಯ ವಿಚಾರ

ಗಳನ್ನೆಲ್ಲಾ ನಮಗಿಂತ ಸೂಕ್ಷ್ಮವಾಗಿ ತಿಳಕೊಂಡಿದೀಯಾಂತ ತೋರುತ್ತೆ ....ಅದರಿಂದ ಮತ್ತೆ ತಲೆ ಕೆಡುತ್ತೆ .. ಲೋ ಚನ್ನಾ !

ಚನ್ನ:—ಬುದ್ದೀ !

ನಂಜು:—ನೀನು ನಿಜವಾಗಿ ಸೂರಪ್ಪನವರ ಕಡೆಯವನೇನೋ ?

ಚನ್ನ:—ಯಾಕೆ ಬುದ್ಧೀ ?

ನಂಜು:—ಇಲ್ಲಾ, ನಮ್ಮ ತಂದೆ ಏನಾದರೂ ನಿನ್ನ ಇಲ್ಲಿಗೆ ಕೊಟ್ಟು ಕಳಿಸಿದರೋ ?

ಚನ್ನ:—ಬುದ್ದೀ ?

ನಂಜು:—(ರೇಗಿ) ಕೇಳಿದ ಪ್ರಶ್ನೆಗೆ ಉತ್ತರ ಹೇಳೋ ಮಂಕೇ !

ಚನ್ನ:— ಸೂರಪ್ಪನೋರೇ ಕರಕೊಂಡು ಬಂದರಲ್ಲ ಬುದ್ದೀ!

ನಂಜು:—ನಮ್ಮ ತಂದೆಯ ಕಡೆಯಿಂದ ಬಂದೋನೇನಲ್ಲವಲ್ಲಾ ನೀನೂ ?

ಚನ್ನ:— ಚೇಚೇ ! ಪಾಪ ! ಅವರು ಯಾಕೆ ಕಳಿಸೋಕೆ ಓದಾರು ಬುದ್ದೀ ನನ್ನ !

ನಂಜು:—ಹುಂ !

ಚನ್ನ:— ಬುದ್ದೀ ! ಡಾಕಟ್ರು ಪೊಟ್ಟಣ ಕೊಟ್ಟವರೇ— ತಗೊಂಡೋಗ ತಾನೇ ಕೊಡು— ಬಿಸಿ ನೀರಿನಾಗೆ ತಗೊಳ್ಳೇಂತ—ಅದರಿಂದ ತಲೆ ನೋವು ನಿಂತೋಗಿಬಿಡತ್ತೆ ತೇಂತ— ಹಳಿದರು.

ನಂಜು:—ಹೌದೌದು. ಈ ಅಷ್ಟ ಕಸುಬೀನ ನಂಬಿಕೊಂಡು, ಖರ್ಚಾಗದ ಅವನ ಪುಡಿ ಔಷಧಿಗಳನ್ನೆಲ್ಲಾ ನಾನೇ ನುಂಗಿ, ಮೈ ಕೆಡಿಸಿ ಕೊಂಡದ್ದಾಯಿತು. ಸಾಕಿನ್ನವನ ಪುಡಿ. ತಲೆ ನೊಂದರೆ ನೋಯಲಿ; ಇನ್ನದಕ್ಕೆಲ್ಲಾ ಬೇರೆ ವೈದ್ಯನೇ ಸರಿ.

ಚನ್ನ:—ಏನು ಬುದ್ದೀ ?

ನಂಜು:—ನಮ್ಮ ತಂದೆ ಹೇಳುತ್ತಿದ್ದ ಹಾಗೆ, ಮನಸ್ಸನ್ನ ಶಾಂತವಾಗಿ ಟ್ಟುಕೊಂಡಿರೋದು; ಹೆಚ್ಚು ಕಡಿಮೆಗಳಿಗಾಗಿ ಹೆಚ್ಚಾಗಿ ಮನಸ್ಸಿಗೆ ಮುಜು ಗರ ತಂದುಕೊಳ್ಳದೆ. ನಗುತ ನಗುತ ಇರೋದು ; ಈ ಪ್ರಪಂಚದಲ್ಲಿ

ನಮ್ಮ ಬಾಳು ನಾಲ್ಕು ದಿನದ್ದು ಅನ್ನೋದನ್ನ ತಿಳಕೊಂಡು, ಇರೋ ವರೆಗೂ ನಮ್ಮ ಸುತ್ತಮುತ್ತಿನವರ ಸಂಗಡ ಸಮಾಧಾನ ಸಂತೋಷ ಗಳಿಂದಿರೋದು. ಶಾಂತಿ ಸಮಾಧಾನಗಳನ್ನ ಸಂಪಾದಿಸಿ ಬಾಳೋದಕ್ಕೆ ತಕ್ಕಹಾಗೆ ಪ್ರಯತ್ನ ಪಡೋದು....(ಬರಬರುತ್ತಾ ಧ್ವನಿ ಸ್ವಗತವಾಗುವುದು) ಈಗ ಅರ್ಥವಾಗುತಾ ಇವೆ— ಅವನ ಮಾತುಗಳು. ಅಂತೂ ಇಷ್ಟಾಗುವ ವರೆಗೂ ಅವನ ಮಾತುಗಳಲ್ಲಿ ನಂಬಿಕೆ ಹುಟ್ಟಿರಲಿಲ್ಲ. ಮನಸ್ಸು ಸಮಾ ಧಾನವಾಗಿದ್ದಾಗ ಅದರಲ್ಲಡಗಿರೋ ಮೊಸಳೆಗಳೂ, ತಿಮಿಂಗಿಲಗಳೂ ಸ್ಪಷ್ಟವಾಗಿ ಕಾಣಿಸುತ್ತವೆ. ಅವುಗಳನ್ನೆಲ್ಲಾ ಒಟ್ಟಿಗೆ ಕೊಂದುಹಾಕ ಬೇಕು ಅನ್ನಿಸುತ್ತೆ. ಮನಸ್ಸು ಕಲಕಿಹೋದಾಗ, ತಾನೇ ತಾನಾಗಿ ನಮ್ಮನ್ನ ದಿಕ್ಕಾಪಾಲಾಗಿ ಕುಣಿಸುತ್ತವೆ .. (ಕೇಳುತ್ತ ಕೇಳುತ್ತ ಲಿಂಗಪ್ಪಯ್ಯನ ಕೈಗಳು ಕೆಲಸ ಮಾಡಲಾರದೆ ನಿಂತ ಬಿಡುತ್ತವೆ. ಕಣ್ಣುಗಳಲ್ಲಿ ನೀರು ತುಂಬಿ ಪ್ರೇಮಭರದಿಂದ ನಂಜುಂಡಯ್ಯನ ಪಾದಗಳ ಮೇಲೆ ತಲೆಯಿಡುತ್ತಾನೆ. ನಂಜುಂ ಡಯ್ಯನು ಸನ್ನನೆ ಮುನಿದು) ತೂಕಡಿಸುತ್ತಿದ್ದೀಯೋನೋ ಕತ್ತೇ !! (ಝಾಡಿಸಿ ಒದೆಯುವನು. ಲಿಂಗಪ್ಪಯ್ಯನು 'ಅಮ್ಮಾ' ಎಂದು ಹಿಂಪಕ್ಕುರುಳುತ್ತಾನೆ. ಒಳ ಬಾಗಿಲಿನಿಂದ ಓಡಿಬಂದ ಸಾವಿತ್ರಮ್ಮನು—ಲಿಂಗಪ್ಪಯ್ಯನು ಎದೆಯ ಮೇಲೆ ಕೈಯಿಟ್ಟು ಕೊಂಡು ಏಳುತ್ತಿರುವುದನ್ನೂ, ಅವನ ಕಣ್ಣುಗಳಲ್ಲಿ ನೀರನ್ನೂ ನೋಡಿ 'ಮಾವಯ್ಯಾ! ಏನಾಯಿತು?' ಎಂದು ಕೈಹಿಡಿದೆಬ್ಬಿಸುತ್ತಿರುತ್ತಾಳೆ.)

ಲಿಂಗ:—(ಗದ್ಗದಿತನಾಗಿ) ಏನೂ ಆಗಲಿಲ್ಲಾ ತಾಯಿ !! ಈವತ್ತಿಗೆ ನನ್ನ ದೇವರು ನಂಜುಂಡೇಶ್ವರ ನನ್ನ ಸೇವೆಗೆ ಮೆಚ್ಚಿ ಪ್ರಸನ್ನನಾದನಮ್ಮ ಸಾವಿತ್ರೀ! ಇನ್ನು ನನ್ನ ಮನೆ ಉದ್ಧಾರವಾಯಿತಮ್ಮಾ! ಇಂದಿನಿಂದ ನಿನ್ನೀ ಮನೆ ನಂದಗೋಕುಲವಾಯಿತಮ್ಮಾ !!

ನಂಜು: —[ದಿಗ್ಭ್ರಾಂತನಾಗಿ] ಅಪ್ಪಾ !! [ಚೀರುವನು]

[**ಹೊರಗಡೆಯಿಂದ** ಬಾಗಿಲು ತೆರೆದುಕೊಂಡು **ಸುಂದರೂ, ಸೂರಪ್ಪ** ನುಗ್ಗಿಬರುವರು]

ಸುಂದರ:— ಅಣ್ಣಾ ! [ನಂಜುಂಡಯ್ಯನ ಪಾದಗಳ ಮೇಲೆ ಬೀಳುವನು. ಗದ್ಗದಿತನಾಗಿ] ನನ್ನ ತಪ್ಪನ್ನೆಲ್ಲಾ ಮನ್ನಿಸು. ನನಗೆ ತಾತನ ಕಾಗದ ಬಂದು ಅದನ್ನ ಶಾಂತವಾಗಿ ಓದಿದ ಮೇಲೆ, ನನ್ನಿಂದ ಎಂಥ ಮಾತಾ ಪಿತೃದ್ರೋಹ ವಾಯಿತು ಅನ್ನೋದು ತಿಳೀತು. ಅಣ್ಣಾ ! ನಾನು ಪಾಪಿ !

ನನ್ನ ತಪ್ಪನ್ನು ಕ್ಷಮಿಸು. ನೀನು ನನ್ನನ್ನು ಒದ್ದರೂ, ತಳ್ಳಿದರೂ ನಾನು ಈ ಪಾದಗಳನ್ನ ಬಿಟ್ಟು ಕದಲೊಲ್ಲ. ಇಂದಿನಿಂದ ನಿನ್ನ ಮಾತೇ ನನಗೆ ವೇದವಾಕ್ಯ. ನಿನಗೆ ಸಂತೋಷವಾಗೋ ಪಕ್ಷಕ್ಕೆ, ನಾನು ಆ ಡಾಕ್ಟರ ಕಾಲಿಗೇ ಅಲ್ಲ, ಬೀದೀಲಿ ಹೋಗುತಿರೋ ನಾಯಿ ಕಾಲಿಗಾದರೂ ಬೀಳು ತೇನಣ್ಣ ! ನಿನಗೆ ಒಪ್ಪಿಗೆ ಆಗಿರೋ ಪಕ್ಷಕ್ಕೆ ಗೌರತ್ತೇ ಮಗಳನ್ನೇ ಮದುವೆ ಮಾಡಿಕೊತೇನಣ್ಣ. ಆ ದಿನ ನಿನ್ನ ಸಂಗಡ ಎದುರು ವಾದಿಸಿದ ಅಪ ರಾಧಕ್ಕೆ ನೀನು ಕೊಡೋ ಶಿಕ್ಷೆ ಅನುಭವಿಸೋದಕ್ಕೆ ಸಿದ್ಧನಾಗಿದ್ದೀನಣ್ಣ ! ನನ್ನನ್ನ ಒಂದು ಸಲ 'ಸುಂದರೂ' ಅಂತ ಕೂಗಿಬಿಡಣ್ಣ ಸಾಕು. ಅಣ್ಣಾ! ಅಣ್ಣಾ ! [ಕತ್ತೆತ್ತುವನು—ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಸುರಿಯುತ್ತಿರು ವುದು. ಕಂಬದಂತೆ ನಿಶ್ಚೇಷ್ಟಿತನಾಗಿ ನಿಂತ ನಂಜುಂಡಯ್ಯನ ಕಣ್ಣುಗಳಿಂದಲೂ ನೀರು ಕೋಡಿಯಾಗಿ ಹರಿಯುತ್ತಿರುವುದು]

ನಂಜು:—ಅಪ್ಪಾ ! ಅಪ್ಪಾ !!... [ಗದ್ಗದಿತನಾಗಿ ಮಾತು ಹೊರಡ ದಾಗುವುದು. ಸಾವಿತ್ರಮ್ಮನು ಸುಂದರನನ್ನೆಬ್ಬಿಸಿ ಅಪ್ಪಿ ಸಮಾಧಾನಪಡಿಸುವಳು.]

ಲಿಂಗ:—[ಹತ್ತಿರ ಬಂದು ನಂಜುಂಡಯ್ಯನನ್ನಪ್ಪಿ] ಇಂದಿಗೆ ನನ್ನ ಜನ್ಮ ಸಾರ್ಥಕವಾಯಿತು ನಂಜೂ ! ನನ್ನ ಮನೆ ದೇವರು ಪ್ರಸನ್ನನಾದ!!

ನಂಜು:—[ಕುಳಿತು ಲಿಂಗಪ್ಪಯ್ಯನ ಕಾಲುಗಳನ್ನು ಹಿಡಿದು ಅಪ್ಪಿ] ಅಯ್ಯೋ! ನಾನೆಂಥ ಪಾಪಿಯಾದೆ!! ಎಂಥ ಚಂಡಾಲನಾದೆ ! ಅಪ್ಪಾ ! ದೇವರಂಥ ತಂದೆಯ ಕೈಲಿ ಕಾಲು ಹಿಸಿಕಿಸಿಕೊಂಡು, ಸಮಸ್ತ ಸೇವೆಗ ಳನ್ನೂ ಮಾಡಿಸಿ ಕೊಂಡು, ಕಡೆಗೆ ಈ ಪಾಪಿ ಕಾಲುಗಳಿಂದಲೇ ನಿಮ್ಮನ್ನ ಒದ್ದೆನಲ್ಲಾ !! ಅಯ್ಯೋ ! ನನಗೆ ನರಕದಲ್ಲೂ ಜಾಗವಿಲ್ಲ. (ಬಿಕ್ಕುವನು)

ಲಿಂಗ:—(ಹಿಡಿದೆತ್ತಿ ಅಪ್ಪಿ) ಮಗೂ ! ನಂಜು ! ನೀನು ಸುಂದರನನ್ನ ಕ್ಷಮಿಸಿಬಿಡು ! ನಿನ್ನ ಪರಾಧಗಳನ್ನೆಲ್ಲಾ ನಾನು ಮನ್ನಿಸತೇನೋ ಅಪ್ಪಾ! ನಂಜೂ ! ನೀನು ಪರಿಶುದ್ಧವಾದೆಯೋ ನಂಜು ! ಇನ್ನು ಮುಂದೆ ನೀನು ನಿಜವಾಗಿಯೂ ನಂಜುಂಡೇಶ್ವರ ! ನಾನು ನಿನ್ನ ನಂಜೂಂತ ಕರೆಯೋದು ತಪ್ಪು ! ನೀನು ನಂಜುಂಡ ಈಶ್ವರಪ್ಪಾ ! ಇಷ್ಟು ಶುದ್ಧವಾದ ನಿನ್ನ ಪಾದ ಸ್ಪರ್ಶದಿಂದ ನಾನು ಪರಿಶುದ್ಧನಾದೆ ಮಗೂ ! ನೀನು ಮಗುವಾಗಿದ್ದಾಗ

ಎಷ್ಟು ಒಧ್ದಿದ್ದೆಯೋ! ಈವತ್ತು ಒದ್ದದ್ದು ಅದೆಲ್ಲಾಕ್ಕಿಂತ ಹಿತವಾಗಿತ್ತೋ ಅಪ್ಪಾ! ಭೃಗುಮಹರ್ಷಿಗಳು ವಿಷ್ಣುವಿನ ಎದೆಗೆ ಒದೆಲಿಲ್ಲವೇ ಅಪ್ಪ!!

ನಂಜು:— ಅಪ್ಪಾ! ಸುಂದರೂ!! (ಸುಂದರೂ ಓಡಿಬರುವನು. ಅವ ನನ್ನಪ್ಪನನು; ಅವನ ತಲೆಯ ಮೇಲೆ ಗಲ್ಲವಿಟ್ಟು ಕಂಬನಿದುಂಬುವನು)

ಸೂರ:— ಲಿಂಗಪ್ಪಯ್ಯನವರೇ! ಈ ದಿನವೇ ಮಹಾದಿನ! ನನ್ನ ಜನ್ಮದಲ್ಲಿ ಅಸಾಧ್ಯವೆಂದು ತಿಳಿದದ್ದನ್ನ ನಿಮ್ಮ ಶಾಂತಿಮಾರ್ಗದಲ್ಲೇ ಸಾಧಿಸಿ ತೋರಿಸಿದಿರಿ. ನೀವು ಪೂಜ್ಯರು!! (ನಮಸ್ಕರಿಸುವನು)

ಲಿಂಗ:— ಎಲ್ಲಾ ಈಶ್ವರನ ಸಂಕಲ್ಪ! ಮನುಷ್ಯನ ಸಂಸ್ಕಾರದ ಸತ್ಯದಲ್ಲಿರೋ ಶ್ರದ್ಧೆಯ ಫಲ; ಅಷ್ಟೇ ಸೂರಪ್ಪ! ನಿನ್ನಂಥ ಮಿತ್ರನ ಸಹಾಯದಿಂದ ಇಂಥಾ ಮಂಗಳಪರಿವರ್ತನೆ ಸಾಧ್ಯವಾಯಿತಪ್ಪ.

(ಸಾವಿತ್ರಮ್ಮನು ಆನಂದಬಾಷ್ಪಗಳಿಂದ ಕೂಡಿ ಲಿಂಗಪ್ಪಯ್ಯ, ನಂಜುಂಡಯ್ಯ, ಸುಂದರು, ಒಬ್ಬರನ್ನೊಬ್ಬರು ಅಪ್ಪಿ ನಿಂತಿರುವುದನ್ನು ನೋಡುತ್ತಾ ನಿಂತಲ್ಲಿಯೇ ದೇವರನ್ನು ಕೃತಜ್ಞತೆಯಿಂದ ಸ್ಮರಿಸುವಳು.)